ಶಿವಶರಣೆಯರ ವಚನಗಳಲ್ಲಿ ಪರಿಸರ ಪ್ರಜ್ಞೆ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ

ಎಂ. ಫಿಲ್ ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು :

ರೇಣುಕಾದೇವಿ ಬಸವರಾಜ.

...ನ ಮಾರ್ಗದರ್ಶಕರು :

...ಾ (ಪ್ರೇಮಿಳಾ) ಸಿರ್ಸೆ

ಎಂ. ಎ., ಪಿ.ಎಚ್.ಡಿ.

...ತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ - ೫೮೩ ೨೭೬

ಸೆಪ್ಟೆಂಬರ್ - ೨೦೦೯

690

ಶಿವಶರಣೆಯರ ವಚನಗಳಲ್ಲಿ ಪರಿಸರ ಪ್ರಜ್ಞೆ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ

ಎಂ. ಫಿಲ್ ಅಂಶಿಕ ಪದವಿಗಾಗಿ ಸಲ್ಲಿಸುತ್ತಿರವ ನಿಬಂಧ)

ಸಂಶೋಧಕರು :

ರೇಣುಕಾದೇವಿ ಬಸವರಾಜ.

ಸಂಶೋಧನ ಮಾರ್ಗದರ್ಶಕರು :

ಡಾ. ಪ್ರೇಮಾ (ಪ್ರೇಮಿಳಾ) ಸಿರ್ಸೆ

ಎಂ. ಎ., ಪಿ.ಎಚ್.ಡಿ.

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ – ೫೮೩ ೨೭೬

ಸೆಪ್ಟೆಂಬರ್ – ೨೦೦೯

<u>ಪ್ರಮಾಣ ಪತ್ರ</u> :

"ಶಿವಶರಣೆಯರ ವಚನಗಳಲ್ಲಿ ಪರಿಸರ ಪ್ರಜ್ಞೆ" ಎಂಬ ನಿಬಂಧವನ್ನು ಡಾ. ಪ್ರೇಮಾ ಸಿರ್ಸೆ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿ ಎಂ.ಫಿಲ್. ಪದವಿಗಾಗಿ ಕ.ರಾ.ಶಿ ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳಃ ಬೀದರ
ದಿನಾಂಕಃ ೩೦-೦೯-೨೦೦೯

ರೇಣುಕಾದೇವಿ ಬಸವರಾಜ
ಎಂ.ಫಿಲ್. ವಿದ್ಯಾರ್ಥಿನಿ
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ
ಸಂಶೋಧನ ಕೇಂದ್ರ, ಬೀದರ

ಮಾರ್ಗದರ್ಶಕರ ಪ್ರಮಾಣ ಪತ್ರ

"ಶಿವಶರಣೆಯರ ವಚನಗಳಲ್ಲಿ ಪರಿಸರ ಪ್ರಜ್ಞೆ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ರೇಣುಕಾದೇವಿ ತಂದೆ ಬಸವರಾಜ, ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೩೦-೦೯-೨೦೦೯
ಸ್ಥಳ : ಬೀದರ.

ಡಾ. ಪ್ರೇಮಾ (ಪ್ರೇಮಿಳಾ) ಸಿರ್ಸೆ
ಎಂ.ಎ., ಪಿ.ಎಚ್.ಡಿ.
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ.

ಪರಿವಿಡಿ :

ಶಿವಶರಣೆಯರ ವಚನಗಳಲ್ಲಿ ಪರಿಸರ ಪ್ರಜ್ಞೆ:

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಶಿವಶರಣೆಯರ ವಚನಗಳಲ್ಲಿ ಪರಿಸರ ಪ್ರಜ್ಞೆ

ಅಧ್ಯಾಯ- ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ:

ಭಾರತ ದೇಶದ ಹಲವಾರು ರಾಜ್ಯಗಳಲ್ಲಿ ಒಂದಾದ ನಮ್ಮ ಕನ್ನಡ ನಾಡು ಇದನ್ನು ಕರ್ನಾಟಕ ಎಂದು ಸಹ ಕರೆಯುತ್ತೆವೆ. ಕರ್ನಾಟಕ ಎಂದರೆ ಎತ್ತರವಾದ ನಾಡು, ಕೆಂಪು ಭೂಮಿಯ ನಾಡು ಈ ನಾಡಿನ ಮಣ್ಣಿನ ಪ್ರತಿಯೊಂದು ಕಣ ಕಣದಲ್ಲೂ ಒಂದು ವಿಶಿಷ್ಟ ಶಕ್ತಿ ಇದೆ. ಅಂತೆ ಕನ್ನಡಾಂಬೆ ಇಡೀ ಜಗತ್ತಿನಲ್ಲೆ ತನ್ನ ಹೆಸರು ಪಡೆದಿದ್ದಾರೆ.

ಕನ್ನಡನಾಡು ಪ್ರಕೃತಿ ಸೌಂದರ್ಯದ ನೆಲೆಬಿಡು ಒಂದು ಕಡೆ ಮಲೆನಾಡಿನ ತಪ್ಪಲುಗಳ ಸೊಬಗು ಕಂಡರೆ ಇನ್ನೊಂದೆಡೆ ಕರಾವಳಿಯ ಸಾಲು, ಆಗುಂಬೆಯ ಶಿಖರ, ಜೋಗದ ಝೂಕು, ಶೃಂಗೇರಿಯ ಶಿಖರ ಹೀಗೆ ಒಂದೇ ಎರಡೇ ಎಲ್ಲಿ ನೋಡಿದರಲ್ಲಿ ಬೆಟ್ಟ -ಗುಡ್ಡಗಳ ಸಾಲು, ಗಿರಿವನ, ನದಿಗಳ ಸೌಂದರ್ಯದ ಬೀಡು.

ಆಕಾಶದ ಎತ್ತರಕ್ಕೆ ಬೆಳೆದು ನಿಂತ ಬಿದಿರು, ಅಡಿಕೆ, ತೆಂಗಿನ ಮರಗಳು ರಸಭರಿತ ಹಣ್ಣುಗಳಿಂದ ತುಂಬಿದ ಮಾವು, ಹಲಸು, ಬಾಳೆ, ಮುಂತಾದ ಮರಗಳು ಇವುಗಳ ಮೇಲೆ ಪಕ್ಷಿಗಳ ಚಿಲಿ-ಪಿಲಿ ಕಲರವ ಕೇಳುವ ಕಿವಿಗಳಿಗೆ ಮುದವನ್ನು ನೀಡುತ್ತವೆ. ಇದಕ್ಕೆ ಪುರಕವೆಂಬಂತೆ ಅಲ್ಲಲ್ಲಿ ಹರಿಯುವ ನದಿಗಳ ಮಂಜುಳ ಜುಳು-ಜುಳು ನಾದ ಕನ್ನಡಿಗರ ಜೀವ ನದಿಗಳಾದ ಕಾವೇರಿ, ಕೃಷ್ಣ, ತುಂಗೆ, ಶರಾವತಿ, ಈ ನದಿಗಳು ನಾಡಿನಲ್ಲಿ ಬೆಳಕನ್ನು ಹರಿಸಿವೆ. ಇದರ ಅಕ್ಕ ಪಕ್ಕದಲ್ಲಿ ಬೆಳೆದು ನಿಂತ ಗಿಡ-ಮರಗಳು ಮತ್ತು ಈ ಮರಗಳ ಮಡಿಲಿನ ಸ್ವಚ್ಛಂದವಾಗಿ ಓಡಾಡುವ ಪ್ರಾಣಿ, ಪಕ್ಷಿಗಳ ಸಂಕುಲಗಳು.

ಇಂತಹ ಸೃಷ್ಟಿಯ ಸೊಬಗಿನ ಸೌಂದರ್ಯವನ್ನು ಸವಿಯುತ್ತ ಬೆಳೆದ ಕನ್ನಡಿಗರ ಪ್ರತಿ ಹೃದಯದಲ್ಲಿ ಕವಿತ್ವದ ಭಾವನೆ ತುಂಬಿ ತುಳುಕುತ್ತದೆ. ಅಂತೆ ನಮ್ಮ ಕನ್ನಡ ನಾಡಿನಲ್ಲಿ ಆಗಿ ಹೋದ ಅನೇಕ ಮಹಾನ ಕವಿ ಪುಂಗರು, ಶರಣ ಶರಣೆಯರು, ದಾಸರನ್ನು ನಾವು ಕಾಣುತ್ತೇವೆ. ಸುಮಾರು ೧೦ನೇ ಶತಮಾನದಲ್ಲಿ ಬಾಳಿ ಬದುಕಿದ ಪಂಪ, ಪೊನ್ನ, ರನ್ನ, ಜನ್ನ, ಮುಪ್ಪಿನ ಷಡಕ್ಷರದೇವ, ಮುಂದೆ ೧೨ನೇ ಶತಮಾನಕ್ಕೆ ಬಂದರೆ ಇಡೀ ವಿಶ್ವಕ್ಕೆ ಹೊಸ ಸಾಹಿತ್ಯವನ್ನು ಸೃಷ್ಟಿಸಿ ಕೊಟ್ಟ ನಮ್ಮ ಶರಣ ಶರಣೆಯರ ಸಾಧನೆ ಅದ್ಭುತವಾದದ್ದು.

ಅಧ್ಯಾಯನದ ಉದ್ದೇಶ:

ಇಲ್ಲಿಯವರೆಗೆ ಸಾಹಿತ್ಯ, ಎಂದರೆ ಬರಿ ಶ್ರೀಮಂತರ ಮತ್ತು ಪುರುಷರ ಸ್ವತ್ತಾಗಿತ್ತು. ಇದನ್ನು ಅಲ್ಲಗಳೆದು ಶರಣರು ಕನ್ನಡ ಮಣ್ಣಿನಲ್ಲಿ ಹುಟ್ಟಿದ ಪ್ರತಿಯೊಂದು

ಜೀವಿಯ ಕಣ ಕಣದಲ್ಲಿ ಈ ಗುಣವಿದೆ ಎಂದು ಸಾರಿದ ನಮ್ಮ ಶರಣ ಶರಣೆಯರು ತಾವು ಕಂಡುಂಡ ಅನುಭವಗಳನ್ನು ಅನೇಕ ನಿದರ್ಶನದ ಮೂಲಕ ತಿಳಿಸುತ್ತಾ ನಮ್ಮ ಸಮಾಜಕ್ಕೆ ವಚನ ಸಾಹಿತ್ಯವನ್ನು ಋಣಬಡಿಸಿದ್ದಾರೆ. ಅಷ್ಟೆ ಅಲ್ಲಾ ಮುಂಬರುವ ಕವಿಗಳಾದ ರಾಘವಾಂಕ, ರತ್ನಾಕರವರ್ಣಿ, ಸರ್ವಜ್ಞ ಮತ್ತು ಹೊಸಗನ್ನಡ ಸಾಹಿತ್ಯದ ಮುಂಗೋಳಿಯಾದ ಮುದ್ದಣ. ಬಿ.ಎಂ.ಶ್ರೀ., ತಿ.ನಂ.ಶ್ರೀ., ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತರು, ಪೂರ್ಣಚಂದ್ರ ತೇಜಸ್ವಿ, ಜಿ. ಎಸ. ಶಿವರುದ್ರಪ್ಪಾ, ನಿಸ್ಸಾರ ಅಹ್ಮದ ಹೀಗೆ ಒಬ್ಬರೇ ಇಬ್ಬರೇ ? ಕನ್ನಡದ ಮಣ್ಣಿನ ಪ್ರತಿ ಮಕ್ಕಳಲ್ಲಿ ಈ ಗುಣ ಕಾಣುತ್ತೇವೆ. ಅಂತೆ ನಮ್ಮ ಮೊದಲ ಉಪಲಬ್ಧ ಕೃತಿಯಾದ ಕವಿರಾಜ್ಯ ಮಾರ್ಗದಲ್ಲಿ ಶ್ರೀವಿಜಯನು ಕನ್ನಡ ನಾಡಿನ ಸೌಂದರ್ಯವನ್ನು ವರ್ಣಿಸುತ್ತಾ ಹಾಡಿ ಹೊಗಳಿದ್ದಾನೆ.

"ಕುರಿತೋದದೆಯುಂ ಕಾವ್ಯ ಪ್ರಯೋಗ ಮತಿಗಳ ಕನ್ನಡಿಗರು" ಅಂದರೆ ಕನ್ನಡ ನಾಡಿನ ಜನರಲ್ಲಿ ಈ ಜಾಣ್ಮೆ ಬರಲು ಕಾರಣ ಇಲ್ಲಿಯ ಪ್ರಕೃತಿಯ ಪ್ರತಿಯೊಂದು ವಸ್ತು ಕಾರಣ ಈ ನೆಲ, ಜಲ, ಮಣ್ಣಿನಲ್ಲಿ ಆ ಶಕ್ತಿ ಇದೆ. ಈ ಜನ ಪ್ರಕೃತಿಯ ಸೊಬಗನ್ನು ಸವಿದು ಅದನ್ನು ತಮ್ಮ ಕಾವ್ಯದ ಮೂಲಕ ಜನರಿಗೆ ತಿಳಿಸುವರು ಎಂದು ಹೇಳಿದ್ದಾನೆ.

"ಕ್ರಿ.ಶ ೧೨ನೇ ಶತಮಾನದಲ್ಲಿ ಆಗಿ ಹೋದ ಶಿವಶರಣರ ಸಾಮಾಜಿಕ, ಧಾರ್ಮಿಕ ಹೋರಾಟವನ್ನು ಇಂಗ್ಲೀಷನಲ್ಲಿ Revolution/Movement (ಕ್ರಾಂತಿ ಅಥವಾ ಆಂದೋಲನ) ಎಂದು ಕರೆದರು"[೧]. ಸಂಪ್ರದಾಯದ ಮೌಢ್ಯತೆಯಲ್ಲಿ ಸಿಲುಕಿದ ಜನರಿಗೆ ಸತ್ಯಮಾರ್ಗ ತೋರಿದರು. ಸತ್ಯವೇ ಶ್ರೇಷ್ಠವಾದದ್ದು, ವಾಸ್ತವಿಕವಾದದ್ದು ಎಂಬ ನೈಜ ವಾಸ್ತವ ಪ್ರಜ್ಞೆ ಮೂಡಿಸಿದರು. ಪ್ರಕೃತಿಯನ್ನು ಅತಿ ಹತ್ತಿರದಿಂದ ಕಂಡ ಇವರು ತಮ್ಮ ವಚನಗಳಲ್ಲಿ ಪ್ರಕೃತಿಯ ಪ್ರತಿಯೊಂದು ವಸ್ತುವಿನ ಮಹತ್ವ ತಿಳಿಸಿದರು. ಇವರ ಈ ಪ್ರಜ್ಞೆ ವೈಜ್ಞಾನಿಕ ವಸ್ತುವಿಗೂ ಸಹ ಹೋಲಿಸಿ ನೋಡಿದರು ನಿಜವನ್ನೇ ಪ್ರತಿಪಾದಿಸುತ್ತದೆ. ಪ್ರತಿಯೊಂದು ವಸ್ತುವನ್ನು ಸೂಕ್ಷ್ಮವಾಗಿ ಗಮನಿಸಿ ಅದರ ಚಲನ ವಲನಗಳಿಗೆ ಹೋಲಿಕೆ ನೀಡಿ ತಮ್ಮ ವಚನಗಳನ್ನು ರಚಿಸಿದ್ದಾರೆ. ಅಂತೆ ನಮ್ಮ ಶಿವಶರಣರು ಪ್ರಕೃತಿಯನ್ನು ಕುರಿತು ಅನೇಕ ವಚನಗಳಲ್ಲಿ ತಿಳುವಳಿಕೆಯನ್ನು ಮೂಡಿಸಿದ್ದಾರೆ. ಪ್ರಕೃತಿ ಎಂದರೆ ಭೂಮಿಯ ಮೇಲಿರುವ ಸಕಲ ಜೀವಾತ್ಮಗಳ ಕುರಿತು ಹೇಳುತ್ತಾರೆ. ಅವುಗಳ ಲೇಸನ್ನೇ ಬಯಸುವವರು ಪ್ರಕೃತಿಯ ಪ್ರತಿಯೊಂದು ವಸ್ತು ನಮ್ಮ ಜೀವನಕ್ಕೆ ನಿದರ್ಶನಗಳಾಗಿ ನಿಲ್ಲುತ್ತವೆ.

ಒಂದೆಡೆ ಕೂಡಿಬಾಳುವ ಸಹಕಾರ ಎಂಬುವುದು ಸಹಜ ಗುಣಧರ್ಮ ಅದು ಪಶು-ಪಕ್ಷಿ ಪ್ರಾಣಿಗಳಲ್ಲಿಯೂ ಸಹ ಇರುತ್ತದೆ ಎಂದು ಸಾರುವುದಕ್ಕೆ ಸಾಕ್ಷಿಯಾಗಿ ನಿಂತ ಬಸವಣ್ಣನವರ ಈ ವಚನ.

೧. ಡಾ. ಮ.ಜರಯ್ಯಾ -೧೯೯೭ ದಲಿತವರ್ಗದ ಶರಣರು ಮತ್ತು ಶರಣೆಯರು -ಪುಟ-೩

“ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ
ಬಳಗವನು ?
ಕೋಳಿ ಒಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ
ಕುಲವನೆಲ್ಲಾ
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ
ಕರಕಷ್ಟ
ಕೂಡಲಸಂಗಮದೇವಾ”೧.

ಈ ವಚನ ಪ್ರಾಣಿಗಳಲ್ಲಿರುವ ಸಹಕಾರ ಭಾವ ಹೇಳಿವರೆ ಮತ್ತು ಪ್ರತಿಯೊಂದು ವಸ್ತುವಿನ ನಿಕಟ ಸಂಬಂಧ ಹೇಳುವರು.

ಅಕ್ಕನ ವಚನದಲ್ಲಿ

“ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ”.

ಎಂದು ಹೇಳುವಲ್ಲಿ ಜೀವಿಗಳ ಅನನ್ಯ ಸಂಬಂಧದ ಬಗ್ಗೆ ಹೇಳುತ್ತವೆ. ಮುಂದೆ ಬಂದ ನಮ್ಮ ದಾಸ ಸಾಹಿತಿಗಳು ಏಕತೆಯ ಮನೋಭಾವ ಮೂಡಿಸುವ ತಮ್ಮ ಕೀರ್ತನೆಗಳನ್ನು ರಚಿಸಿ ಅದರ ಮೂಲಕ ತಿಳುವಳಿಕೆಯ ಪಾಠವನ್ನು ನೀಡುತ್ತಾರೆ. ಪ್ರಕೃತಿಯ ಪ್ರತಿಯೊಂದು ವಸ್ತು ಹುಟ್ಟು ಒಂದೇ ತೆರನಾಗಿರುತ್ತದೆ ಅದು ಬಂದದ್ದು ಹೊಲಸಿನಿಂದಾದರೂ. ಅದರ ಬೆಳವಣಿಗೆ ನಡೆ, ನುಡಿ, ಸರಿ ಇರಬೇಕೆಂದು ಹೀಗೆ ಹೇಳುತ್ತಾರೆ.

“ಕೆಸರೊಳು ತಾವರೆ ಹುಟ್ಟಲು ಅದು ತಂದು
ಕುಸುಮನಾಭನಿಗೆ ಅರ್ಪಿಸರೇನಯ್ಯ,
ಪಶುವಿನ ಮಾಂಸದೊಳು ಉತ್ಪತ್ತಿಯಾದ
ಕ್ಷೀರವ ವಸುದೆಯೊಳಗೆ ಅರ್ಪಿಸರೇನಯ್ಯ! ”

ಎಂದು ದಾಸರು ಪ್ರಕೃತಿಯ ಪ್ರತಿಯೊಂದು ವಸ್ತುವು ಪೂಜ್ಯನೀಯ ಎನ್ನುತ್ತಾರೆ. ಸೃಷ್ಟಿಕರ್ತನು ಯಾವ ವಸ್ತುವಿನಲ್ಲಿಯು ಭೇದ ಕಾಣನು ಮಾನವರಲ್ಲಿ ಈ ಭೇದ ಸಲ್ಲದು ಎಂದು ಸಾರುತ್ತಾರೆ. ನಮ್ಮ ಶರಣರು ಮತ್ತು ದಾಸರು. ಅಂದು ಆ ಶರಣರು, ಸಂತರು ಸಾರಿ ಹೇಳಿದ ಈ ವಿಷಯ ಇಂದಿನ ನಮ್ಮ ಸಮಾಜಕ್ಕೆ ಎಷ್ಟು ಸೂಕ್ತವಾಗಿದೆ. ಅವರ ಪರಿಸರ ಪ್ರೇಮ ಮತ್ತು ದೂರದೃಷ್ಟಿಯ ಆಲೋಚನೆಯನ್ನು ಗಮನಿಸಿದರೆ ನಾವು ಹೆಮ್ಮೆ ಪಡುವಂತಿದೆ.

---

೧. ಪ್ರೋ.ಬಿ. ವಿರೂಪಾಕ್ಷಪ್ಪ- ಬಸವಣ್ಣನವರ ೧೦೮ ವಚನಗಳು-೨೦೦೩ ಪುಟ ಸಂಖ್ಯೆ:೧೫

ಆದರೆ ಇಂದು ನಗರೀಕರಣದ ಭರದಲ್ಲಿ ಆಧುನಿಕತೆಯ ಸೋಗಿನಲ್ಲಿ ನಮ್ಮ "ಅರಣ್ಯದ ಕಾಡುಗಳೆಲ್ಲವು ನಾಶವಾಗಿ ನಗರೀಕರಣದ ಕಾಂಕ್ರೆಟ ಕಾಡುಗಳು ಹುಟ್ಟುತ್ತಿವೆ". ತೇಗ, ಬಿದಿರು, ಬಿಟೆ, ಹೊನ್ನೆ, ಗಂಧ, ಮುಂತಾದ ಗಗನ ಚುಂಬಿ ಮರಗಳು ಬೆಳೆಯುವ ಸ್ಥಳದಲ್ಲಿ ಇಂದು ಗಗನ ಚುಂಬಿ ಕಟ್ಟಡಗಳು ನಿರ್ಮಾಣವಾಗುತ್ತವೆ.

ಫಲವತ್ತಾದ ಬೆಳೆ ಬೆಳೆಯುವ ಭೂಮಿಗಳಲ್ಲಿ ಇಂದು ಮನೆಗಳು, ಕಾರ್ಖಾನೆಗಳು ನಿರ್ಮಾಣಗೊಳ್ಳುತ್ತಿವೆ. ಇದರಿಂದ ಭರದಿಂದ ನಾಶವಾಗುತ್ತಿರುವ ನಮ್ಮ ಪರಿಸರ ಸಂಪತ್ತು ತಡೆಯದಿದ್ದರೆ ನಮ್ಮ ನಾಶಕ್ಕೆ ನಾವೇ ಎಡೆಮಾಡಿ ಕೊಳ್ಳುವಂತಾಗುತ್ತದೆ ಇದನ್ನು ತಡೆಗಟ್ಟಲು ಸರ್ಕಾರ ಕಾನೂನು ಕ್ರಮ ತೆಗೆದುಕೊಂಡಿದೆ ಆದರೆ ಅದು ಯಶಸ್ಸಿ ಹೊಂದಲು ನಮ್ಮ ಜನರ ಮನಸ್ಸಿನಲ್ಲಿ ಅದರ ಬಗ್ಗೆ ಅರಿವು ಮೂಡಿಸುವುದು ಅವಶ್ಯಕ. ಇಂದು ಹಾಳಾಗುತ್ತಿರುವ ಪರಿಸರದಿಂದ ಬರುತ್ತಿರುವ ಹೊಸ ಹೊಸ ರೋಗಗಳು ಎದುರಿಸುತ್ತಿರುವ ಆಹಾರದ ಸಮಸ್ಯೆ ಶುದ್ಧ ಗಾಳಿ. ನೀರಿನ ಸಮಸ್ಯೆ, ಓಜೋನ್ ಪದರಿನ ನಾಶ ಇವುಗಳ ರಕ್ಷಣೆಯ ಬಗ್ಗೆ ತಿಳುವಳಿಕೆ ನಮ್ಮ ಪೂರ್ವಿಕರಲ್ಲಿ ಎಷ್ಟು ಇತ್ತು ಅದು ನಮ್ಮ ಪೀಳಿಗೆಯಲ್ಲಿ ಇಲ್ಲಾ. ನಮ್ಮ ಹಿರಿಯರ ಈ ಮುಂದಾಲೋಚನೆ ಬಗ್ಗೆ ನಾವು ತಿಳಿದುಕೊಳ್ಳಲು ಇಂದು ನಾವು ನಮ್ಮ ಶರಣ ವಚನಗಳನ್ನು ನಿದರ್ಶನವಾಗಿ ಇಟ್ಟುಕೊಂಡು ಓದುವುದು ಸೂಕ್ತವಾಗಿದೆ. ಅವರಿಗಿದ್ದ ಪರಿಸರ ಪ್ರಜ್ಞೆ ಮತ್ತು ಕಾಳಜಿ ನಮ್ಮಲ್ಲಿ ಮೂಡಲು ಅದನ್ನು ನಾವು ಪುನಃ ಮರುಕಳಿಸುವುದು ಅವಶ್ಯಕ. ಆದ್ದರಿಂದ ಇಂದು ನಾವು ನಮ್ಮ ಶರಣೆಯರಲ್ಲಿ ವಚನದಲ್ಲಿ ಬರುವ ಪರಿಸರ ಪ್ರಜ್ಞೆಯ ಬಗ್ಗೆ ಅಧ್ಯಯನ ಮಾಡೋಣ ಎಂದು ನನಗೆ ಅನಿಸಿತು. ಅದನ್ನು ನಾನು ಓದುವುದರ ಜೊತೆಗೆ ನಮ್ಮ ಪ್ರಿಯ ಓದುಗ ಮಿತ್ರರಿಗೂ ಪರಿಸರ ಕಾಳಜಿ ಮೂಡಿಸುವಲ್ಲಿ ನಮ್ಮೆಲ್ಲರ ಬದುಕಿಗೆ ಮೂಲ ಕಾರಣವಾದ ಸೃಷ್ಠಿಯು ಉಳಿಸುವಲ್ಲಿ ನಮ್ಮ ಪೀಳಿಗೆ ಸುಖದಿಂದ ಬಾಳಲು ನಾಂದಿಯಾಗಲಿ ಎಂದು ಈ ವಿಷಯವನ್ನು ಒಂದು ಅಧ್ಯಯವಾಗಿ ಆಯ್ಕೆ ಮಾಡಿಕೊಂಡು ನಮ್ಮ ಈ ಅಧ್ಯಯನಕ್ಕೆ ಮಾರ್ಗದರ್ಶಕರಾದ.

ಡಾ: ಪ್ರೇಮಾ ಸಿರ್ಸೆ ಮೇಡಂ ಅವರಿಗೆ ಈ ವಿಷಯ ತಿಳಿಸಿದಾಗ ಅವರು ಬಹಳ ಸಂತೋಷದಿಂದ ಒಪ್ಪಿಕೊಂಡು ಇದು ಪ್ರಸ್ತುತ ಸಮಾಜಕ್ಕೆ ಸೂಕ್ತ ವಿಷಯವಾಗಿದೆ ಎಂದು ಹೇಳಿದರು. ಅದೇ ರೀತಿಯಾಗಿ ಈ ವಿಷಯವಾಗಿ ಅಧ್ಯಯನ ಮಾಡಲು ನಮ್ಮ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ: ಜಗನ್ನಾಥ ಹೆಬ್ಬಾಳೆ ಸರ್ ಅವರನ್ನು ಕೇಳಿದಾಗ ಅವರು ಈ ವಿಷಯಕ್ಕೆ ಒಪ್ಪಿಗೆ ಸೂಚಿಸಿದರು.

ಅ) ಶಿವಶರಣೆಯರ ವಚನದಲ್ಲಿ ಪರಿಸರ ಪ್ರಜ್ಞೆ

ಸಾಮಾನ್ಯವಾಗಿ ನಮ್ಮ ಸುತ್ತಮುತ್ತಲಿನ ವನ, ಜಲ, ಸಸ್ಯ, ಪ್ರಾಣಿಸಂಕುಲ, ಜಡವಸ್ತು ಎಲ್ಲವನ್ನು ಒಟ್ಟಾಗಿ ಒಳಗೊಂಡಿರುವುದೆ ಪರಿಸರ ಎನ್ನುತ್ತೇವೆ. ಈ ವಿಶ್ವದಲ್ಲಿ ಮನುಕುಲ ಒಂದೇ ಕುಲವಲ್ಲ ಇದರ ಜೊತೆ-ಜೊತೆಗೆ ೮೮ ಕೋಟಿ ಜೀವರಾಶಿಗಳು ವಾಸಿಸುತ್ತವೆ. ಪ್ರತಿಯೊಂದು ಜೀವಿ ಇನ್ನೊಂದನ್ನು ಒಂದಲ್ಲಾ ಒಂದು ಕಾರಣಕ್ಕಾಗಿ ಅವಲಂಬಿಸಿವೆ. ಪ್ರಾಣಿ, ಪಕ್ಷಿ, ಸಸ್ಯ ಸಂಕುಲಗಳ ಜೊತೆ ಅಪಾರವಾದ ಸಂಬಂಧವಿದೆ. ಈ ಸಂಬಂಧ ಮೇಲ್ನೋಟಕ್ಕೆ ಕಾಣುವುದಕ್ಕಿಂತಲೂ ಹೆಚ್ಚು ಸಂಕೀರ್ಣವಾದುದ್ದಾಗಿದೆ.

"ಈ ಜಗತ್ತಿನಲ್ಲಿ ಮಾನವ ಏಕಾಂಗಿಯಲ್ಲಿ ಅವನ ಸುತ್ತಲೂ ಗಿಡ, ಮರ, ಬಳ್ಳಿ, ಕ್ರಿಮಿ- ಕೀಟಗಳು, ಪ್ರಾಣಿ-ಪಕ್ಷಿಗಳು, ನದಿ, ಬೆಟ್ಟ, ಗುಡ್ಡ, ಸಾಗರ, ಸರೋವರ, ಪರ್ವತ, ಗಾಳಿ, ನೀರು ಬೆಳಕು, ಮಣ್ಣು, ಆಕಾಶ, ಇವೆಲ್ಲವೂ, ಇವೆ, ಇವು ಒಂದಕ್ಕೊಂದು ಹೊಂದಿಕೊಂಡು ಪರಿಸರದಲ್ಲಿ ಸಮತೋಲನವನ್ನು ಕಾಪಾಡುತ್ತವೆ"[೧]. ನಮ್ಮ ಪೂರ್ವಜರ ಪರಿಸರದ ಕಲ್ಪನೆ ಅಘಾದವಾದದ್ದು ಪ್ರಖ್ಯಾತ ಆಯುರ್ವೇದ ಪಂಡಿತರು ವರಹ ತನ್ನ ಸುಪ್ರಸಿದ್ಧ ಕೃತಿ "ಚರಕ ಸೂತ್ರದಲ್ಲಿ" ಉತ್ತಮ ಆರೋಗ್ಯಕ್ಕೆ ಉತ್ತಮ ಪರಿಸರ ಬೇಕು ಎಂದು ಹೇಳುತ್ತಾನೆ. "ಧರ್ಮ, ಅರ್ಥ, ಕಾಮ, ಮೋಕ್ಷಾನಾಂ ಆರ್ರೋಗಂ ಮೂಲಂ ಉತ್ತಮಂ" ಎಂದಿದ್ದಾರೆ. ಅದೇ ರೀತಿ ಬುದ್ಧನು "ಅರಣ್ಯವೆಂದರೆ ಒಂದು ವಿಶಿಷ್ಟ ಜೀವಕೋಶ" ಇದರ ಔದಾರ್ಯ ಇದರ ಕಲ್ಯಾಣ ಗುಣ ಅನಂತ ಇದು ತನಗಾಗಿ ಏನನ್ನು ಬೇಡದೆ ಬೇಡಿ ಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನೇ ಧಾರೆಯರೆಯುತ್ತದೆ. ಎಲ್ಲಾ ಜೀವಿಗಳಿಗೂ ಆಶ್ರಯ ನೀಡುತ್ತದೆ. ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೇರಳು ನೀಡುತ್ತದೆ.

ನಮ್ಮ ರಾಜ ಮಹಾರಾಜರುಗಳು ತಮ್ಮ ಅಧಿಕಾರದ ಅವಧಿಯಲ್ಲಿ ಸಾಲು ಮರಗಳನ್ನು ನೆಡಿಸಿ, ಬೆಳೆಸಿದರು. ಉದಾ: ಅಶೋಕ ಚಕ್ರವರ್ತಿ ತನ್ನ ಅಧಿಕಾರ ಅವಧಿಯಲ್ಲಿ ರಸ್ತೆ ಎರಡು ಬದಿಗೆ ಸಾಲು ಮರಗಳನ್ನು ನಡೆಸಿದರು. ನಗರಗಳಲ್ಲಿ, ಹಳ್ಳಿಗಳಲ್ಲಿ, ಪಟ್ಟಣದಲ್ಲಿ ಒಂದೊಂದು ಉದ್ಯಾನವನ ನಿರ್ಮಿಸಿದರು. ಇದರಿಂದ ನಮ್ಮ ಅರಸರಿಗೆ ಇದ್ದ ಪರಿಸರ ಕಾಳಜಿಯನ್ನು ಕಾಣುತ್ತೇವೆ. ಅದೇ ರೀತಿ ನಮ್ಮ ಕರ್ನಾಟಕದಲ್ಲಿ ಆದ ಅನೇಕ ಕವಿ ಪುರಂಗ ತಮ್ಮ ಕಾವ್ಯದಲ್ಲಿ ಪ್ರಕೃತಿ ಮಾತೆ ಎಂದು ಸಂಭೋಧಿಸಿ ತಾಯಿ ಬಗ್ಗೆ ಇವರು ಅಭಿಮಾನ, ಕಳಕಳಿಯನ್ನು ಸಾರಿ ಹೇಳಿದ್ದಾರೆ. ಮುಂದೆ ಬಂದರೆ ನಮ್ಮ ಶಿವ ಶರಣರ ವಚನಗಳಲ್ಲಿ ಪ್ರಕೃತಿಯ ಬಗ್ಗೆ ಇವರು ಅಪಾರ ಕಾಳಜಿಯನ್ನು ಕಾಣುತ್ತೇವೆ.

---

೧. ಪ್ರೋ. ಕೆ. ಭೈರಪ್ಪ - ನಮ್ಮ ಪರಿಸರ-೨೦೦೬ ಪುಟ ಸಂಖ್ಯೆ: ೬

ಅವರು ಪ್ರಕೃತಿಯ ಪ್ರತಿಯೊಂದು ವಸ್ತುವಿನ ಬಗ್ಗೆ ವಿಶೇಷ ಕಾಳಜಿಯನ್ನು ತೋರುತ್ತಾರೆ. ಪ್ರಾಣಿ ಪಕ್ಷಿಗಳಿಂದ ನಾವು ನಮ್ಮ ಜೀವನದಲ್ಲಿ ಅನೇಕ ಪಾಠಗಳನ್ನು ಕಲಿಯಬೇಕು ಎಂದು ಅವುಗಳ ನಿದರ್ಶನ ನೀಡಿ ವಚನಗಳನ್ನು ರಚಿಸಿದ್ದಾರೆ. "ಚಂದನವ ಕಡಿದು ಕೊರೆದ ತೇದಡೆ ನೊಂದೆನೆಂದು ಕಂಪವ ಬಿಟ್ಟಿತ್ತೇ? ತನ್ನ ಮೂಲ ಗುಣವನ್ನು ಅದು ಬಿಡುವುದಿಲ್ಲಾ ಈ ಮಾನವ ತನಗೆ ಹಾನಿಮಾಡಿದನೆಂದು ಚಂದನ ತನ್ನ ಸುಂಗಧ ಬಿಡುವುದಿಲ್ಲಾ ಎಂದು ಹೇಳುತ್ತಾಳೆ ಅಕ್ಕ ಮಾಹಾದೇವಿ. ಪ್ರಕೃತಿ ಪ್ರತಿಯೊಂದು ಜೀವಿಯು ತನ್ನ-ತನ್ನ ಕಾರ್ಯದಲ್ಲಿ ತಾ ನೀರತವಾಗಿ ಸೃಷ್ಠಿಗೆ ಸಹಾಯಕವಾದ ಇಂತಹ ಅಮೂಲ್ಯ ರತ್ನವಾದ ಪರಿಸರ ಇಂದು ಮಾನವನ್ನು ತನ್ನ ಆಧುನಿಕತೆಯ ಭರದಲ್ಲಿ ಹಾಳು ಮಾಡಲು ಹತ್ತಿದ್ದಾನೆ.

ವಿದೇಶಿಯ ವ್ಯಾಮೋಹದಿಂದ ಅವರ ಆಹಾರಕ್ಕಾಗಿ ಕ್ರಿಮಿ-ಕೀಟಗಳನ್ನು, ಕಪ್ಪೆ, ಹಾವು ಅನೇಕ ಜಲಚರಗಳನ್ನು ಲಕ್ಷಗಟ್ಟಲೇ ಹಿಡಿದು ವಿದೇಶಗಳಿಗೆ ರವಾನಿಸುತ್ತಿದ್ದಾರೆ. ಅವರು ಮೋಜಿಗಾಗಿ ಪ್ರಾಣಿಗಳನ್ನು ಬೇಟೆಯಾಡುವುದು. ಐಶ್ಯಾರಾಮ್ಯದ ವಸ್ತುವಿಗಾಗಿ ಅರಣ್ಯ ಸಂಪತ್ತು. ಪ್ರಾಣಿ ಸಂಪತ್ತು ಹಾಳು ಮಾಡುತ್ತಿದ್ದಾರೆ. ಇದರಿಂದ ಪ್ರಕೃತಿಯ ಅಸಮತೋಲನ ಉಂಟಾಗುತ್ತಿದೆ.

ಇಂದು ನಾವು ನಮ್ಮ ಮಕ್ಕಳು, ನಮ್ಮ ಸಮಾಜವು ಸುಖದಿಂದ ಬಾಳಬೇಕಾದರೆ ನಾವು ಹಾಳಾಗುತ್ತಿರುವ ಪರಿಸರವನ್ನು ರಕ್ಷಿಸಬೇಕು. ಪರಿಸರ ಬೆಳೆಸಿ ಉಳಿಸಬೇಕು "ಹಸಿರೇ ನಮ್ಮ ಉಸಿರು" ಎಂಬ ಘೋಷಣೆಯಂತೆ ಈ ಹಸಿರು ಇಲ್ಲವೆಂದರೆ ಪರಿಸರದ ಯಾವ ಜೀವಿಯು ಬದುಕಲು ಸಾಧ್ಯವಿಲ್ಲಾ. ನಮ್ಮ ಆಧುನಿಕತೆಯ ಭರದಿಂದ ಮತ್ತು ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ನಮ್ಮ ಪರಿಸರವನ್ನು ನಾವೇ ಹಾಳುಮಾಡಲು ಬೆನ್ನು ಹತ್ತಿದ್ದೇವೆ. ಇವರಿಂದ ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ದಮಾಲಿನ್ಯ, ಉಂಟಾಗುತ್ತದೆ.

ಪ್ರತಿಯೊಬ್ಬ ವ್ಯಕ್ತಿಯೂ ಹುಟ್ಟಿದ ಕ್ಷಣದಿಂದ ಸಾಯುವವರೆಗೆ ಸತತವಾಗಿ ಉಸಿರಾಡುತ್ತಲೆ ಇರಬೇಕಾಗಿರುತ್ತದೆ. ಅದು ಪಕೃತಿಯ ನಿಯಮ. ಆದಾಗ್ಯೂ ಎಲ್ಲರ ಉಸಿರಾಟದ ವೇಗ ಒಂದೇ ಆಗಿರುವುದಿಲ್ಲ. ಉದಾಹರಣೆಗೆ ನವಜಾತ ಶಿಶುವು ನಿಮಿಷಕ್ಕೆ ಸುಮಾರು ೪೦ ಬಾರಿ ಉಸಿರಾಡಿದರೆ. ವಯಸ್ಕ ವ್ಯಕ್ತಿಯು ನಿಮಿಷಕ್ಕೆ ಸುಮಾರು ೧೪ ರಿಂದ೨೦ ಬಾರಿ ಉಸಿರಾಡುತ್ತಾನೆ. ವಯಸ್ಕ ವ್ಯಕ್ತಿಯು ಸಾಮಾನ್ಯವಾಗಿ ಪ್ರತಿಬಾರಿ ಉಸಿರೆಳೆದುಕೊಳ್ಳುವಾಗಲೂ ಸುಮಾರು ಐನೂರು ಮಿಲಿಲೀಟರ್‌ನಷ್ಟು ವಾಯುವನ್ನು ಒಳಸೇವಿಸಿ ಸುಮಾರು ಅಷ್ಟೇ ಪ್ರಮಾಣದ ವಾಯುವನ್ನು ಹೊರಗೆ ಬಿಡುತ್ತಾನೆ. ಪುರುಷರಿಗಿಂತ ಮಹಿಳೆಯರಲ್ಲಿ ಉಸಿರಾಟದ ವೇಗ ಸ್ವಲ್ಪ ಹೆಚ್ಚು.

ಈ ರೀತಿ ಹಾಳಾಗುತ್ತಿರುವ ನಮ್ಮ ಸಸ್ಯ ಸಂಪತ್ತು ಮತ್ತು ಪ್ರಾಣಿ ಸಂಪತ್ತು ರಕ್ಷಣೆ ಮಾಡಿಲ್ಲಾ ಎಂದರೆ ಪ್ರಕೃತಿಯ ಅಸಮತೋಲನಕ್ಕೆ ನಾವೇ ಕಾರಣಿ ಭೂತರಾಗುತ್ತೇವೆ. ಇದನ್ನು ಹಾಳಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ನಾಗರೀಕನ ಆದ್ಯ ಕರ್ತವ್ಯವಾಗಿದೆ. ಇದಕ್ಕಾಗಿ ನಮ್ಮ ಸರ್ಕಾರ ಅನೇಕ ಕಾಯ್ದೆ ಕಾನೂನುಗಳನ್ನು ಜಾರಿಗೆ ತಂದಿದೆ. ಅಭಯಾರಣ್ಯ ರಚಿಸಿದೆ. ಗಿರಿಧಾಮಗಳು, ಪಕ್ಷಿಧಾಮಗಳನ್ನು ರಚಿಸಿದೆ. ಒಂದುವೇಳೆ ನಾವು ಹೀಗೆ ನಮ್ಮ ಅರಣ್ಯ ಸಂಪತ್ತು ಹಾಳುಮಾಡುತ್ತಾ ಹೋದರೆ ಮುಂದೆ ಕೆಲವು ದಿನಗಳಲ್ಲಿ ನಮ್ಮ ಮಕ್ಕಳಿಗೆ ಈ ಪ್ರಕೃತಿಯ ಪ್ರತಿಯೊಂದು ಪ್ರಾಣಿಗಳು ಮತ್ತು ಸಸ್ಯಗಳನ್ನು ಚಿತ್ರ ಪಟದಲ್ಲೋ, ಸರ್ಕಸ್‌ನಲ್ಲೋ, ಸಿನಿಮಾಗಳಲ್ಲಿ ತೋರಿಸುವ ಪ್ರಸಂಗ ಬರುತ್ತದೆ.

ಇದನ್ನು ಹತೋಟಿಯಲ್ಲಿಡಲು ತಕ್ಷಣ ಕಾರ್ಯಗತಗೊಳಿಸುವ ಕಾರ್ಯಕ್ರಮ ಕೈಕೊಳ್ಳಬೇಕು ಇದಕ್ಕೆ ಬಿಗಿಯಾದ ಕಾನೂನು ರೂಪಿಸಬೇಕು. ನಮ್ಮಲ್ಲಿ ಅನೇಕ ಘೋಷಣೆಗಳನ್ನು ಹೊರಡಿಸಬೇಕು.

ಉದಾ :– 'ಮನೆಗೊಂದು ಮಗು ಮಗುವಿಗೊಂದು ಮರ" "ಕಾಡು ಬೆಳೆಸಿ ನಾಡು ಉಳಿಸಿ" ಇಂದು ಈ ನಿಟ್ಟಿನಲ್ಲಿ ಸ್ವಲ್ಪಮಟ್ಟಿಗೆ ಕಾರ್ಯ ನಡೆದಿದೆ ನಮ್ಮ ಪರಿಸರ ಪ್ರೇಮಿ ಸುಂದರಲಾಲ ಬಹುಗುಣವರ "ಅಪ್ಪಿಕೊ ಚಳುವಯಿಂದ" ಕೆಲವೇ ಕೆಲವು ಜನರನ್ನು ಜಾಗೃತರನ್ನಾಗಿಸಿದ್ದಾರೆ. ನಮ್ಮಲ್ಲಿ ಅನೇಕ ಜನರು ಮರಗಳನ್ನು ತಮ್ಮ ಸ್ವಂತ ಮಕ್ಕಳಂತೆ ಸಾಕುಪವರು ಇದ್ದಾರೆ. "ಸಾಲುಮರದ ತಿಮ್ಮಕ್ಕ" ಅನೇಕ ಮೈಲುಗಳು ನಡೆದು ಹೋಗಿ ನೀರು ತಂದು ಹಾಕಿ ರಸ್ತೆಯ ಎರಡು ಬದಿಗೆ ಸಾಲು ಮರಗಳನ್ನು ನೆಟ್ಟು ಪೋಷಿಸಿದ್ದಾರೆ.

"ರಾಷ್ಟ್ರಕವಿ ಕುವೆಂಪು ವಿಶ್ವ ಮಾನವ ಸಂದೇಶವನ್ನು ಸಾರಿದ್ದಾರೆ ದೇವರ ದಿವ್ಯ ಸೃಷ್ಠಿ ಪ್ರಕೃತಿ. "ಮರವಿದ್ದರೆ ಮನುಷ್ಯ" 'ಕಾಡಿದ್ದರೆ ನಾಡು' "ಅರಣ್ಯಗಳಿದ್ದರೆ ನಾಗರೀಕತೆ" ಇಂಥ ಅರ್ಥಪೂರ್ಣ ಮಾತುಗಳನ್ನು ನಾವು ತಿಳಿಯಬೇಕಾಗಿದೆ ಈ ವನಸಂಪತ್ತಿನ ಉಪಯೋಗ ಅಷ್ಟಿಷ್ಟಲ್ಲಾ ಇಂದು ಅಂತರ್ಜಲವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿದೆ. ಲೋಹದ ಖನಿಜ ಸಂಪತ್ತನ್ನು ನಿರ್ದೇಶಿಸುವ ಸಾಮರ್ಥ್ಯವಿದೆ. ಭೂಮಿಯ ಫಲವತ್ತತೆಯನ್ನು ವೃದ್ಧಿಸುವುದು. ಹಲವಾರು ಭಯಂಕರ ರೋಗಗಳಿಗೆ ಗುಣಪಡಿಸುವ ಜಾಷಧಿಸಸ್ಯಗಳ ನೀಡುವ ಗಿಡಮೂಲಿಕೆಗಳು ಹೀಗೆ ಒಂದೇ ಎರಡೇ ಸರ್ವರುಜಪಹಾರಿಯಿವೆ ಈ ಅರಣ್ಯ ರಕ್ಷಣೆ ನಮ್ಮ ನಿಮ್ಮೆಲರ ಆದ್ಯ ಕರ್ತವಾಗಿದೆ ಎಂದು ತಿಳಿಹೇಳುವುದು ಅವಶ್ಯಕ ಎಂದು ನಾನು ಇಂದು ಈ ವಿಷಯ ನಮ್ಮ ಸಮಾಜ ಬಂಧುಗಳಿಗೆ ತಿಳಿಸಲು ಈ ಅಧ್ಯಯನವನ್ನು ಆಯ್ಕೆ ಮಾಡಿ ಕೊಂಡಿದ್ದೇನೆ.೧

---

೧. ಪ್ರೋ.ಕೆ. ಭೈರಪ್ಪ –ನಮ್ಮಪರಿಸರ–೨೦೦೦ ಪುಟ ಸಂಖ್ಯೆ: ೧೯

ಈ ಪರಿಸರ ಪ್ರಜ್ಞೆ ಎಂಬ ವಿಚಾರ ಇಂದಿನದಲ್ಲಾ ಇದು ಸುಮಾರು ೮೫೦ ವರ್ಷಗಳ ಹಿಂದೆಯು ಸಹ ನಮ್ಮ ಶರಣರು ತಮ್ಮ ವಚಗಳ ಮೂಲಕ ಸಾರಿ ಹೇಳಿರುವ ವಿಷಯವನ್ನೇ ನಾನು ಈ ಮೊಲಕ ಪ್ರಸ್ತುತಪಡಿಸುತ್ತಿರುವೇನು.

ಈ ಜಗತ್ತಿನಲ್ಲಿ ಹುಟ್ಟಿ ಬೆಳೆಯುವ ಪ್ರತಿಯೊಬ್ಬ ವ್ಯಕ್ತಿಯೂ ಸಹ ತನ್ನ ಶರೀರ ಹಾಗೂ ಮನಸ್ಸಿನ ಬಗ್ಗೆ ಮತ್ತು ತನ್ನ ಸುತ್ತಮುತ್ತಲಿನ ಪರಿಸರದಲ್ಲಿನ ಆಗುಹೋಗುಗಳ ಬಗ್ಗೆ ತಿಳಿದುಕೊಂಡಿರಬೇಕಾಗಿರುತ್ತದೆ. ಆಗ ಮಾತ್ರ ಅವನೊಬ್ಬ ನಾಗರೀಕ, ಪ್ರಜ್ಞಾವಂತ ವ್ಯಕ್ತಿ ಎಂಬುದಾಗಿ ಹೇಳಬಹುದಾಗಿರುತ್ತದೆ.

ಆದುದರಿಂದ ಪ್ರತಿಯೊಬ್ಬ ಸ್ತ್ರೀ ಪುರುಷ ವ್ಯಕ್ತಿಯೂ ಸಹ ಜನಸಂಖ್ಯೆಯ ಹೆಚ್ಚಳ, ಕೈಗಾರಿಕೀರಣ ಮತ್ತು ನಗರೀಕರಣಗಳಿಂದಾಗಿ ಕಾಡುಗಳ ನಿರ್ನಾಮವಾಗಿ ಪರಿಸರದ ಮೇಲೆ ಘೋರ ಅತ್ಯಾಚಾರ ಆಗುತ್ತಿರುವುದನ್ನು ಮನಗಾಣಬೇಕಾಗಿದೆ. ಗಿಡಮರಗಳನ್ನು ಉಳಿಸಿ ಬೆಳೆಸಿಕೊಂಡು ಬರಬೇಕಾಗಿರುವುದರ ಜೊತೆಗೆ ಜಲದ ಮೂಲಗಳನ್ನು ರಕ್ಷಿಸಬೇಕಾಗಿದೆ. ತ್ಯಾಜ್ಯ ವಸ್ತುಗಳನ್ನು ನೀರಿನಲ್ಲಿ ಬಿಸಾಡುವುದರಿಂದ ಉಂಟಾಗಬಹುದಾದ ಜಲಮಾಲಿನ್ಯದ ಕಡೆಗೆ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕಾಗಿದೆ. ಅದಕ್ಕಾಗಿ ಜನರಲ್ಲಿ ಅರಿವನ್ನು ಮೂಡಿಸಬೇಕಾಗಿದೆ. ಅಂತೆಯೇ ಆರೋಗ್ಯಕರ ಬದುಕಿಗೆ ಪರಿಸರದ ಸಂರಕ್ಷಣೆ ಅವಶ್ಯಕವೆಂಬುದನ್ನು ಮನಗಂಡು ಸೂಕ್ತ ರೀತಿಯಲ್ಲಿ ನಡೆದುಕೊಳ್ಳಬೇಕಾಗಿದ.

ಅಧ್ಯಾಯ – ೨

ಅ) ವೈರಾಗ್ಯ ನಿಧಿ ಅಕ್ಕಮಹಾದೇವಿ

ಆ) ಕಾಯಕಯೋಗಿನಿ ಆಯ್ದಕ್ಕಿ ಲಕ್ಕಮ್ಮ

ಇ) ಮುಕ್ತಿಯ ಶಕ್ತಿ ಮುಕ್ತಾಯಕ್ಕ

ಈ) ಮೋಳಿಗೆಯ ಮಾಹಾದೇವಿ

ಉ) ಅಮ್ಮುಗೆಯ ರಾಯಮ್ಮ

ಊ) ಸತ್ಯ ಶಿವಶರಣೆ ಸತ್ಯಕ್ಕೆ

ಋ) ಧೀರಮಾತೆ ನಾಗಲಾಂಬಿಕೆ

ಅಧ್ಯಾಯ – ೨

ಶಿವಶರಣೆಯರ ಜೀವನ ಮತ್ತು ಸಾಧನೆಗಳು

ಅ) ವೈರಾಗ್ಯ ನಿಧಿ ಅಕ್ಕಮಹಾದೇವಿ :

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೇ ಪರ್ವಕಾಲವಾದ ೧೨ನೇ ಶತಮಾನವು ಸಾಹಿತ್ಯ ಬೆಳವಣಿಗೆಗೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದೆ. "ವಚನ ಸಾಹಿತ್ಯ" ಈ ಸಾಹಿತ್ಯವು ಬಸವಾದಿ ಶರಣ ಶರಣೆಯರ ಹೃದಯಾಂತರಾಳದಿಂದ ಮೂಡಿಬಂದ ನುಡಿ ಕುಸುಮ. ಮಾನವ-ಮಾನವರ ನಡುವಿನ ಅಸಮಾನತೆಯನ್ನು ಕಿತ್ತು-ತೆಗೆದು ಸಮಾನತೆಯ ಬೆಳೆಯನ್ನು ಬೆಳೆದ ಶರಣರು ಶ್ರೀಸಾಹಿತ್ಯ ರಚನೆಗೆ ಅನುವು ಮಾಡಿಕೊಟ್ಟಿತು. ಇದು ಇಡೀ ಜಗತ್ತಿನಲ್ಲಿ ಅಪೂರ್ವ ಕೊಡುಗೆ. ಈ ಕಾಲದಲ್ಲಿ ಅನೇಕ ಶರಣೆಯರು ತಮ್ಮ ವಚನಗಳ ಮೂಲಕ ಜನತೆಗೆ ಲೌಕಿಕ ಮತ್ತು ಅಲೌಕಿಕತೆಯ ಸಂದೇಶ ನೀಡಿದ್ದಾರೆ. ಇಂತಹ ಶರಣೆಯರ ಸಾಲಿನಲ್ಲಿ ಅಗ್ರಸ್ಥಾನ ಪಡೆದವಳೇ ವೈರಾಗ್ಯನಿಧಿ ಅಕ್ಕಮಾಹಾದೇವಿ.

ಜೀವನ :

"ಕ್ರಿಶ ೧೧೫೦ ರಲ್ಲಿ ಶಿವಮೊಗ್ಗ ಜಿಲ್ಲೆಯ ಉಡತಡಿ ಗ್ರಾಮದಲ್ಲಿ ನಿರ್ಮಲಶೆಟ್ಟಿ ಮತ್ತು ಸುಮತಿಯರಂಬ ಪುಣ್ಯ ದಂಪತಿಗಳ ಉದರದಲ್ಲಿ ಜನಿಸಿದಳು. ಸೌಂದರ್ಯದ ಖಣಿಯಾದ ಅಕ್ಕಮಹಾದೇವಿ ಚಿಕ್ಕಂದಿನಿಂದಲೂ ಶಿವಧ್ಯಾನ, ಶಿವಪೂಜೆಯಲ್ಲಿ ಹೆಚ್ಚು ಒಲವು ತೋರುತ್ತಿದ್ದಳು."೧ ಭಕ್ತಿಸಂಪನ್ನೆ ಹಾಗೂ ಗುಣದ ಗುಣಿಯಾದ ಇವಳು ಬೆಳೆದು ಯೌವನದಲ್ಲಿ ಕಾಲಿರಿಸಿದಳು. ಒಮ್ಮೆ ವಿಹಾರಕ್ಕಾಗಿ ಹೊರಟ ದೊರೆ ಕೌಶಿಕನ ಕಾಮುಕ ದೃಷ್ಟಿ ಅಕ್ಕನ ಮೇಲೆ ಬೀಳುತ್ತದೆ. ಆಗ ಇವಳ ಜೀವನ ಗತಿಯೇ ಬದಲಾಗಿ ಹೋಗುತ್ತದೆ. ಈಕೆಯ ಸೌಂದರ್ಯಕ್ಕೆ ಮರುಳಾದ ದೊರೆ ಇವಳನ್ನು ಮದುವೆಯಾಗಲು ಬಯಸುತ್ತಾನೆ. ಅರಸನ ಒತ್ತಾಯಕ್ಕೆ ಮಣಿದು ತನ್ನ ತಂದೆ ತಾಯಿಯರಿಗೆ ಇವನಿಂದ ತೊಂದರೆ ಆಗಬಾರದೆಂದು ಅಕ್ಕಮಹಾದೇವಿ ಕೆಲವು ಷರತ್ತುಗಳನ್ನು ಇಡುತ್ತಾಳೆ. ಇವುಗಳಿಗೆ ಒಪ್ಪುವುದಾದರೆ ತಾನು ಮದುವೆಯಾಗಲು ಸಿದ್ಧ ಎಂದು ಅಕ್ಕಮಹಾದೇವಿ ನೀನು ಸತಿ ಶಿವಭಕ್ತನಾದೊಡೆ ಕೂಡುವೆನು ನೀನು ಭವಿಯಾಗಿರ್ದೊಡೊಲ್ಲೆನು ಎಂದಳು. ಈ ಮಾತಿಗೆ ಕೌಶಿಕನ ಅರಮನೆಯಲ್ಲಿ ಬಂದು ನೆಲೆಸಿದಳು.

---

೧. ವಾಣಿಶ್ರೀ. ಎಸ್. ಪಾಟೀಲ್ ಶಿವಶರಣೆಯ ಸಂಕ್ಷಿಪ್ತ ಜೀವನ ಮತ್ತು ವಚನಗಳು ಪುಟ ಸಂಖ್ಯೆ:-೨

ಸದಾ ದೇವರ ಪೂಜೆ ಧ್ಯಾನದಲ್ಲಿ ಕಾಲಕಳೆಯುತ್ತಿರುವ ಅಕ್ಕನನ್ನು ಕಂಡ ಕೌಶಿಕನು ನಿಯಮ ಮೀರಿ ಆಕೆಯನ್ನು ಮುಟ್ಟಲು ಬಂದಾಗ ಅವಳು ಅರಮನೆಯನ್ನು ತೊರೆದು ನಿಜ ವೈರಾಗ್ಯ ನಿಧಿಯಾಗಿ ಹೊರಬಂದಳು. ಸಂಸಾರ ಎಂಬ ಮಾಯೆಯಲ್ಲಿ ಸಿಲುಕಿ ನಾನು ನೊಂದಿದ್ದನೆ ಅದು ನನ್ನನ್ನು ಹೀಗೆ ಕಾಡುತ್ತಿದೆ ಎಂದಿದ್ದಾಳೆ.

"ಬಿಟ್ಟೆನೆಂದಡೆ ಬಿಡದಿ ಮಾಯೇ ಬಿಡದಿದ್ದಡೆ ಬೆಂಬತ್ತಿತು ಈ ಮಾಯೇ" ಎಂದು ಹೇಳುತ್ತಾಳೆ. ಹೀಗೆ ಮನೆಯನ್ನು ತೋರೆದ ಅಕ್ಕಮಾಹಾದೇವಿ ಕಲ್ಯಾಣದ ಕಡೆಗೆ ಸಾಗುವಳು ದಾರಿಯಲ್ಲಿ ಹೆಜ್ಜೆ-ಹೆಜ್ಜೆಗೆ ಅನೇಕ ಪರೀಕ್ಷೆಗೆ ಗುರಿಯಾಗುವಳು. ಇವಳು ಕಲ್ಯಾಣದ ಸಮೀಪ ಬಂದಾಗ ಕಿನ್ನರಿ ಬೊಮ್ಮಯ್ಯನೆಂಬ ಶರಣನು ಈಕೆಯನ್ನು ಪರೀಕ್ಷಿಸಲು ಬರುತ್ತಾನೆ. ಆದರೆ ಆಕೆ ಅವನ ಕಾಮವನ್ನು ಸುಟ್ಟು ಭಸ್ಮಮಾಡಿ ಆಕೆ ಮುನ್ನಡೆಯುತ್ತಾಳೆ. ಇವಳನ್ನು ಪರಿಕ್ಷೀಸಲು ಬಂದ ಬೊಮ್ಮಯ್ಯ ಕ್ಷಮೆ ಯಾಚಿಸುತ್ತಾನೆ. ದಿಗಂಬರೆಯಾಗಿ ಹೊರಟ ಲಾವಣ್ಯವತಿ ಅಕ್ಕನನ್ನು ಕಂಡು ಕಲ್ಯಾಣದಲ್ಲಿ ಅಲ್ಲಮಪ್ರಭುಗಳು ಪ್ರಶ್ನೆಗಳನ್ನು ಕೇಳುತ್ತಾರೆ. ಅವರ ಎಲ್ಲಾ ಪ್ರಶ್ನೆಗಳಿಗೆ ಸಮರ್ಪಕ ಉತ್ತರವನ್ನು ನೀಡಿದ ನಂತರ ಆಕೆಗೆ ಅನುಭವ ಮಂಟಪದಲ್ಲಿ ನೆಲೆ ನಿಲ್ಲಲು ಅವಕಾಶ ದೊರೆಯುತ್ತದೆ. ಅಲ್ಲಮ ಪ್ರಭುಗಳು ಸವಾಲು ಒಡ್ಡುವರು ಆಗ ಅಕ್ಕ ಹೀಗೆ ಉತ್ತರಿಸುವಳು "ಫಲ ಒಳಗೆ ಪಕ್ವವಾಗಿಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು."

"ಸತ್ತ ಹೆಣ ಕೊಗಿದ್ದೂ ಉಂಟು, ಹೆಪ್ಪಿಟ ಹಾಲು ಗಟ್ಟಿ ತುಪ್ಪವಾಗಿ ಸಿಹಿಯಾಗಿತ್ತು. ಕನಸು ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು."೧ ಎಂಬ ವಚನಗಳ ರೂಪದಲ್ಲಿ ಲಿಂಗಮೆಚ್ಚ ಅಹುದೆನ್ನುವಂತೆ ಉತ್ತರಿಸಿ ಆಧ್ಯಾತ್ಮಕ ನಿಲುವನ್ನು ಪ್ರದರ್ಶಿಸಿಕೊಂಡಳು. ಈಕೆಯ ಕೀರ್ತಿ ಎಲ್ಲಡೆಯು ಹಬ್ಬಿತು. ವಯಸ್ಸಿನಲ್ಲಿ ಕಿರಿಯಳಾದರೂ ಅನುಭವ ಅನುಭಾವಗಳ ದೃಷ್ಟಿಯಿಂದ ಹಿರಿಯಳೆನಿಸಿ ಶರಣರ ಗೌರವಕ್ಕೆ ಪಾತ್ರಳಾದಳು. ಅಲ್ಲಿ ಕೆಲಕಾಲ ಉಳಿದು ಪ್ರಭುವಿನ ಆದೇಶದಂತೆ ತನ್ನ ಇಷ್ಟಾರ್ಥ ಸಿದ್ಧಿಗಾಗಿ ಶ್ರೀಶೈಲದ ಕದಳಿಯ ಬನದತ್ತ ಹೊರಟು ನಿಂತಳು. ಆಗ ಅಲ್ಲಿನೆರೆದ ಶರಣಗಣಕ್ಕೆ "ನಿಮ್ಮ ಮಂಡೆಗೆ ಹೂವು ತಾಹೆನಲ್ಲದೆ ಹೂಲ್ಲುತಾರೆನು ಎಂದು" ಹೇಳಿಹೊರಟಳು.

ಇವಳು ಕನ್ನಡ ಸಾಹಿತ್ಯದ ಪ್ರಥಮ ಹಾಗೂ ಶ್ರೇಷ್ಠ ಕವಿಯತ್ರಿಯಾಗಿದ್ದಾಳೆ ಮತ್ತು ಇವಳು ಕನ್ನಡ ಸಾಹಿತ್ಯ ಸಂಪತ್ತನ್ನು ಸಮೃದ್ಧಿಗೊಳಿಸಿದಳು. ಸುಮಾರು ೩೫೦ ವಚನಗಳು ಬರೆದಿದ್ದಾಳೆ. ಸೃಷ್ಟಿಯ ವಚನಗಳು, ಯೋಗಾಂಗ ತ್ರಿವಿಧಿ ಹಾಗೂ ಅನೇಕ ಪದಗಳನ್ನು ರಚಿಸಿದ್ದಾಳೆ. ಇವಳ ಅಂಕಿತನಾಮ ಚನ್ನಮಲ್ಲಿಕಾರ್ಜುನದೇವ ಇವಳ ವಚನದಲ್ಲಿ

೧. ಪ್ರೋ. ಎಚ್.ಎಂ. ಜೀಳಗಿ- ಶಿವಶರಣೆಯರು: ಜೀವನ ಮತ್ತು ಸಾಧನೆ-೧೯೮೯ ಪುಟ ಸಂಖ್ಯೆ: ೧೫

ಸಾಮಾಜಿಕ ಪ್ರಜ್ಞೆ ಪರಿಸರ ಪ್ರಜ್ಞೆಯ ಜೊತೆಗೆ ಚನ್ನಮಲ್ಲಿಕಾರ್ಜುನನ್ನು ಕಾಣುವ ಉತ್ತಟ ಬಯಕೆ ಕಾಣುತ್ತೇವೆ. "ಗಿರಿವನದಲ್ಲಾಡುವ ನವಿಲುಗಳಿರಾ, ಕೊಳನತಡಿಯಲಾಡುವ ಹಂಸಗಳಿರಾ, ನೀವು ಚನ್ನಮಲ್ಲಿಕಾರ್ಜುನನ್ನು ಕಾಣಿರೆ" ಎಂದು ಕೇಳುವಾಗ ಪ್ರಕೃತಿಯ ಪ್ರತಿ ಪ್ರಾಣಿ-ಪಕ್ಷಿಗಳಲ್ಲಿ ಅವಳು ತೋರುವ ಸ್ನೆಹ ಭಾವ ಮತ್ತು ಚನ್ನಮಲ್ಲಿಕಾರ್ಜುನನ್ನು ಕಾಣುವ ಹಂಬಲ ವ್ಯಕ್ತವಾಗುತ್ತವೆ. ಸಂಸಾರದಲ್ಲಿದು ನಾವು ಯಾವ ರೀತಿ ಬಲೆಗೆ ಸುತ್ತುಕೊಂಡಿದ್ದೆವು ಎನ್ನುವುದಕ್ಕೆ ರೂಪಕವಾಗಿ "ತರಣಿಯ ಹುಳು ತನ್ನ ಸ್ನೇಹದಿಂದ ಮನೆಮಾಡಿ ತನ್ನನು ತಾನು ಸುತ್ತಿ ಸಾಯುವಂತೆ" ಎಂದು ಸಂಸಾರದ ಮೂಲವನ್ನು ಸಸ್ಯ ಪ್ರಕೃತಿಯ ಜೀವರಾಶಿಗಳಿಗೆ ಹೋಲಿಸಿ ಹೇಳುವುದು ಅವಳ ವಚನದ ವೈಶಿಷ್ಟ್ಯತೆ.

ಆ) ಕಾಯಕ ಯೋಗಿನಿ ಆಯ್ದಕ್ಕಿ ಲಕ್ಕಮ್ಮ

ಶಿವ ಶರಣೆ ಆಯ್ದಕ್ಕಿ ಲಕ್ಕಮ್ಮ ಆಯ್ದಕ್ಕಿ ಮಾರಯ್ಯನವರ ಧರ್ಮಪತ್ನಿ. ಈ ಶರಣ ದಂಪತಿಗಳು ಶಿವಶರಣರು ನಿರೂಪಿಸಿದ ಕಾಯಕ ತತ್ವವನ್ನು ಮನಸ್ಸಾರೆ ಒಪ್ಪಿಕೊಂಡು ಬದುಕಿದ ನಿಷ್ಠಾವಂತರು. ಇವಳ ಕುರಿತು ಅನೇಕ ಜನ ಕನ್ನಡ ಕವಿಗಳು ಲಕ್ಕಮ್ಮನ ಆಶಾರಹಿತ ಇಚ್ಛಾ ಶಕ್ತಿಯನ್ನು ಮತ್ತು ಅವಳ ಮಹಿಮೆಯನ್ನು ಕೊಂಡಾಡಿದ್ದಾರೆ.

ಇವಳು ರಾಯಚೂರು ಜಿಲ್ಲೆಯವಳು. ಈ ಶರಣ ದಂಪತಿಗಳು ಕಲ್ಯಾಣದಲ್ಲಿ ಬಂದು ನೆಲೆಸಿದರು. ಅಲ್ಲಿ ಈ ಶರಣದಂಪತಿಗಳ ಕಾರ್ಯವೆಂದರೆ ದಿನ ನಿತ್ಯ ಶರಣರ ಮನೆಯಂಗಳದ ಅಕ್ಕಿ ಆಯ್ದು ತಂದು ದಾಸೋಹಮಾಡುವ ಕಾರ್ಯ, ಈ ಶರಣೆ ಬರಿ ಪತ್ನಿಯಾಗಿ ಗಂಡನ ಕಾರ್ಯದಲ್ಲಿ ಸಾಹಾಯ ಮಾಡುವುದು ಅಷ್ಟೆ ಅಲ್ಲಾ ಗಂಡನು ಕಾಯಕ ಮಾಡುವಲ್ಲಿ ಎಡವಿದಾಗ ಅವನಿಗೆ ಸರಿಯಾಗಿ ಮಾರ್ಗ ತೋರುವ ಉಜ್ವಲ ವ್ಯಕ್ತಿತ್ವವುಳ್ಳವಳಾಗಿದ್ದಳು ಅಂತೆ ಈಕೆ ಶೂನ್ಯ ಸಂಪಾದನೆಯಲ್ಲಿ ಹೆಚ್ಚು ಸ್ಫೂಟವಾಗಿ ಮೂಡಿ ಬಂದಿದ್ದಾಳೆ.

ಇವಳ ಕಾಯಕ ಪ್ರಜ್ಞೆಯ ಮೆಚ್ಚುವಂತಹದು ಅದಕ್ಕೆ ಒಂದು ನಿದರ್ಶನ ಎಂದರೆ ಒಮ್ಮೆ ಕೆಲಸಕ್ಕಾಗಿ ಹೊರಟ ಮಾರಯ್ಯ, ಅಲ್ಲಮ ಪ್ರಭುವಿನೊಂದಿಗೆ ಕಾಯಕದ ವಿಚಾರವಾಗಿ ಚರ್ಚಿಸುತ್ತ ಕುಳಿತು ಬಿಡುತ್ತಾನೆ. ಆಗ ಲಕ್ಕಮ ಅಲ್ಲಿಗೆ ಬಂದು ಕಾಯಕ ನಿಂದಿತ್ತು ಏಳಯ್ಯಾ ಎನ್ನಾಳ್ದನೆ ಆಗ ಮೂರಯ್ಯ ಎಂದಿನಂತೆ ಅಕ್ಕಿ ತರಲು ಹೋಗುತ್ತಾನೆ. ಅಂದು ಬಸವಣ್ಣನವರ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ದಿನಕ್ಕಿಂತ ಹೆಚ್ಚಾಗಿ ಶೇಖರಿಸಿ ತರುತ್ತಾನೆ. ಇದನ್ನು ಕಂಡ ಲಕ್ಕಮ್ಮ "ಒಮ್ಮನ ಮೀರಿ ಇಮ್ಮನವ ತಂದಿರಿ, ಇದು ನಿಮ್ಮ ಮನವೂ, ಬಸವಣ್ಣನ ಅನುಮಾನದ ಚಿತ್ತವೊ"೧ ಎಂದು ಪ್ರಶ್ನಿಸಿ.

"ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ?
ಈ ಸಕ್ಕಿಯಾಸೆ ನಿಮಗೇಕೆ?
ಈಶ್ವರ ನೊಪ್ಪ" ಎಂದು.೨

ಎಚ್ಚರಿಸಿ ಮಿಕ್ಕ ಅಕ್ಕಿ ಅಲ್ಲೇ ಸುರಿಯಲು ಹೇಳುತ್ತಾಳೆ. ಉಳಿದ ಅಕ್ಕಿಯಲ್ಲೇ ಸಮಸ್ತ ಜಂಗಮರಿಗೆ ಬಿನ್ನಹಿಸಿದಳು ಅವರೆಲ್ಲರು ಅಂದರೆ ಒಂದು ಲಕ್ಷದ ತೊಂಬತ್ತಾರು ಸಾವಿರ ಜನ ಜಂಗಮರು ಸಂತೃಪ್ತಿಯಿಂದ ಪ್ರಸಾದ ಸ್ವೀಕರಿಸಿ ಹೋದರು. ಇದನ್ನು ಕಂಡ ಪ್ರಭುದೇವರು ಕಾಯಕದ ಮಹಿಮೆಯ ಅರಿವಾಯಿತು ಎಂದು ಕೊಂಡಾಡಿದರು.

---

೧. ಪ್ರೋ.ಎಚ್. ಎಂ. ಬೀಳಗಿ: ಶಿವಶರಣೆಯರು: ಜೀವನ ಮತ್ತು ಸಾಧನೆ-೧೯೭೯ ಪು.ಸಂ:೩೩

೨. ಪ್ರೋ. ಎಚ್.ಎಂ. ಬೀಳಗಿ: ಶಿವಶರಣೆಯರು ಜೀವನ ಮತ್ತು ಸಾಧನೆ-೧೯೭೯ ಪು.ಸಂ:೩೪

"ಬಸವಣ್ಣ ಮನೆ ನೋಡಾ
ಬಡವರು ಮನನೋಡು ಸಂಪನ್ನರ"೧

ಎಂದು ಉದ್ಗಾರ ತೆಗೆಯುತ್ತಾರೆ. ಆಸೆಯ ಪಾಶವನ್ನು ಹರಿದಾಗಲೇ ಭಕ್ತನ ಮನಸ್ಸು ಪರಿಪಕ್ವವಾಗುತ್ತದೆ. ಅಂದಿನ ಕಾಯಕದ ಪ್ರಯೋಜನ ಅಂದಿಗೆ ಮಾತ್ರ, ನಾಳಿನ ಯೋಚನೆ ಭಕ್ತನಿಗೆ ಬೇಡ ಎಂಬ ಘನ ಆದರ್ಶಗಳನ್ನು ಅರುಹಿದ ಕಾಯಕದ ನಿಜಾರ್ಥವನ್ನು ತಿಳಿಸಿ ತನ್ನ ಪತಿಗೆ ಮಾರ್ಗದರ್ಶನ ಮಾಡಿದ ಮತ್ತು ಹಿರಿಯ ಶರಣರ ಮೇಲೆ ಪ್ರಭಾವ ಬೀರಿದ ಲಕ್ಕಮ್ಮನ ಉಜ್ವಲ ವ್ಯಕ್ತಿತ್ವ ಕಂಡು ಪರೀಕ್ಷಿಸಿದ ಶಿವನು ಇವರಿಗೆ ಗಣಪದವಿಯನ್ನಿತ್ತನು ಎಂದು ತಿಳಿದು ಬರುತ್ತದೆ.

ವಚನಗಳು:- ಇವಳ ವಚನಾಂಕಿತ "ಮಾರಯ್ಯಪ್ರಿಯ ಅಮರೇಶ್ವರ ಲಿಂಗ" ಇವಳ ಸುಮಾರು ೨೫ ವಚನಗಳು ಪ್ರಕಟಗೊಂಡಿವೆ. ಇವಳ ವಚನದಲ್ಲಿ ಮೂಡಿಬರುವ ವಾದ ಕಾಯಕದ ಮಹತ್ವ, ಪತಿಗೆ ಸತಿ ನೀಡುವ ಮಾರ್ಗದರ್ಶನ ಮತ್ತು ಅದಕ್ಕೆ ಪರಿಸರದ ನಿದರ್ಶನ ಕೊಡುವುದು ಕಾಣುತ್ತೇವೆ.

"ಅಡಿ ಒಡೆದ ಕುಂಬದಲ್ಲಿ ಸುಜಲವ ತುಂಬಿದಂತೆ' ಎಂದು ಯಾವ ರೀತಿ ತಳವಿಲ್ಲದ ಮಡಿಕೆಯಲ್ಲಿ ಪವಿತ್ರ ಜಲ ಹಾಕಿದರು ವ್ಯರ್ಥವಾಗುತ್ತದೆ ಹಾಗೆ ಭಕ್ತಿ ಇಲ್ಲದ ಮನಸ್ಸಿನಲ್ಲಿ ಜ್ಞಾನ ತುಂಬಲು ಆಗದು ಎಂದಿದ್ದಾಳೆ.

---

೧. ಪ್ರೋ. ಎಚ್.ಎಂ. ಬೀಳಗಿ: ಶಿವಶರಣೆಯರು ಜೀವನ ಮತ್ತು ಸಾಧನೆ-೧೯೮೯ ಪು.ಸಂ:೫೫

ಇ) ಮುಕ್ತಿಯ ಶಕ್ತಿ ಮುಕ್ತಾಯಕ್ಕ

ಮುಕ್ತಾಯಕ್ಕ ಗದಗ ಜಿಲ್ಲೆಯ ಲಕ್ಕುಂಡಿ ಗ್ರಾಮದಲ್ಲಿ ಜನ್ಮ ತಾಳಿದವಳು. ತಂದೆ ತಾಯಿಯರ ಬಗ್ಗೆ ಮಾಹಿತಿ ದೊರೆಯದು ಆದರೆ ಇವಳ ಲೌಕಿಕ ಮತ್ತು ಅಲೌಕಿಕ ದರ್ಶನದ ಗುರು ಮತ್ತು ಅಣ್ಣನಾದ ಅಜಗಣ್ಣ ಎಂದು ತಿಳಿದು ಬರುತ್ತದೆ. ಅಜಗಣ್ಣ ಮುಕ್ತಾಯಕ್ಕರ ಗುಪ್ತ ಭಕ್ತಿಯಾಗಿತ್ತು. ಅಜಗಣ್ಣನ ಗುಪ್ತಭಕ್ತಿಗೆ ಕಾರಣ. ಒಮ್ಮೆ ವ್ಯವಸಾಯದ ಕಾಯಕದಲ್ಲಿ ಹೊಲದಲ್ಲಿ ಇರುವಾಗ ಅಜಗಣ್ಣ ರಾತ್ರಿ ನಾಗಸರ್ಪ ಬಂದು ತನ್ನ ಹಣೆಯ ಫಣಿರತ್ನ ತೆಗೆದು ಅದರ ಬೆಳಕಿನಲ್ಲಿ ಓಡಾಡಿ ಮೆಯುತಿತ್ತು ಅದನ್ನು ನೋಡಿ ಅಜಗಣ್ಣ ಶಿವಾ ಶಿವಾ ಎಂದನು. ಈ ಧ್ವನಿ ಕೇಳಿ ಅದು ತನ್ನ ರತ್ನವನ್ನು ಹೆಡೆಯಲ್ಲಿಟ್ಟುಕೊಂಡು ಹೋಗುವುದು ಕಂಡು ಅಜಗಣ್ಣ ಒಂದು ಸರ್ಪ ತನ್ನ ಬೆಳಕನ್ನು ಅನ್ಯರಿಗೆ ತೋರಿಸದೆ ತನ್ನ ಕಾಯಕ್ಕೆ ಬಳಸಿಕೊಳ್ಳುವಂತೆ, ತಾನು ಸಹ ತನ್ನ ಜ್ಞಾನರತ್ನ ಅರಿಯಲು ಅಂತರ ಮುಖಿಯಾಗುತ್ತಾನೆ.

ಮುಕ್ತಾಯಕ್ಕಳಿಗೆ ಮದುವೆ ಮಾಡಿ ಅಜಗಣ್ಣ ಮೊಸರಕಲ್ಲು ಗ್ರಾಮಕ್ಕೆ ಕಳುಹಿಸುತ್ತಾನೆ. ಆಗ ತಂಗಿ ದು:ಖದಿಂದ ನಿತ್ಯಸತ್ಯ ದೈವವಾದ ನಿನ್ನಿಂದಗಲುವುದು ನನಗಾಗದು ಎಂದು ಹೇಳುತ್ತಾಳೆ. ಅಜಗಣ್ಣ ತಂಗಿಯನ್ನು ಸಮಾಧಾನ ಮಾಡುತ್ತ ನನಗೆ ಏನು ಆಗದು ಒಂದು ವೇಳೆ ಏನಾದರು ಅನಾಹುತ ಸಂಭವಿಸಿದರೆ "ನೀನು ಮುಡಿಯುವ ಮುನ್ನ ನಿನ್ನ ಮಲ್ಲಿಗೆಯ ದಂಡೆ ಬಾಡುತ್ತದೆ ನೀ ಕಡೆಯುವ ಮೊಸರು ಕಲ್ಲಾಗುತ್ತದೆ"೧ ಎಂದು ಹೇಳಿ ಕಳುಹಿಸುತ್ತಾನೆ.

ಹೀಗಿರುವಾಗ ಒಂದು ದಿನ ಮನೆಯ ಬಾಗಿಲು ಬಡೆದು ಅಜಗಣ್ಣ ಲಿಂಗೈಕ್ಯನಾಗುತ್ತಾನೆ. ಅಣ್ಣನು ಸೂಚಿಸಿದಂತೆ ಅವಳು ಮೊಸರು ಕಡಿಯುವ ಮುನ್ನವೇ ಕಲ್ಲಾದುದು ಕಂಡು ಮುಕ್ತಾಯಕ್ಕ ಓಡಿ ತವರೂರಿಗೆ ಬರುತ್ತಾಳೆ. ಚಿರನಿದ್ರೆಯಲ್ಲಿರುವ ಅಜಗಣ್ಣನ ಕಂಡು ಅತೀವ ದು:ಖದಲ್ಲಿ ಮುಳುಗುತ್ತಾಳೆ. **ಕತ್ತಲೆ ಬೆಳಕು ಕಾಣೆನೆಂಬ ಸಂದೇಹಿ ನಾನೊಬ್ಬಳು** ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿಸೋ ಅಜಗಣ್ಣ ನಿನ್ನ ಈ ಯೋಗ ಎಂದು ಅಣ್ಣನ ಗುಪ್ತ ಯೋಗವನ್ನು ತಾನರಿಯದೆ ಹೋದನೆಂದು ವ್ಯಥೆಪಡುತ್ತಿದಳು. ಆವಾಗ ಅಲ್ಲಮ ಪ್ರಭುಗಳು ಬಂದು "ಅರಿವಿನೊಳಗಣ ಮಹಿದೇನು? ಎಂದಾಗ ಮುಕ್ತಾಯಕ್ಕ ತಲೆಯಳಿದು ನೆತಿಗೆಟ್ಟು ಬೆಳಗುವ ಜ್ಯೊತಿ ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯುವಳಾನಯ್ಯ"೨ ಎಂದು ಅಜಗಣ್ಣನ ಹಿರಿಮೆ ಪರಿಚಯಿಸುತ್ತಾಳೆ.

---

೧. ವಾಣಿಶ್ರೀ. ಎಸ್. ಪಾಟೀಲ್ ಶಿವಶರಣೆಯರು ಸಂಕ್ಷಿಪ್ತ ಜೀವನ ಸಾಧನೆ ಮತ್ತು ವಚನಗಳು ಪು.ಸಂ೨೩

೨. ಪ್ರೋ. ಎಚ್.ಎಂ. ಬೀಳಗಿ: ಶಿವಶರಣೆಯರು ಜೀವನ ಮತ್ತು ಸಾಧನೆ-೧೯೮೩ ಪು.ಸಂ:೪೬

ಪ್ರಭುಗಳು ಅಜಗಣ್ಣನಿಗೆ ತಲೆಬಾಗಿ ಮುಕ್ತಾಯಕ್ಕಳಿಗೆ ಸಂತೈಸುತ್ತಾ ತನ್ನ ತಾನರಿವಡೆ ನುಡಿಯಲ್ಲಿ ಪರತತ್ವ ನೋಡಾ ಎಂದು ಅರಹುತ್ತ ಆಕೆಯ ಸಂದೇಹ ದೂರ ಮಾಡುತ್ತಾರೆ. ಪ್ರಭುಗಳು ಆಗ ಈ ಅಲ್ಲಮನ ಮಾತಿನ ತತ್ವ ಅರಿತ ಮುಕ್ತಾಯಕ್ಕ ಎನ್ನ ಅಜಗಣ್ಣ ತಂದೆಯ ನೊಳಗೊಂಡಿಪ್ಪ ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು ಎಂದು ಕೃತಾರ್ಥ ಭಾವವನ್ನು ವ್ಯಕ್ತಪಡಿಸುತ್ತಾಳೆ.

ಶೂನ್ಯಸಂಪಾದನೆಯಲ್ಲಿ ನಿರೂಪಿತವಾದ, ಸ್ವಾರಸ್ಯ ಪೂರ್ಣವಾದ ಈ ಸನ್ನಿವೇಶ ಮುಕ್ತಾಯಕ್ಕನ ಮಹಿಮಾನ್ವಿತವಾದ ವ್ಯಕ್ತಿತ್ವಕ್ಕೆ ಹಿಡಿದ ದರ್ಪಣವಾಗಿದೆ. ದಿಟ್ಟ ಮನೋಭಾವವುಳ್ಳ ಹಾಗೂ ತಾನರಿತ ತತ್ವ, ನಂಬಿಕೆಗಳ ಬಗ್ಗೆ ದೃಢವಾದ ನಿಲುವುಳ್ಳ ಮುಕ್ತಾಯಕ್ಕ ತನ್ನಂತರಂಗವನ್ನರಳಿಸಿದ ತನ್ನಣ್ಣ ಮತ್ತು ಗುರುವಾದ ಅಜಗಣ್ಣನ ಬಗೆಗೆ ಅಪಾರ ಗೌರವವುಳ್ಳ ಅಲ್ಲಮನಂತಹ ವ್ಯಕ್ತಿ ತನ್ನೆದುರು ವಾದಿಸುತ್ತಿದ್ದರು ಒರೆಗೆ ಹಚ್ಚದೆ ಆತನ ಸಿದ್ಧಾಂತಗಳನ್ನು ಸುಲಭವಾಗಿ ಒಪ್ಪಿಕೊಳ್ಳದ ಪ್ರವೃತ್ತಿ ಮುಕ್ತಾಯಕ್ಕನದು.

ಇಂಥಹ ಅವಿರಳ ಜ್ಞಾನಿ ಮುಕ್ತಾಯಕ್ಕನ ವಚನಾಂಕಿತ "ಅಜಗಣ್ಣದೇವ" "ಅಜಗಣ್ಣ ತಂದೆ" ಇವಳ ೨೦ ವಚನಗಳು ಪ್ರಕಟಗೊಂಡಿವೆ ಇವಳ ವಚನದಲ್ಲಿ ಬೌದ್ಧಿಕ, ತಾತ್ವಿಕ ವಿಷಯುಗಳ ಪ್ರತಿಪಾದನೆಯೇ ಹೆಚ್ಚಾಗಿ ಕಾಣುತ್ತೇವೆ. ಸುಮ್ಮನೆ ದಿನಕಳೆದು ವ್ಯರ್ಥವಾಗಿ ಸಮಯ ಕಳೆಯದೆ, ಸದಾ ಶಿವಧ್ಯಾನದಲ್ಲಿ ಕಾಯಕ ಮಾಡಿ ದಿನಾ ಶಿವರಾತ್ರಿ ಮಾಡಿರಿ ಎಂದು ಶರಣರಿಗೆ ಕರೆಯನ್ನು ನಿಡುತ್ತಾಳೆ. ಇವಳ ಭಕ್ತಿ ಮತ್ತು ಕಾಯಕವು ಹೀಗಿತು. ತನುವು ತೋಟವ ಮಾಡಿ ಮನವ ಗುದ್ದಲಿ ಮಾಡಿ ಬಾಳಿ ಬದುಕಿದ ಶಿವಶರಣೆ ಮುಕ್ತಾಯಕ್ಕ.

ಈ) ಮೋಳಿಗೆಯ ಮಹಾದೇವಿ

ಮೋಳಿಗೆಯ ಮಹಾದೇವಿ ಎಂದು ಖ್ಯಾತಳಾದ ಶರಣೆ ಕಾಶ್ಮೀರದ ದೊರೆಯಾದ ಮಹಾದೇವ ಭೋಪಾಲನ ಪತ್ನಿ ಈ ಶರಣ ದಂಪತಿಗಳು ಶಿವಭಕ್ತರು, ಜಂಗಮ ಆರಾಧಕರು ಆಗಿದ್ದರು. ಇವರು ಕಲ್ಯಾಣದಲ್ಲಿರುವ ಬಸವಣ್ಣನವರ ಮಹಿಮೆಯನ್ನು ಕೇಳಿ ಅವರನ್ನು ಕಾಣಬೇಕೆಂದು ಕಲ್ಯಾಣಕ್ಕೆ ಬರಲು ಸಿದ್ಧನಾದನು ಆಗ ಅವರೊಡನೆ ಪತ್ನಿ ಗಂಗಾದೇವಿಯು ಹೊರಟು ನಿಂತಳು. ಅವಳನ್ನು ಕಂಡು ಮಹಾದೇವ ದೊರೆ ನಡುಬೀದಿಯಲ್ಲಿ ನಿರ್ವಾಣವಾಗುವಿಯಾ? ಎಂದು ಹೇಳುತ್ತಾನೆ ಗಂಗಾದೇವಿ ಅದಕ್ಕೆ ಸಿದ್ಧಳಾದಾಗ ದೊರೆ ನಿನ್ನಿಂದಲೇ ಮುಕ್ತಿ ಎಂದು ಸತಿಯೊಡನೆ ಕಲ್ಯಾಣಕ್ಕೆ ಬರುತ್ತಾನೆ. ಕಲ್ಯಾಣದಲ್ಲಿ ಬಂದು ಕಟ್ಟಿಗೆ ಕಡಿದು ಮಾರಿ ಅದರಿಂದ ಬಂದ ಕಾಯಕದ ಫಲದಿಂದ ಜಂಗಮಾರೋಹಣವನ್ನು ಶ್ರದ್ಧೆ, ಭಕ್ತಿಯಿಂದ ಪತಿ-ಪತ್ನಿಯರು ಮಾಡುತಿದ್ದರು. ಒಮ್ಮೆ ಇವರ ಭಕ್ತಿ ಪರೀಕ್ಷಿಸಲು ಬಸವಣ್ಣ ಮಾಹಾದೇವಿಯಮ್ಮನ ಆತಿಥ್ಯ ಪಡೆದು ಅಮೃತ ಸದೃಶ ಅಂಬಲಿಯನ್ನುಂಡು ಎರಡು ಸಾವಿರ ಹೊನ್ನಜಾಳಿಗೆಗಳನ್ನಿರಿಸಿ ಮನತುಂಬಿ ಆ ಮನೆಯನ್ನು ಕೊಂಡಾಡುತ್ತ ಹೋಗುತ್ತಾರೆ.

ಮಾರಯ್ಯನವರು ಮನೆಗೆ ಬಂದಾಗ ಮಾಹಾದೇವಿ ನಡೆದ ವಿಷಯವನ್ನು ತಿಳಿಸಲು. ಬಂದ ಜಂಗಮ ಬಸವಣ್ಣನೆಂದು ಅರಿತು ಆ ಹೊನ್ನ ಜಾಳಿಗೆಗಳನ್ನು ಜಂಗಮರಿಗಿತ್ತು, ತಾವು ತಂದ ಕಟ್ಟಿಗೆಯ ಹೊರೆಗಳ ಮೇಲೆ ಜಂಗಮ ಪಾದೋದಕ ಸಿಂಪಡಿಸಿದಾಗ ಅವು ಬಂಗಾರದ ಕಟ್ಟಿಗೆಗಳಾಗುತ್ತವೆ. ಮಾರಯ್ಯನವರೂ ಅದನ್ನು ಜಂಗಮರಿಗಿತ್ತು ಕೃತಾರ್ಥರಾಗುತ್ತಾರೆ. ಹೀಗೆ ನಿರ್ಮೋಹಿಗಳಾದ ಶರಣ ದಂಪತಿಗಳಿಗೆ ಕಂಡು ಬಸವಣ್ಣನವರು ಕ್ಷಮೆ ಯಾಚಿಸಿದರು ಅರಮನೆ ಸು:ಖ ತೊರೆದು ಪತಿಯೊಂದಿಗೆ ವ್ರತ, ನಿಯಮ ಬಪ್ಪಳಾಗಿ ದಾಸೋಹ ನಿರ್ವಹಿಸುತ್ತಿರುವ ಈಕೆಯ ವ್ಯಕ್ತಿತ್ವ ಉಜ್ವಲವಾದದ್ದು. ನಿರ್ಮೋಹಿಗಳಾದ ಇವಳಿಗೆ ಶೂನ್ಯ ಸಂಪಾದನೆಯಲ್ಲಿ ವಿಶಿಷ್ಟ ಸ್ಥಾನವಿದೆ. ಕಲ್ಯಾಣ ಕ್ರಾಂತಿಯ ನಂತರ ಮಾರಯ್ಯ ಶರಣರೆಲ್ಲರಂತೆ ತಾನು ಐಕ್ಯವಾಗಬೇಕೆಂದು ಬಯಸಿದಾಗ ಮಹಾದೇವಿ ಎನಗೆ ಮೃತ್ಯುದ ಮಣಿಹ ಕೃತ್ಯವಿನ ನೈಪುಣ್ಯದಿ? ಎಂದು ತಲ್ಲಣಗೊಳುತ್ತಾರೆ. ಮಾಹಾದೇವಿ ಮಾಡಿದ ಭಕ್ತಿಯಿಂದ ಕೈಲಾಸದಲ್ಲಿ ಹೊದೆವು ಎಂದು ಕೈ ಕೂಲಿ ಮಾಹಾದೇವಿ ತನ್ನಪತಿಗೆ ಹೇಳಿದ್ದಳು. ಅದೇಕಯ್ಯಾ ಶವನೊಳಗೆ ಕೂಟಸ್ಥನಾದೆಹನೆಂಬ ಹಲುಬುವೆ? ಇದು ಭಕ್ತಿ ಸತ್ಯದ ಆಟವಲ್ಲ ಎಂದು ಹೇಳುತ್ತಾಳೆ. ಎಂದು ಹೀಗೆ ಹೇಳುವಳು ಕೈಯಲ್ಲಿ ಜ್ಯೋತಿಯನ್ನಿಡಿದು ಕತ್ತಲಲ್ಲಿ ಏಕೆ ಇರುವೆ?.

"ಘೃತ ಘೃತವ ಬೇರೆಸಿದಂತೆ
ಕ್ಷೀರ ಕ್ಷೀರವ ಬೆರಸಿದಂತೆ

ತೈಲ ತೈಲವ ಬೆರಸಿದಂತೆ
ಬಯಲು ಬಯಲು ಬೆರೆಸಿದಂತೆ
ಲಿಂಗಸಮರನಾಗುತ್ತಾನೆ" [೧]

ಇವಳ ವಚನಾಂಕಿತ ಎನ್ನಯ್ಯಪ್ರೀಯ ಇಮ್ಮಡಿನಿ : ಕಳಂಕ ಇವಳು ಸುಮಾರು ೬೯ ವಚನಗಳನ್ನು ಬರೆದಿದ್ದಾಳೆ. ಅನೂಕುಲ ಸತಿಯಾಗಿ ಭಕ್ತಿಗೆ ಜ್ಞಾನದ ಮುಕ್ತಿಯಾಗಿ ಪತಿಗೆ ಮಾರ್ಗದರ್ಶಕಳಾಗಿ ಬದುಕಿದ ಶರಣೆ ಮೋಳಿಗೆಯಲ್ಲಿ ಐಕ್ಯಳಾದಳು. ಇವಳ ವಚನವಲ್ಲಿ ಭಕ್ತಿಯ ಉತ್ಕಟತೆಯ ಜೊತೆಗೆ ಮಾನವನ ಮತ್ತು ಪ್ರಕೃತಿಯ ಮಧ್ಯ ಇರುವ ವ್ಯತ್ಯಾಸವನ್ನು ವಿವರಿಸುತ್ತಾಳೆ. ಯಾವುದೇ ಪ್ರತಿ ಫಲ ಅಪೇಕ್ಷೆ ಇಲ್ಲದೆ ಯಾವುದೇ ಭೇದವಿಲ್ಲದೆ ಜಲ, ನೆಲ, ಮರಗಳು ಮಾನವನ ಬದುಕಿಗೆ ಹೇಗೆ ಸಾಹಾಯಕವಾಗಿ ತಮ್ಮ ಬದುಕು ಸಾರ್ಥಕ ಗೋಳಿಸುಕೊಳ್ಳುತ್ತೇವೆ. ಹಾಗೆ ಮಾನವರು ಕಾಯಕ ನಿರತರಾಗಿ ಶಿವಭಕ್ತಿಯಲ್ಲಿ ಕಾಯಕವ ಮಾಡಿ ಕೃತಾರ್ಥರಾಗಬೇಕು ಎಂದು ಸನ್ನಮಾರ್ಗ ತೋರಿದ ಧೀಮಂತ ಶಿವಶರಣೆ ಮೋಳಿಗೆ ಮಾಹಾದೇವಿ.

---

೧. ಪ್ರೋ.ಎಚ್.ಎಂ. ಬೀಳಗಿ– ಶಿವಶರಣೆಯರು : ಜೀವನ ಮತ್ತು ಸಾಧನೆ–೧೯೮೩ ಪು.ಸಂ:೬೩

ಉ) ಅಮ್ಮುಗೆಯ ರಾಯಮ್ಮ :

ಅಕ್ಕಮಹಾದೇವಿಯ ನಂತರ ಹೆಚ್ಚಿನ ಸಂಖ್ಯೆಯಲ್ಲಿ ವಚನಗಳನ್ನು ರಚನೆ ಮಾಡಿದ ನಾಲ್ಕಾರು ಜನ ಶರಣೆಯರ ಸಾಲಿನಲ್ಲಿ ಎದ್ದು ಕಾಣುವ ಶರಣೆ ಅಮ್ಮುಗೆಯ ರಾಯಮ್ಮ ಶಿವಭಕ್ತೆಯಾಗಿದ್ದಳು ಇವಳ ಪತಿ ನೇಕಾರ ಕಾಯಕದ ಶಿವಭಕ್ತ ರಾಯಸಿದ್ಧ ಮಂಚಣ್ಣ.

ಇವರ ಭಕ್ತಿಗೆ ಒಂದು ನಿದರ್ಶನ ಕಾಣಬಹುದು. ಒಮ್ಮೆ ಸಿದ್ಧರಾಮನು ಮಲ್ಲಿಕಾರ್ಜುನ ಆರಾಧನೆಗಾಗಿ ಊರೆಲ್ಲ ಕೂಟ್ಟಣ ಹಾರಿಸಿದನು ಅಮ್ಮುಗೆಯ ರಾಯಮ್ಮನ ಮನೆಗೂ ಸಹ ಅಕ್ಕಿ ಕಳುಹಿಸುತ್ತಾನೆ ಆಗ ಅಮ್ಮುಗಯ್ಯ ತಾವು "ಏಕಲಿಂಗ ನಿಷ್ಠೆಯುಳ್ಳವರು ಅಂಗದ ಮೇಲೆ ಲಿಂಗವಿಲ್ಲದ ಭವಿಯ ಸೇವಿಸೆವು"೧ ಎಂದು ಭತ್ತವನ್ನೆಲ್ಲಾ ತಿಪ್ಪಿಗೆ ಹಾಕಿದಾಗ ಕೋಪಗೊಂಡ ಸಿದ್ಧರಾಮ ಅವರನ್ನು ಊರಿನಿಂದ ಹೋರಗೆ ಹೋಗುವಂತೆ ಆಜ್ಞೆಮಾಡುತ್ತಾರೆ. ಆಗ ರಾಯಮ್ಮ ಮತ್ತು ಅವಳ ಪತಿ ಸಿದ್ಧರಾಗಿ ತಮ್ಮ ಪಾತ್ರೆಗಳನೆಲ್ಲಾ ಕಟ್ಟಿ ಮೂರು ಗಂಟುಮಾಡಿ ಒಂದು ರಾಯಮ್ಮ ಮತ್ತೊಂದು ಅವಳ ಪತಿ ತೆಗೆದುಕೊಂಡು ಇನ್ನೊಂದನ್ನು ಅಮ್ಮುಗಯ್ಯ ಮಲ್ಲಯ್ಯನಿಗೆ ಹೊರಿಸಿ ಇದನ್ನು ನೀನು ಮುಂದಣ ಊರಿಗೆ ತೆಗೆದುಕೊಂಡು ಬಾ ಎಂದನು. ಆಗ ಶಿವನು ಅವರ ಗಟ್ಟು ಮುಂದಿನ ಗ್ರಾಮಕೆ ಹೋತ್ತುಕೊಂಡು ಹೋದನೆಂದು ಮಲ್ಲಯ್ಯ ಸಿದ್ಧರಾಮನಿಗೆ ತಿಳಿಸಿದ್ದಾಗ ತನ್ನ ತಪ್ಪಿನ ಅರಿವು ಉಂಟಾಗಿ ಸಿದ್ಧರಾಮ ಮಲ್ಲಯ್ಯನಲ್ಲಿ ಕ್ಷಮೆ ಕೇಳಿ ಅವರಿಗೆ ಪುನಃ ಮರಳಿ ಊರಿಗೆ ಬರಲು ಹೇಳಿದಾಗ. ರಾಯಮ್ಮ ದಂಪತಿಗಳು ಕಲ್ಯಾಣದ ಕಡೆಗೆ ಹೋಗುವುದಾಗಿ ತಿಳಿಸಿದರು.

ಕಲ್ಯಾಣಕ್ಕೆ ಬಂದು ಬಸವಾದಿ ಶಿವಶರಣ ಶರಣೆಯರ ಅನುಭಾವ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದರು. ಸೃಷ್ಟಿಯನ್ನು ಅತಿ ಹತ್ತಿರದಿಂದ ಕಂಡ ಶರಣೆಯರು ತಮ್ಮ ವಚನಗಳಲ್ಲಿ ಪ್ರಕೃತಿಯ ವಸ್ತುಗಳನ್ನು ನಿದರ್ಶನ ನೀಡುತ್ತಾ ಸಮಾಜದ ಜನರಿಗೆ ತಾವು ಕಂಡುದನ್ನು. ಚುಚ್ಚು ನುಡಿಯಿಂದ ಆಡಿ ತೋರಿಸುವ ನೇರ ನುಡಿ ಅಮ್ಮುಗೆಯ ರಾಯಮ್ಮನ ವಚನದಲ್ಲಿ ಕಾಣುತ್ತೇವೆ.

೧೨ನೇ ಶತಮಾನದಲ್ಲಿ ಬಾಳಿ ಬದುಕಿದ. ಈ ಶರಣೆಯ ವಚನಾಂಕಿತ "ಅಮುಗೇಶ್ವರಲಿಂಗ" ಇವಳ ಸುಮಾರು ೧೧೬ ವಚನಗಳು ಪ್ರಕಟಗೊಂಡಿವೆ. ಇವಳು ತನ್ನ ವಚನದ ಮೂಲಕ ಸೃಷ್ಟಿ ಮತ್ತು ಮಾನವನ ಅನನ್ಯ ಸಂಬಂಧಗಳನ್ನು ಪ್ರಕಟ ಪಡಿಸಿದ್ದಾಳೆ.

---

೧. ಪ್ರೋ.ಎಚ್.ಎಂ. ಬೀಳಗಿ: ಶಿವಶರಣೆಯರು : ಜೀವನ ಮತ್ತು ಸಾಧನೆ-೧೯೮೯ ಪು.ಸಂ:೭೭

ಊ) ಸತ್ಯ ಶಿವರಣೆ ಸತ್ಯಕ್ಕೆ

ಸತ್ಯಕ್ಕ ತುಂಬಾ ವಿಶಿಷ್ಟ ವ್ಯಕ್ತಿತ್ವದ ಶರಣೆ. ಹರಿಹರನನ್ನೂ ಮೊದಲುಗೊಂಡು ಆನಂತರದ ಅನೇಕ ವೀರಶೈವ ಪುರಾಣಕಾರರು ಇವಳ ಬಗ್ಗೆ ತುಂಬಾ ಉತ್ಸಾಹದಿಂದಲೇ ಬರೆದಿದ್ದಾರೆ.

ಅಂಬೂರೆಂಬ ಪುರದಲ್ಲಿ ಸತ್ಯಕ್ಕನೆಂಬ ಒಬ್ಬ ಶಿವಭಕ್ತಿನಿಷ್ಠೆಯ ಶಿವರಣೆಯಿದ್ದಳು. ಶಿವನ ಶಬ್ದವನ್ನಲ್ಲದೆ ಅನ್ಯ ಶಬ್ದವ ಕೇಳಲೊಲ್ಲೆನೆಂಬ ನೇಮದಿಂದಿದ್ದಳು. ಶಿವಭಕ್ತರ ಮನೆಯ ಅಂಗಳವನ್ನು ಗುಡಿಸಿ ಸಮ್ಮಾರ್ಜನೆಯನ್ನು ಮಾಡಿ, ಅವರು ನೀಡಿದ ದವಸ ಧಾನ್ಯಗಳಿಂದ ಶಿವಾರ್ಚನೆ ಮತ್ತು ಜಂಗಮ ದಾಸೋಹಗಳನ್ನು ನೆರವೇರಿಸುತ್ತ, ಸದಾ ಭಸ್ಮ ರುದ್ರಾಕ್ಷಿ ಮತ್ತು ಶಿವಧ್ಯಾನದಲ್ಲಿರುತ್ತಿದ್ದಳು.

ಈ ಪರಿಯ ಶಿವನಿಷ್ಠೆ ನೇಮಗಳಿಂದ ಸತ್ಯಕ್ಕನಿರಲು, ಒಂದು ದಿವಸ ಶಿವನಲ್ಲದೆ ಅನ್ಯ ಶಬ್ದವ ಕೇಳಲೊಲ್ಲೆನೆಂಬ ಭಕ್ತೆಯ ಮನವ ನೋಡಬೇಕೆಂದು ಮನದಂಡ ಶಿವನು, ಕಂತೆ ಕಮಂಡಲಗಳನ್ನು ಹಿಡಿದು, ದಂಡಿಕೋಲು ಗುಂಡುಗಪ್ಪವ ಏರಿಸಿ, ಭಿಕ್ಷುಕನಾಗಿ ಸತ್ಯಕ್ಕನ ಮನೆಯ ಮುಂದೆ ಬಂದು ನಿಂದು, ಭಿಕ್ಷೆಯ ಬೇಡಿದನು. "ಆಗ ಹುಟ್ಟಲಲ್ಲಿ ಭಿಕ್ಷವ ತಂದು, ಜೋಳಿಗೆಯನಾಚಿತು ಭಿಕ್ಷವ ನೀಡಿದಾಗ, ಹರಿದ ಜೋಳಿಗೆಯಿಂದ ಒಂದು ಅನ್ನದ ಅಗುಳು ನೆಲಕ್ಕೆ ಬೀಳಲು, ಆ ಭಕ್ತೆಯ ಕಿವಿಗೆ ಕೇಳುವಂತೆ ಆ ಭಿಕ್ಷುಕನು ಹರಿದ ಹರಿಯಿಂದ ನೆಲಕ್ಕೆ ಬಿದ್ದತ್ತು ಜೋಳಗೆ; ಆಚೆಲಿ ಹರಿ, ಈಚೆಲಿ ಹರಿ. ಹರಿಯಿಂದ ಭಿಕ್ಷೆಸೂಸಿತು ಎಂದವನು ನುಡಿಯುತ್ತಿದ್ದಂತೆ, ಅತಿಕ್ರುದ್ಧಳಾದ ಸತ್ಯಕ್ಕನು ಹರನ ವೇಷವ ತೊಟ್ಟು ಗುರುಮೂರ್ತಿಯಂತೆ ತೋರಿ ಹರಿ ಹರಿ ಎಂದು ಹರಿನಾಮ ನುಡಿದನಲ್ಲಾ ಎಂದು ಎಯಲ್ಲಿದ್ದ ಸುಟ್ಟಗದಿಂದ ಅವನ ಮುಖದ ಮೇಲೆ ಬಾರಿಸಿದಳು. ಅದರ ಪರಿಣಾಮವಾಗಿ ಹಲ್ಲು ಮುರಿದು, ಮುಖವೊಡೆದು ಗೋಳಾಡುತ್ತ ಬೀದಿಗೋಡಿಬರಲು ಪುರಜನರೆಲ್ಲ ನೆರೆದು ನೋಡಲಾಗಿ ಸತ್ಯಕ್ಕನು ಸತ್ಯವುಳ್ಳ ಭಕ್ತಳೆಂದು ಭಿಕ್ಷಕ್ಕೆ ಹೋದರೆ, ನನ್ನನೀ ಪರಿಯಲಿ ಕೊಂದಳು ಎಂದವನು ಗೋಳಾಡಲು ಸತ್ಯಕ್ಕನು ಭಿಕ್ಷುಕನ ಕೊಲಬಹುದೆ ಎಂದು ಪುರಜನರು ಉದ್ಗಾರ ತೆಗೆದರು. ಆಗ ಭಿಕ್ಷುಕ ಹೆದರಿ ನಡುಗುತ್ತ ಹರಿದ ಜೋಳಗೆಯಲ್ಲಿ ಒಂದಗಳು ಚೆಲ್ಲಿದೊಡನೆ ಕೊಂದಳೆನ್ನನ್ನು ಎಂದು ದೂರಿದನು. ಪುನಃ ಅವನನ್ನು ಹೊಡೆಯಲು ಸತ್ಯಕ್ಕನು ಭರದಿಂದ ಮುನ್ನುಗ್ಗಲು ಶಿವನು ತನ್ನ ನಿಜರೂಪವನ್ನು ತೋರಿ ನಿಂತು ಮೈಚ್ಚಿದೆ ನಿನ್ನ ಭಕ್ತಿಯನು. ನಿನಗೇನು ಬೇಕು ಬೇಡು ಎಂದನು. ಶಿವನ ನಿಜ ರೂಪವನ್ನು ಕಂಡು ಪರಮ ಸಂತುಷ್ಟಳಾದ ಸತ್ಯಕ್ಕನು ಶಿವನಿಗೆ ಹೊಡೆದುದಕ್ಕಾಗಿ ಅಪಾರ ನೊಂದಳು. ಆಗ ಶಿವನು ಅವಳಿಗೆ ನಿಜ ಪದವಿಯನ್ನು ನೀಡಿದನು" ೧

---

೧. ಡಾ.ಮ.ಸ. ಜವರಯ್ಯ ದಲಿತವರ್ಗದ ಶರಣರು ಮತ್ತು ಶರಣೆಯರು ೧೯೯೭ ಪು.ಸಂ ೨೫೬-೫೭

ಇದೇ ಪವಾಡ ಘಟನೆಯನ್ನು ಇತ್ತೀಚಿನ ಕವಿಯಾದ ತೋಂಟದ ಸಿದ್ಧಲಿಂಗ ಶಿವಯೋಗಿಯು ತನ್ನ ಪಾಲ್ಕುರಿಕೆ ಸೋಮೇಶ್ವರಪುರಾಣದಲ್ಲೂ ವಿವರಿಸುತ್ತಾನೆ. ಆದರೆ ಶಾಂತಲಿಂಗದೇಶಿಕನ ಕಾವ್ಯದಲ್ಲಿ ಆ ಪ್ರಾಸಂಗಿಕ ಕಥಾನಕ ಹೆಚ್ಚು ವಿವರಗಳನ್ನು ನೀಡುತ್ತದೆ. ಅಷ್ಟೇ ಅಲ್ಲದೆ ಆ ಪ್ರಾಸಂಗಿಕ ಕಥಾನಕದಲ್ಲಿನ ನಾಟಕೀಯ ನಿರೂಪಣೆ, ಸತ್ಯಕ್ಕನ ವ್ಯಕ್ತಿ ಪಾತ್ರದ ಚಿತ್ರಣ, ಪುರಜನರಪ್ರತಿಕ್ರಿಯೆತ ಮುಂತಾದ ವಿವರಗಳೆಲ್ಲ ಸೇರಿ ಸತ್ಯಕ್ಕನ ವೀರನಿಷ್ಠೆಯನ್ನೂ ಉತ್ಕಟ ಶಿವಭಕ್ತಿಯನ್ನೂ ಆ ಕಾವ್ಯ ಕಟ್ಟಿಟಕೊಡುತ್ತದೆ. ಅಷ್ಟೇ ಅಲ್ಲಲ್ಲೆ ಶರಣ ಧರ್ಮದಲ್ಲಿ ಅವಳು ತಳೆದ ವೀರನಿಷ್ಠೆಯೂ ಉತ್ಕಟ ಶಿವಭಕ್ತಿಯೂ ಅವಳಲ್ಲಿ ಸುಮ್ಮನೇ ಸೃಷ್ಟಿಯಾಗಿರಲು ಸಾಧ್ಯವಿಲ್ಲ. ಬಹುಶಃ ಅವುಗಳಿಂದ ಅವಳೇನೋ ಜೀವನದ ಸಾರ್ಥಕತೆಯನ್ನು ಪಡೆದಿರಲೇಬೇಕು. ಅದಕ್ಕೆ ಪ್ರತಿಯಾಗಿ ಜೀವನದ ಹಂಗು ತೊರೆದು, ಆ ಧರ್ಮದ ರಕ್ಷಣೆಗಾಗಿ ದುಡಿದವಳೇ ಆಗಿರಬೇಕೆಂಬುದನ್ನು ಶಾಂತಲಿಂಗದೇಶಿಕನ ಕಾವ್ಯ ತುಂಬಾ ಧ್ವನಿ ಪೂರ್ಣವಾಗಿಯೇ ಕಟ್ಟಿಕೊಡುತ್ತದೆ.

ಇನ್ನು ಸತ್ಯಕ್ಕನ ಜೀವನ ಸಂಬಂಧಿಯಾದ ಈ ಪ್ರಾಸಂಗಿಕ ಕಥಾನಕದ ವಿವರಗಳ ವಿಷಯದಲ್ಲಿ ಲಕ್ಕಣ್ಣ ದಂಡೇಶನಿಗೂ ಶಾಂತಲಿಂಗದೇಶಿಕನಿಗೂ ಇರುವ ಅಚಿತರ ಎರಡು ಶತಮಾನಗಳಷ್ಟು. ಅಚಿದರೇ, ಈ ಪ್ರಾಸಂಗಿಕ ಕಥಾನಕಗಳು ಶರಣ ಧರ್ಮದ ಪರಂಪರೆಯಲ್ಲಿ ಶತಮಾನಗಳಿಂದಲೂ ಹೀಗೇ ಬೆಳೆದು ನಿರಂತರವಾಗಿ ಜನಮರದಲ್ಲಿ ಮನೆಮಾಡುತ್ತ ನಡೆದುಬಂದಿದೆ ಎಂಬುದು ತನ್ನ ತಾನೇ ಇಲ್ಲಿ ವೇದ್ಯವಾಗುತ್ತದೆ.

೫) ಧೀರಮಾತೆ ನಾಗಲಾಂಬಿಕೆ

ಅಕ್ಕ ನಾಗಲಾಂಬಿಕೆ ಬಸವಣ್ಣನವರ ಅಕ್ಕ ಮಾದರಸ-ಮೊದಲಾಂಬೆಯವರ ಹಿರಿಮಗಳು. ಈಗೆ ಬಸವಣ್ಣನವರಿಗಿಂತ ಹದಿನೈದು ಪುರುಷ ಹಿರಿಯವಳು. ಈಕೆಯ ಜನನ "ಕ್ರಿ.ಶ. ೧೧೬ ಶ್ರಾವಣ ಶುದ್ಧ ಪಂಚಮಿ. ಈಕೆಯ ನಂತರ ಮಕ್ಕಳಾಗದ್ದರಿಂದ ಮಾದಲಾಂಬೆ ನಂದಿವ್ರತ ಆಚರಿಸಿ ಬಸವೇಶ್ವರರಿಗೆ ಜನಮ್ಮ ನೀಡುತ್ತಾಳೆ. ಒಂದು ದಿನ ವಚನವೊಂದನ್ನು ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಹಿರಿಯ ಸೋದರ ಮಾನವ ಮಗ ಶೀವದೇವರನ್ನು ಹಿರಿಯರ ಆಜ್ಞೆಯ ಮೇರೆಗೆ ಮದುವೆಯಾಗುತ್ತಾಳೆ. ಆದರೆ ಈ ಸಂಸಾರ ಸಾರವಿಲ್ಲದ್ದಾಗುತ್ತದೆ. ಅಲ್ಲಿ ಸರಸಕ್ಕಿಂತ ವಿರಸವೆ ಅತಿಯಾಗುತ್ತದಾದರೂ ಅದನ್ನೆಲ್ಲಾ ದಿಟ್ಟತನದಿ ಎದುರಿಸುತ್ತಾಳೆ. ಅಕ್ಕ ನಾಗಲಾಂಬಿಕೆ ಸ್ತ್ರೀಯರಲ್ಲಿ ಜೇಡರ ದಾಸಿಮಯ್ಯಗಳ ಪುಣ್ಯಸ್ತ್ರೀ ಮೊದಲ ವಚನಕಾರ್ತಿಯಾದರೆ ಎರಡನೇಯವರೆ ಅಕ್ಕನಾಗಲಾಂಬಿಕೆ. ಈಕೆಯ ೧೫ ವಚನಗಳು ದೊರೆತಿವೆ. ಅವುಗಳಲ್ಲಿ ಪ್ರಮುಖವಾದವು ಆತ್ಮಾವಲೋಕನ ಪರವಾದವುಗಳು." ೧

ಬಸವಣ್ಣನವರ ಕ್ರಾಂತಿಕಾರಿ ವಿಚಾರಧಾರೆಗೆ ನೀರೆರೆದು ಪೋಷಿಸಿ ಬೆಳೆಸಿದ ಧೀನ ಮಾತೆಯೀಕೆ. ಬಸವಣ್ಣ ಈಕೆಗೆ ಲೋಕರೂಢಿಯಂತೆ ತಮ್ಮ ಅಲೋಕದಲ್ಲಿ ಆಧ್ಯಾತ್ಮದ ವಿಚಾರದಲ್ಲಿ ಆತ ಗುರು-ಶಿಷ್ಯ, ತಂದೆ-ಮಗ. ಬಸವಣ್ಣನಲ್ಲಿ ಸಕಲ ದೈವವನ್ನೂ ಕಂಡಾಕೆ ಈ ಅಕ್ಕ, ಮಹಾಜ್ಞಾನಿ ಚನ್ನಬಸವಣ್ಣನಿಗೆ ಜನ್ಮ ನೀಡಿದ ಮಹಾಮಾತೆ ಚೆನ್ನಬಸವಣ್ಣನಿಗೆ ಜನ್ನ ನೀಡಿದರೆ ಬಸವಣ್ಣನಿಗೆ ಸಕಲ ವಿಚಾರಕ್ಕೂ ಆದಿಯಾದಳು. ಅಕ್ಕನಾಗಲಾಂಬಿಕೆ ಅಂದು ಅಂತಹ ದಿಟ್ಟ ನಿಲುವು ತೆಗೆದುಕೊಳ್ಳದಿದ್ದರೆ ಶೋಷಿತ ವರ್ಗದಲ್ಲೊಬ್ಬಳಾಗಿ ಬಿಡುತ್ತಿದ್ದಳು. ಎಂತಹ ದಿಟ್ಟ ನಿಲುವು ಈ ತಾಯಿಬಿದುದು. ಅತ್ಯಂತ ಸಂಪ್ರದಾಯದ ಅಂದಿನ ಸಮಯದಿಲ್ಲ ಹೆತ್ತವರನ್ನು ತೊರೆದು ಕೈ ಹಿಡಿದ ಪತಿ ಇದಕ್ಕೆ ಸ್ಪಂಧಿಸಿದ ಕಾರಣ ಆತನ ಹಂಗನ್ನೂ ಹರಿದೊಗೆದು ಅಖಂಡ ಮನುಕುಲದ ಉದ್ಧಾರಕ್ಕೆ ಕಂಕಡ ಕಟ್ಟಿ ನಿಂತ ಬಸವಣ್ಣನವರಿಗೆ ಬೆಂಗಾವಲಾಗಿ ಹೋದ ಈಕೆಯ ತ್ಯಾಗ ಸಾಮಾನ್ಯವಾದುದಲ್ಲ. ಬಸವಣ್ಣನನ್ನು ಬೆಳೆಸಿದಳು, ಬಸವಣ್ಣನನ್ನು ಪೋಷಿಸಿದಳು, ಬಸವಣ್ಣನನ್ನು ಅನುಸರಿಸಿದಳು, ಕೋನೆಯವರೆಗೂ ದೈವನೆಂಬಂತೆ ಬಸವಣ್ಣನನ್ನೇ ನಂಬಿದಳು. ಅನುಸರಿಸಿದಳು, ಕೊನೆಯವರೆಗೂ ಕಾರಣಳಾದಳು. ಆದ್ದರಿಂದ ಬಸವನಾಮಸ್ಮರಣೆಗೆ ಆತನನ್ನು ದ್ವಿತೀಯ ಶಂಭುವಾಗಲು ಕಾರಣಳಾದಳು. ಆದ್ದರಿಂದ ಬಸವನಾಮಸ್ಮರಣೆಗೆ ಮುನ್ನ ಅಕ್ಕ ನಾಗಲಾಂಬೆಯ ಸ್ಮರಣೆಯೂ ಕೂಡ ಅಷ್ಟೇ ಮಹತ್ತರವಾದದ್ದು.

---

೧. ವಾಣಿಶ್ರೀ ಎಸ್. ಪಾಟೀಲ್ -ಶಿವಶರಣೆಯರ ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ವಚನಗಳು ಪು.ಸಂ೬೨

ಅಂದು ಅಕ್ಕ ತಮ್ಮಂದಿರು ಸಾಗಿದ ಮಾರ್ಗ ಹೂವಿನ ಹಾಸಿಗೆಯಾಗಿರಲಿಲ್ಲ. ಅದು ಬರೀ ಕಲ್ಲು ಮುಳ್ಳುಗಳಿಂದಲೇ ತುಂಬಿತ್ತು. ಮುಂದೆ ತಮ್ಮ, ಹಿಂದೆ ಅಕ್ಕ. ಹೀಗೆ ಸಾಗಿವರು ಮದಲು ಕೂಡ ಸಂಗಮಕ್ಕೆ ನಂತರ ಮಂಗಳವಾಡಕ್ಕೆ ಆ ಮೇಲೆ ಕಲ್ಯಾಣಕ್ಕೆ ಒಂದುಕ್ಷಣವೂ ಅಗಲಲಾರದೆ. ಮುಂದೆ ಬಂದ ಮಣಿಹ ಸಂದಿದಾಗ ಅನಿವಾರ್ಯವಾಗಿ ಕಲ್ಯಾಣ ಕ್ರಾಂತಿ ಏನೆಲ್ಲವನ್ನೂ ಮಾಡಿತು ಎಲ್ಲಾ ಸಂಬಂಧಗಳನ್ನು ಹರಿದೊಗೆಯಿತು. ಎಲ್ಲರನ್ನೂ ಚೆಲ್ಲಾಪಿಲ್ಲಾಗೊಳಿಸಿತು. ಬಸವಣ್ಣನವರು ಅಕ್ಕನಿಂದ ಬೇರ್ಪಟ್ಟಾಗ ಬರೆದ ಮೂರ್‍ನಾಲ್ಕು ವಚನನಗಳು ಕರುಳನ್ನು ಹಿಂಡುತ್ತವೆ.

ಚೇಹಾಭಿಮಾನಗಳಾಗದೆ ಧ್ಯೇಯಾಭಿಂಆನಿಗಳಾಗಿ ವಚನ ಸಾಹಿತ್ಯದ ರಕ್ಷಣೆಗಾಗಿ ಅಳಿಯ ರಾಜನ ಸೈನ್ಯಕ್ಕೆದುರಾಗಿ ಕೈಯಲ್ಲಿ ಕತ್ತಿಯನ್ನು ಹಿಡದಳು. ಉಳುವಿಯನ್ನು ತಲುಪಿದ ವಚನ ಸಾಹಿತ್ಯ ಅದೇ ಜಾಗದಲ್ಲುಳಿದರೆ ಅಪಾಯ ಒದಗಹುದೆಂದು ಅದನ್ನು ಪ್ರತಿ ಮಾಡಿಸಬೇಕೆಂದು ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತಳಾದಳು. ನುಲಿಯ ಚಂದಯ್ಯನವರು ಈ ಕೆಲಸ ಸಮರ್ಪಕವಾಗಿದೆ ಎಂದು ಅಕ್ಕನಾಗಲಾಂಬಿಕೆಯವರಿಗೆ ಮನದಟ್ಟು ಮಾಡಿ ಕೊಟ್ಟ ಮೇಲೆ ತನ್ನ ಕೆಲಸ ಮುಗಿಯಿತೆಂದು ಚಿಕ್ಕ ಮಗಳೂರ ಜಿಲ್ಲೆಯ ಎಣ್ಣೆ ಹೊಳೆಯ ಸಮೀಪ ತನ್ನ ಅರವತ್ತನೆಯ ವಯಸ್ಸಿನಲ್ಲಿ ಶಿವಾಧೀನಳಾಗುತ್ತಾಳೆ.

ಅಕ್ಕನಾಗಮ್ಮನವರು ರೇವಣಸಿದ್ದೇಶ್ವರಿಂದ ಶಿವದೀಕ್ಷೆಯನ್ನು ಪಡೆದು ಯೋಗಾಂಗ ಸಿದ್ಧಿಯನ್ನು ಕರಗತ ಮಾಡಿಕೊಂಡಿದ್ದರು. ಆಗಾಗ ಇವರು ಯೋಗದಲ್ಲಿ ಲೀನವಾಗುತ್ತದ್ದರು. ಇಂದಿಗೂ ಕೂಡ ಇಂಗಳೇಶ್ವರದಲ್ಲಿ ಅಕ್ಕನಾಗಲಾಂಬಿಕಾ ಗವಿ ಇದೆ. ಕಲ್ಯಾಣದಲೂಲ ಗವಿ ಇದೆ. ಅಕ್ಕನಾಗಲಾಂಬಿಕಾ ತಮ್ಮನ ಕೀತಿರ್ಯನ್ನು ಇಡೀ ದೇಶಾದ್ಯಂತ ವ್ಯಾಪಿಸಲು ಕಾರಣಳಾದಳು. ದೇಶ ವಿದೇಶದಿಂದ ಕಲ್ಯಾಣಕ್ಕೆ ಅಣ್ಣನವರ ಕೀರ್ತಿಯ ಕೇಳಿ ಬಂದ ಜಂಗರ ಸಂಖ್ಯೆ ೧೨,೦೦೦ ದಷ್ಟು ಆಂದಾಗ, ಆ ಧರ್ಮ ಜಾಗೃತಿಯತ್ತ ಫಲ ಕಂಡು ಅಕ್ಕ ಅಭಿಮಾನದಿಂದ ಪ್ರೀತಿಯಿಂದ ತಮ್ಮನ ಕಾರ್ಯವೈಖರಿಯನ್ನು ಕೊಂಡಾಡಿದಳು.

“ಅಣ್ಣಾ ಶಶಿಧರ ನಟ್ಟಿದ ಮಣಿಹ ಪೂರೈಸಿತ್ತೆಂದು
ನೀವು ಲಿಂಗೈಕ್ಯರಾದೊಡೆ ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ
ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯಾ
ನಿಮ್ಮೊಡನೆ ಅಸಂಖ್ಯಾತ ಮಹಾ ಗಣಂಗಳು ಹೋದರಣ್ಣಾ
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ
ಪಂಚ ಪುರುಷ ಬಸವಣ್ಣಾ” ೧

---

೧. ವಾಣಿಶ್ರೀ ಎಸ್. ಪಾಟೀಲ್ -ಶಿವಶರಣೆಯರ ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ವಚನಗಳು ಪು.ಸಂ.೩

ಅಧ್ಯಾಯ – ೩

ಶಿವಶರಣೆಯರ ವಚನಗಳು

(ಅ) ಸೃಷ್ಟಿಯ ಸೋಬಗು

(ಆ) ಸಾಮಾಜಿಕ ನೀಲುವು

(ಇ) ವೈಜ್ಞಾನಿಕ ದೃಷ್ಟಿಕೋನಕ

ಶಿವಶರಣೆಯರ ವಚನಗಳು

ಅ) ಸೃಷ್ಠಿಯ ಸೊಬಗು :

ಕನ್ನಡ ನಾಡು ಸೌಂದರ್ಯದ ನೆಲೆ ಬೀಡು ಅಂತೆ ನಮ್ಮ ರಾಷ್ಟ್ರಕವಿ ಕುವೆಂಪು ಅವರು ಭೂದೇವಿಯ ಮುಕುಟದ ನವಮಣಿಯೇ ಗಂಧದ, ಚಂದದ, ಹೊನ್ನಿನ ಗಣಿಯೇ ಎಂದು ಹಾಡಿ ಹೋಗಳಿದ್ದಾರೆ. ಇದು ಕವಿರಸ ಋಷಿಗಳ ಬೀಡಾಗಿದೆ. ಇಂತಹ ಪುಣ್ಯ ಭೂಮಿಯ ಸೊಬಗನ್ನು, ಕಂಡು ಅನೇಕ ಕವಿಗಳು ಹಾಡಿ ಹೋಗಳಿದ್ದಾರೆ. ಕೆ.ಎಸ್.ನಿಸ್ಸಾರ ಅಹ್ಮದ ಹೇಳುವಂತೆ "ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ ಸಹ್ಯಾದ್ರಿಯ ಲೋಹದದಿರು ಉತ್ತುಂಗದ ನಿಲುಕಿನಲ್ಲಿ ನಿತ್ಯೋತ್ಸವಾ" ಕರ್ನಾಟದಕ ಗಿರಿವನಗಳ ಬಗ್ಗೆ ಹಾಡಿದ್ದಾರೆ.

ಇಂದಿನ ಆಧುನಿಕ ಯುಗದಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಎಲ್ಲೆಡೆಯು ಹೊಸ ಹೊಸ ಕಾರ್ಖಾನೆಗಳು ಹುಟ್ಟಿಕೊಂಡವು. ನವಿನಿಕತೆಯೂ ಬೆನ್ನು ಹತ್ತಿದ ನಮ್ಮ ಈ ಜನ ಎಲ್ಲೆಡೆಯು ಕಾಡನ್ನು ನಾಶ ಮಾಡುತ್ತಾ ನಗರಗಳನ್ನು ಬೆಳೆಸುತ್ತಾ ಹೊರಟಿದ್ದಾರೆ. ಇಂದಿನ ಈ ೨೧ನೇ ಶತಮಾನದಲ್ಲಿ ನಮ್ಮ ಆಧುನಿಕತೆಯ ಬೆಡಗಿನಿಂದ ನಾವು ಗ್ರಾಮೀಣ ಜೀವನದಿಂದ ಬಹು ದೂರ ಹೋಗಿದ್ದೇವೆ. ೧೦ನೇ ಶತಮಾನದಲ್ಲಿ ಕವಿರಾಜಮಾರ್ಗ ಕಾರನಾದ ಶ್ರೀವಿಜಯ ಹೀಗೆ ಹೇಳಿದ್ದನು. "ಪ್ರತಿಯೊಬ್ಬ ಕನ್ನಡಿಗನಲ್ಲಿ ಕವಿತ್ವದ ಭಾವನೆ ತುಂಬಿ ತುಳುಕುತ್ತಿತ್ತು" ಎಂದ್ದಿದ್ದಾನೆ.

"ಬಚ್ಚಿಟ್ಟ ಬಯಕೆ ಕೂಡಿದಂತೆ. ಹೆಪ್ಪಿಟ್ಟ ಹಾಲು ಮೋಸರಾದಂತೆ" ತನ್ನ ಹೃದಯದಲ್ಲಿ ಅಡಗಿರುವಾ ಭಾವನೆಗಳನ್ನು ಹೊರಹಾಕಲು ಅವಕಾಶ ದೊರತಿದ್ದು, ೧೨ನೇ ಶತಮಾನದಲ್ಲಿ ಈ ಕಾರ್ಯವನ್ನು ಮಾಡಿದವರು ಶರಣರು ಇವರು ನಮ್ಮ ಸ್ತ್ರೀಯರಿಗೆ ಸಾಮಾಜಿಕ ರಂಗದಲ್ಲಿ, ಶೈಕ್ಷಣಿಕ ರಂಗದಲ್ಲಿ, ಧಾರ್ಮಿಕ ರಂಗದಲ್ಲಿ ಮುಕ್ತವಾಗಿ ಚರ್ಚಿಸುವ ಅವಕಾಶವನ್ನು ನೀಡಿದರು. ಇದರ ಫಲವಾಗಿ ಅನೇಕ ಜನ ಶಿವ ಶರಣೆಯರು ತಾವು ಮಾಡುವ ದಿನನಿತ್ಯದ ಕಾಯಕದಲ್ಲಿ ಕಂಡ ತಮ್ಮ ಸುತ್ತ ಮುತ್ತಲಿನ ಪ್ರಾಣಿ, ಪಕ್ಷಿ, ನದಿ, ಹಳ್ಳ, ಬೆಟ್ಟ-ಗುಡ್ಡಗಳನ್ನು ತಮ್ಮ ಜೀವನದ ಆಗು ಹೋಗುಗಳೊಂದಿಗೆ ಸಾಮರಸ್ಯ ಮಾಡಿಕೊಂಡು ಸೃಷ್ಟಿಯ ಚೇತನಾ ಚೇತನಗಳ ಬಗ್ಗೆ ತಮ್ಮ ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಪ್ರಕೃತಿಯ ಪ್ರಾಣಿ-ಪಕ್ಷಿಗಳು ತಮ್ಮ ಕಾರ್ಯದಲ್ಲಿ ಸದಾ ನಿರಂತರವಾಗಿದ್ದು, ಪ್ರಕೃತಿಯ ಸಮತೋಲನವನ್ನು ಕಾಪಾಡಿಕೊಂಡು ಬಂದಿವೆ. ಗಿಡಮರಗಳಿಗೆ ದೊರೆಯುವ

ನೀರು, ಗಾಳಿ, ಬೆಳಕು ಒಂದೆಯಾದರು ಅವುಗಳ ಬೆಳವಣಿಗೆಯಲ್ಲಿ ವೈಪರಿತ್ಯವನ್ನು ಕಾಣುತ್ತೇವೆ.

ಈಳೆ, ನಿಂಬೆ, ಮಾವು, ಹಲಸು, ಮುಂತಾದವು ಹುಳಿ ಗುಣಹೊಂದಿದರೆ ಬಾಳೆ, ಕಬ್ಬು, ಮುಂತಾದವುಗಳು ಸಿಹಿ ಗುಣವನ್ನು ಹೊಂದಿವೆ. ಈ ಬದಲಾವಣೆಗೆ ಕಾರಣ ಏನು ಎಂದು ಕಂಡುಕೊಳ್ಳಲು ನಾವು ಸಾಕಷ್ಟು ಪ್ರಯತ್ನಿಸುತ್ತೇವೆ. ಇದಕ್ಕೆ ಕಾರಣ ಸೃಷ್ಟಿಯ ಮೂಲ ಕೃತೃವಾದ ದೇವರೆ ಎನ್ನುವರು. ಶರಣರು ಇಂತಹ ಸೋಬಗಿನ ಸೌಂದರ್ಯದ ಬಗ್ಗೆ ತಮ್ಮ ವಚನಗಳಲ್ಲಿ ಹೇಳುತ್ತಾರೆ.

ವಚನಗಳು :

ಎಲೆಲೆ ಗಿರಿಗಳಿರ ಗಿರಿಧನ್ವ ನೆಲ್ಲಿಹನರುಹಿ
ರೆಲೆಲೆ ವನಹಳಿರ ವನವಾಸಿಯೆಲಿಹನು ಸುರಿ
ರೆಲೆ ಮೃಗಗಳಿರೆಮ್ಮ ಮೃಗಧರನ ತೋರಿರೆಲೆ
ಶಬರಿರ ಶಬರೇಶನ
ನಿಲಯವೇ ದೆಸೆ, ನಿರ್ಜರವೆ ನಿರ್ಜರೇಶ್ವರನ
ಸ್ಥಲವೆತ್ತ ಯಲೆಗಳಿರ ಯಲೆಪತಿಯ ನಿಪ್ಪನಿರ್ಮಲ
ಚನ್ನಮಲ್ಲಿಕಾರ್ಜುನನ ತೊರೆಂದು." !! ೧ !!

ಎಲೆಲೆ ಬೆಟ್ಟಗುಡ್ಡಗಳಿರಾ, ಬೆಟ್ಟದ ಮೇಲೆ ಇರುವ ಎಲೆಗಳಿರಾ, ವನಗಳಿರಾ ವನದಲ್ಲಿ ವಾಸಿಸುವ ಮೃಗಗಳಿರಾ ನಿಮ್ಮ ವನಕ್ಕೆ ಮತ್ತು ಮೃಗಗಳಿಗೆ ರಾಜನಾದ ಶಬರೀಶನನ್ನು ತೋರಿಸುವಿರಾ ನಿರ್ಜನವಾದ ಸ್ಥಳಗಳಲ್ಲಿ ನೆಲೆ ನಿಂತ ಋಷಿ ಮುನಿಗಳಿರಾ ಮುನಿಗಳಲ್ಲೆ ಶ್ರೇಷ್ಠನಾದ ನಿರ್ಮಲನಾದ ಚನ್ನಮಲ್ಲಿಕಾರ್ಜುನ ಕಂಡಿದ್ದರೆ ತೋರಿಸಿರಿ ಎಂದು ಕೇಳುವಲ್ಲಿ ದ್ವೈತಭಾವ ಮೂಡುತ್ತದೆ.

ಗಿರಿಯೊಳು ವನದೊಳು ಗಿಡಗಿಡದತ್ತ
ದೇವ, ಎನ್ನ ದೇವ ಬಾರಯ್ಯ ತೋರಯ್ಯ ನಿಮ್ಮ
ಕರುಣವನೆಂದು
ನಾನು ಅರಸುತ್ತ ಅಳಲುತ್ತ ಕಾಣದೇ (ಸುಂದು ಬಂದು)
ಕಂಡೆ ಶರಣರ ಸಂಗದಿಂದ !
ಅರಸಿ ಹಿಡಿದೇನೆಂದು ನೀನಡಗುವ ಠಾವ ಹೇಳಾ
ಚನ್ನಮಲ್ಲಿಕಾರ್ಜುನ. !! ೨ !!

ಬೆಟ್ಟದಲ್ಲಿ ಕಾಡಿನ ಮರ ಮರಗಳಲ್ಲಿ ಇರುವ ದೇವ ಬಾರಯ್ಯ ನಿಮ್ಮ ಮುಖವನ್ನು ತೋರಿಸಿ ಕರುಣಿಸಯ್ಯ, ನಾನು ನಿಮ್ಮನ್ನು ಹುಡುಕುತ್ತ, ಅಳಲುತ್ತ ನಿಮ್ಮನು ಕಾಣಲು ಬಯಸುತ್ತಿರುವೆ ನೀವು ಎಲ್ಲಿ ಕುಳಿತ್ತಿದ್ದೀರಾ ನೀವು ಇರುವ ಪರಿ ಎಂತಹದು ತಿಳಿಸುವಿರಾ ಚನ್ನಮಲ್ಲಿಕಾರ್ಜುನ ರಾವು ಎಂದು ಕೇಳುವರು.

---

೧. ಡಾ. ಎಲ್. ಬಸವರಾಜು: ಅಕ್ಕನ ವಚನಗಳು:೧೯೯೭ ಪುಟ.ಸಂಖ್ಯೆ:೬೫

೨. ಡಾ. ಎಲ್.ಬಸವರಾಜ : ಅಕ್ಕನ ವಚನಗಳು:೧೯೯೭ ಪುಟ.ಸಂಖ್ಯೆ:೬೦

"ಅಳಿಸಂಕುಲವೆ, ಮಾಮರವೆ,
ಬೆಳದಿಂಗಳ ಕೋಗಿಲೆಯೇ
ನಿಮ್ಮನ್ನೆಲ್ಲರನೂ ಒಂದು ಬೇಡುವೆನು,
ಎನ್ನೊಡೆಯ ಚನ್ನಮಲ್ಲಿಕಾರ್ಜುನದೇವ ಕಂಡಡೆ
ಕರೆದು ತೋರಿರೆ" !! ೧ !!

ಹೂವಿನ ಮಕರಂದವನ್ನು ಹಿರುವ ದುಂಬಿಗಳೆ, ಮಾವಿನಮರಗಳೆ ಬೆಳದಿಂಗಳುಗಳೇ, ಕೋಗಿಲೆಗಳೇ ನಿಮ್ಮೆಲ್ಲರಿಗೂ ನಾನು ಒಂದು ಬೇಡುವೆನು ನನ್ನ ಒಡೆಯನಾದ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ನನಗೆ ಕರೆದು ತೋರಿಸಿರಿ ಎನ್ನುತ್ತಾಳೆ ಅಕ್ಕ.

ಚಿಲಿ ಮಿಲಿ ಎಂದೋದುವ ಗಿಳಿಗಳಿರಾ
ನೀವು ಕಾಣಿರೆ ? ನೀವು ಕಾಣಿರೆ ?
ಸರವೆತ್ತಿ ಹಾಡುವ ಕೋಗಿಲೆಗಳಿರಾ
ನೀವು ಕಾಣಿರೆ ? ನೀವು ಕಾಣಿರೆ ?
ಸರೊವರದೊಳಗಾಡುವ ಹಂಸಗಳೀರಾ
ನೀವು ಕಾಣಿರೆ ? ನೀವು ಕಾಣಿರೆ ?
ಎರಗಿ ಬಂದಾಡುವ ತುಂಬಿಗಳಿರಾ
ನೀವು ಕಾಣಿರೆ ? ನೀವು ಕಾಣಿರೆ ?
ಗಿರಗಹ್ವರದೊಳಗಾಡುವ ನವಿಲುಗಳಿರಾ
ನೀವು ಕಾಣಿರೆ ? ನೀವು ಕಾಣಿರೆ ?
ಚನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದು
ಬಲ್ಲಡೆ ನೀವು ಹೇಳಿರೇ ? !! ೨ !!

ಚಿಲಿ ಮಿಲಿ ಎಂದು ಮಾತಾಡುವ ಗಿಳಿಗಳಿರಾ, ಸ್ವರವೆತ್ತಿ ಹಾಡುವ ಕೋಗಿಲೆಗಳಿರಾ, ಸರೋವರದೊಳಗಾಡುವ ಹಂಸಗಳಿರಾ, ಹೂವಿನಿಂದ ಹೂವಿಗೆ ಹಾರುವ ದುಂಬಿಗಳಿರಾ, ಬೆಟ್ಟಗುಡ್ಡದಲ್ಲಿ ಆಡುವ ನವಿಲುಗಳಿರಾ ನೀವು ನೋಡಿರುವಿರೇನು ಎನ್ನ ಒಡೆಯನನ್ನು ಕಂಡರೆ ತೋರಿಸಿರಿ ಎಂದು ಹೇಳುವಳು.

---

೧. ಡಾ.ಎಂ.ಎಂ.ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪು.ಸಂ.೧೯-೨೦

೨. ಡಾ.ಎಂ.ಎಂ.ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪು.ಸಂ.೬೩-೬೪

"ವನವೆಲ್ಲ ನೀವೆ

ವನದೊಳಗಣ ದೇವತರುವೆಲ್ಲ ನೀವೆ

ತರುವಿನೊಳಗಾಡುವ ಖಗ ಮೃಗವೆಲ್ಲ ನೀವೆ

ಚನ್ನಮಲ್ಲಿಕಾರ್ಜುನ" ‼ ೧ ‼

ಸರ್ವಭರಿತನಾಗಿ ಎನಗೇಕೆ ಮುಬದೊರೆ ಸುಂದರವಾದ ಪ್ರತಿಯೊಂದು ವಸ್ತುವಿನಲ್ಲಿ ನೀವೆ. ಇರುವಿರಿ ಎನ್ನುತ್ತ ಇಡೀ ಕಾಡಲ್ಲೂ ನೀವೆ. ತುಂಬಿರುವಿರಿ ಕಾಡಿನ ಪ್ರತಿ ಮರ, ಗಿಡ, ಬಳ್ಳಿಗಳೆಲ್ಲವೂ ನೀವೆಲ್ಲರು ಪ್ರಾಣಿ, ಪಕ್ಷಿ ಸಂಕುಲಗಳೆಲ್ಲವೂ ನೀವೆ ಹೀಗೆ ಸರ್ವವ್ಯಾಪಿಯಾದ ನೀವು ನನಗೇಕೆ ನಿಮ್ಮ ಮುಖ ತೋರಿಸಲಾರಿರಿ ಎಂದು ಅಕ್ಕ ಕೇಳುವಲ್ಲಿ ಅದ್ವೈತ ನೀತಿಯಾದ ನಾನು ನೀನು ಒಂದೇ ಎಂಬ ಭಾವ ವ್ಯಕ್ತವಾಗುತ್ತದೆ.

"ಚಂದನವ ಕಡಿದು ಕೊರೆದು ತೇದೊಡೆ

ನೊಂದೆನೆಂದು ಕಂಪ ಬಿಟ್ಟಿತ್ತೆ ?

ತಂದು ಸುವರ್ಣವ ಕಡಿದೊರೆದೊಡೆ

ಬೆಂದು ಕಳಂಕ ಹಿಡಿದಿತ್ತೆ ?

ಸಂದು ಸಂದನು ಕಡಿದು ಕಬ್ಬನು

ತಂದು ಗಾಣದಲ್ಲಿಕ್ಕಿ ಅರೆದಡೆ

ಬೆಂದು ಪಾಕಗೊಳ ಸಕ್ಕರೆಯಾಗಿ

ನೊಂದೆ ನೆಂದು ಸವಿಯ ಬಿಟ್ಟಿತ್ತೆ ?

ನಾ ಹಿಂದೆ ಮಾಡಿದ ಹೀನಂಗಳೆಲ್ಲವ

ತಂದು ಮುಂದಿಳುಹಲು ನಿಮಗೆ ಹಾನಿ !

ಎನ್ನ ತಂದೆ ಚನ್ನಮಲ್ಲಿಕಾರ್ಜುನ ದೇವಯ್ಯ

ಕೊಂದೊಡೆ ಶರಣೆಂಬುದೆ ಮಾಣೆ. ‼ ೨ ‼

ಚಂದನವನ್ನು ತಂದು ಕೊರೆದು ಗಂಧವ ತೆಗೆದಾಗ ಸಹ ಅದು ತನ್ನ ಸುವಾಸನೆ ಬಿಡದು ಬಂಗಾರತಂದು ತುಂಡು ತುಂಡು ಮಾಡಿದರು ಅದು ತನ್ನ ಮಹತ್ವ ಬಿಡದು ಅದಕ್ಕೆ ಕುಂದುಬಾರದು.

ಕಬ್ಬನು ತಂದು ಕಡಿದು ಗಾಣಕ್ಕೆ ಹಾಕಿದಾಗ ಪುಡಿ ಪುಡಿಯಾದ ಸಕ್ಕರೆ ಆಗಿ ತನ್ನ ಸವಿಯನ್ನು ಬಿಟ್ಟಿತೇನು? ಹಾಗೆ ನಾನು ಹಿಂದೆ ಮಾಡಿದ ಪಾಪಗಳಲ್ಲಿ ತಂದು ನಿಮಗೆ ಹೇಳಿದಾಗ ನಿಮಗೆ ತೊಂದರೆ ಆಗಿರುವುದೇನು ಆ ಸಿಟ್ಟಿನಲ್ಲಿ ನೀವು ನನಗೆ ಕೊಂದರು ಸಹ ನಿಮ್ಮ ಪಾದಕ್ಕೆ ಶರಣೆಂಬುದು ಬಿಡಲಾರೆ ಎಂಬಲ್ಲಿ ಅವರ ಶರಣಾಗತಿ ಭಾವವು ಈ ಮೇಲಿನ ವಸ್ತುಗಳಿಂದ ಕಲಿತದ್ದು ಎಂದು ತೋರುತ್ತದೆ.

---

೧. ಡಾ. ಎಲ್. ಬಸವರಾಜ, ಅಕ್ಕನ-ವಚನಗಳು ೧೯೯೭ ಪು.ಸಂ.೬೫

೨. ಡಾ. ಎಲ್. ಬಸವರಾಜ, ಅಕ್ಕನ-ವಚನಗಳು ೧೯೯೭ ಪು.ಸಂ.೫೯

"ಈಳೆ ನಿಂಬೆ, ಮಾವು, ಮಾದಲಕ್ಕೆ
ಹುಳಿ ನೀರನೇರೆದವರಾರಯ್ಯ ?
ಕಬ್ಬು, ಬಾಳೆ, ಹಲಸು, ನಾರಿವಾಳಕ್ಕೆ
ಸಿಹಿ ನೀರನೇರೆದವರಾರಯ್ಯ ?
ಕಳವೆ, ರಾಜಾನ್ನ, ಶಾಲ್ಯನ್ನಕ್ಕೆ
ಓಗರದ ಉದಕವನೇರೆದವರಾರಯ್ಯ ?
ಪರಿಮಳದ ಉದಕವನೇರೆದವರಾರಯ್ಯ ?
ಇಂತಿ ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿ ಬೇರಾಗಿಹ ಹಾಗೆ
ಎನ್ನದೇವ ಚನ್ನಮಲ್ಲಿಕಾರ್ಜುನ ಹಲವು ಜಗಂಗಳ
ಕೂಡಿ ಕೊಂಡಿರ್ದಡೇನು ? ತನ್ನ ಪರಿ ಬೇರೆ. !! ೧ !!

ಈಳೆ, ನಿಂಬೆ, ಮಾವು, ಮಾದಲಗಳಿಗೆ ಹುಳಿಯಾದ ನೀರು ಹಾಕಿದವರು ಯಾರು ? ಕಬ್ಬು, ಬಾಳೆಹಣ್ಣು, ಹಲಸು, ತೆಂಗುಗಳಿಗೆ ಸಿಹಿಯಾದ ನೀರು ಹಾಕಿದವರು ಯಾರು ಹಾಗೆ ಕಳವೆಗೆ, ರಾಗಿ, ಭತ್ತ ಶುದ್ಧವಾದ ನೀರು ತಂದು ಯಾರು ಹಾಕಿದರು. ಇವು ಸುಗಂಧವಾಗಲು ಪರಿಮಳದ ನೀರು ಯಾರು ಹಾಕಿದರು. ಹೀಗೆ ನೀರು ಒಂದೇ ಆದರೂ ಸಹ ಹಲವಾರು ದ್ರವ್ಯಗಳಿಂದ ಕೂಡಿ ಅದರ ರೀತಿಯೇ ಬೇರೆ ಯಾವ ರೀತಿ ಚನ್ನಮಲ್ಲಿಕಾರ್ಜುನ ಹಲವು ಜಗಗಳಲ್ಲಿ ಇದ್ದರು ಸಹ ತನ್ನ ಪರಿಯೆ ಬೇರೆ ಎನ್ನುವರು.

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು !
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು !
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು !
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು !
ಭಾವ ಶುದ್ಧವಿಲ್ಲದರಲ್ಲ ಧೂಪವನೊಲ್ಲೆಯಯ್ಯ ನೀನು !
ಪರಿಣಾಮಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು !
ತ್ರಿಕರಣಶುದ್ಧ ವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು !
ಹೃದಯ ಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯ ನೀನು !
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ
ಚನ್ನಮಲ್ಲಿಕಾರ್ಜುನಯ್ಯ. !! ೨ !!

---

೧. ಅಕ್ಕನ ವಚನಗಳು ಡಾ.ಎಲ್. ಬಸವರಾಜ ಪುಟ ಸಂಖ್ಯೆ:೪೪

೨. ಡಾ. ಎಲ್. ಬಸವರಾಜ-ಅಕ್ಕನ ವಚನಗಳು-೧೯೬೭ ಪುಟ.ಸಂಖ್ಯೆ: ೪೬

"ಈಳೆ ನಿಂಬೆ, ಮಾವು, ಮಾದಲಕ್ಕೆ
ಹುಳಿ ನೀರನೇರೆದವರಾರಯ್ಯ ?
ಕಬ್ಬು, ಬಾಳೆ, ಹಲಸು, ನಾರಿವಾಳಕ್ಕೆ
ಸಿಹಿ ನೀರನೇರೆದವರಾರಯ್ಯ ?
ಕಳವೆ, ರಾಜಾನ್ನ, ಶಾಲ್ಯನ್ನಕ್ಕೆ
ಓಗರದ ಉದಕವನೇರೆದವರಾರಯ್ಯ ?
ಪರಿಮಳದ ಉದಕವನೇರೆದವರಾರಯ್ಯ ?
ಇಂತಿ ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿ ಬೇರಾಗಿಹ ಹಾಗೆ
ಎನ್ನದೇವ ಚನ್ನಮಲ್ಲಿಕಾರ್ಜುನ ಹಲವು ಜಗಂಗಳ
ಕೂಡಿ ಕೊಂಡಿರ್ದಡೇನು ? ತನ್ನ ಪರಿ ಬೇರೆ. !! ೧ !!

ಈಳೆ, ನಿಂಬೆ, ಮಾವು, ಮಾದಲಗಳಿಗೆ ಹುಳಿಯಾದ ನೀರು ಹಾಕಿದವರು ಯಾರು ? ಕಬ್ಬು, ಬಾಳೆಹಣ್ಣು, ಹಲಸು, ತೆಂಗುಗಳಿಗೆ ಸಿಹಿಯಾದ ನೀರು ಹಾಕಿದವರು ಯಾರು ಹಾಗೆ ಕಳವೆಗೆ, ರಾಗಿ, ಭತ್ತ ಶುದ್ಧವಾದ ನೀರು ತಂದು ಯಾರು ಹಾಕಿದರು. ಇವು ಸುಗಂಧವಾಗಲು ಪರಿಮಳದ ನೀರು ಯಾರು ಹಾಕಿದರು. ಹೀಗೆ ನೀರು ಒಂದೇ ಆದರೂ ಸಹ ಹಲವಾರು ದ್ರವ್ಯಗಳಿಂದ ಕೂಡಿ ಅದರ ರೀತಿಯೇ ಬೇರೆ ಯಾವ ರೀತಿ ಚೆನ್ನಮಲ್ಲಿಕಾರ್ಜುನ ಹಲವು ಜಗಗಳಲ್ಲಿ ಇದ್ದರು ಸಹ ತನ್ನ ಪರಿಯೆ ಬೇರೆ ಎನ್ನುವರು.

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು !
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು !
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು !
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು !
ಭಾವ ಶುದ್ದವಿಲ್ಲದರಲ್ಲ ಧೂಪವನೊಲ್ಲೆಯಯ್ಯ ನೀನು !
ಪರಿಣಾಮಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು !
ತ್ರಿಕರಣಶುದ್ಧ ವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು !
ಹೃದಯ ಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯ ನೀನು !
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ
ಚನ್ನಮಲ್ಲಿಕಾರ್ಜುನಯ್ಯ. !! ೨ !!

---

೧. ಅಕ್ಕನ ವಚನಗಳು ಡಾ.ಎಲ್. ಬಸವರಾಜ ಪುಟ ಸಂಖ್ಯೆ:೪೪
೨. ಡಾ. ಎಲ್. ಬಸವರಾಜ-ಅಕ್ಕನ ವಚನಗಳು-೧೯೯೭ ಪುಟ.ಸಂಖ್ಯೆ: ೪೬

ದೇಹ ಕರಗದವರಲ್ಲಿ ಮಜ್ಜನ ಮಾಡಲಾರೆ, ಮನಸ್ಸು ಶುದ್ಧವಿಲ್ಲದವರಲ್ಲಿ ಪುಷ್ಪವ ಪಡೆಯಲಾರೆ, ಸುಖಿ ಇಲ್ಲದವರಲ್ಲಿ ಗಂಧಾಕ್ಷತೆ ಪಡೆಯಲಾರೆ, ನೀನು ಜ್ಞಾನದ ಕಣ್ಣು ತೆರೆಯಲಾರದವರ ಆರತಿ ಸ್ವಿಕರಿಸಲಾರೆ, ನೀನು ಭಾವ ಶುದ್ಧವಿಲ್ಲದವರ ಧೂಪ ಪಡೆಯಲಾರೆ, ತೃಪ್ತಿ, ಆನಂದವಿರಲಾರದವರ ನೈವಿದ್ಯವನ್ನು ಸ್ವೀಕರಿಸಲಾರೆ, ನೀನು ತನು, ಮನ, ಧನ ಶುದ್ಧವಿಲ್ಲದವರ ತಾಂಬೂಲ ಸ್ವೀಕರಿಸಲಾರೆ, ನೀನು ಮನಶಾಂತಿ ಇಲ್ಲದವರಲ್ಲಿ ಇರಲು ಬಯಸಲಾರೆ, ನೀನು ಹಾಗೆ ನನ್ನಲ್ಲಿ ಇಂತಹ ಯಾವ ಗುಣವಿದೆಯೆಂದು ನನ್ನ ಕೈಯಲ್ಲಿ ಬಂದು ಕುಳಿತೆ ಹೇಳಯ್ಯ ತಂದೆ ಎಂದು ಚೆನ್ನಮಲ್ಲಿಕಾರ್ಜುನನಿಗೆ ಕೇಳುವಳು.

"ಗಿರಿಯಲ್ಲಿಲ್ಲದೇ ಹುಲ್ಲು ಮೊರಡಿಯ ಲಾಡುವುದೇನವಿಲು ?
ಕೊಳ ಕಲ್ಲಿದೆ ಕಿರುವಳಕ್ಕಳಸುವುದೇ ಹಂಸ ?
ಮಾಮರ ತಳಿತಲ್ಲದೇ ಸ್ವರಗೈಯುವುದೇ ಕೋಗಿಲೆ ?
ಪರಿಮಳವಿಲ್ಲದ ಪುಷ್ಪ ಕೆರಳಿಸುವುದೇ ಭ್ರಮರ ?
ಎನ್ನ ದೇವ ಚನ್ನಮಲ್ಲಿಕಾರ್ಜುನಗಲ್ಲದೆ
ಅನ್ಯ ಕೆಳಸುವುದೇ ಎನ್ನ ಮನ ಕೇಳಿರೆ ಕೆಳದಿಯರಿರಾ ? !! ೧ !!

ಗಿರಿವನಗಳಲ್ಲಿ ಅಲ್ಲದೇ ಹುಲ್ಲಿನ ಪೊದೆಯಲ್ಲಿ ಆಡುವ ನವಿಲು ಸರೋವರ ಅಲ್ಲದೇ ಸಣ್ಣ ಹಳ್ಳಗಳಲ್ಲಿ ಆಡುವುದೇ ಹಂಸ ಮಾವಿನ ತಳಿರ ತಿಂದು ಸ್ವರಗೈದು ಕೂಗುವುದಲ್ಲದೇ ಕೋಗಿಲೆ, ಸುಗಂಧವಿಲ್ಲದೆ ಹೂವಿನಕಡೆ ದುಂಬಿ ಬರಲಾರದು ಹಾಗೆ ಚನ್ನಮಲ್ಲಿಕಾರ್ಜುನನ ಬಿಟ್ಟು ಬೇರೆ ಕಡೆ ಎನ್ನ ಮನ ಸುಳಿಯಲಾರದು.

ಗಂಗೆಯೊಡನಾಡಿದ ಗಟ್ಟ-ಬೆಟ್ಟಂಗಳು
ಕೆಟ್ಟ ಕೇಡ ನೋಡಯ್ಯ !
ಅಗ್ನಿಯೊಡನಾಡಿದ ಕಾಷ್ಠಾಂಗಳು ಕೆಟ್ಟ ಕೇಡನೋಡಯ್ಯ !
ಜ್ಯೋತಿಯೊಡನಾಡಿದ ಕತ್ತಲೆ ಕೇಡ ನೋಡಯ್ಯ !
ಇಂತೀ ಪರಶಿವಮೂರ್ತಿ ಹರನೇ ,
ನಿಮ್ಮ ಜಂಗಮಲಿಂಗದೊಡನಾಡಿ ಎನ್ನ ಭವಾದಿಭವಂಗಳು
ಕೆಟ್ಟ ಕೇಡ ನೋಡು ಚನ್ನಮಲ್ಲಿಕಾರ್ಜುನ ! ೨

ಗಂಗಾ ನದಿಯೊಡನೆ ಹೋರಾಡಿ ಬೆಟ್ಟ ಗುಡ್ಡಗಳ ಹಾಳಾದ ರೀತಿ ನೋಡಯ್ಯ ಬೆಂಕಿಯೊಡನೆ ಹೊರಾಡಿ ಕಟ್ಟಿಗೆ ಸುಟ್ಟ ರೀತಿ ನೋಡಯ್ಯ ಬೆಳಕಿನೊಡನೆ ಹೋರಾಡಿ ಕತ್ತಲೆಯು ಕೆಟ್ಟ ಪರಿ ನೋಡಯ್ಯ! ಹೀಗೆ ಪರಶಿವನ ರೂಪವಾದ ನಮ್ಮ ಶರಣ ಜಂಗಮರೊಡನೆ ಹೋರಾಡಿ ಎನ್ನ ಮನಸ್ಸಿನ ಭವಾದಿಗಳು ಹಾಳಾದ ಪರಿ ನೋಡಯ್ಯ ಚನ್ನಮಲ್ಲಿಕಾರ್ಜುನ ಎಂದು ಅಕ್ಕ ತನ್ನ ಭವಗುಣಗಳು ಹೋದ ಬಗ್ಗೆ ಹೇಳುವಳು.

---

೧. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ ೧೯೯೩ ಪು.೫೮

೨. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ ೧೯೯೩ ಪು.೫೬

“ಕಂಗಳ ಕತ್ತಲೆಯನ್ನೆ ಹರಿದು

ಮನದ ಕಾಳಿಕೆಯನೆ ಹಿಂಗಿಸಿ

ಜ್ಯೋತಿಯ ಬೆಳಗನೆ ತೋರಿಸಿ

ತನ್ನಂಗವನು ಲಿಂಗವಯವನ್ನಾಗಿ

ಮಾಡಿದಗುರು ಎನ್ನಣ್ಣ ಅಜಗಣ್ಣ ೧

ನನ್ನ ಕಣ್ಣುಗಳಲ್ಲಿದ್ದ ಅಜ್ಞಾನದ ಕತ್ತಲೆಯನ್ನು ತೆಗೆದು ಮನಸ್ಸಿನ ವೇದನೆಯನ್ನು ದೂರ ಮಾಡಿಸಿ ಜ್ಯೋತಿಯ ಬೆಳಕನ್ನು ತೋರಿಸಿ ನನ್ನ ದೇಹವನ್ನು ಶಿವಮಯ ಮಾಡಿದ ಗುರು ನೀನೆ ಎನ್ನುವರು.

“ವನವೆಲ್ಲ ಕಲ್ಪತರು !

ಗಿಡವೆಲ್ಲ ಮರುಜೇವಣಿ !

ಶಿಲೆಗಳೆಲ್ಲ ಪರುಷ !

ನೆಲವೆಲ್ಲ ಅವಿಮುಕ್ತ ಕ್ಷೇತ್ರ !

ಜಲವೆಲ್ಲ ನಿರ್ಜರಾಮೃತ !

ಮೃಗವೆಲ್ಲ ಪುರುಷಮೃಗ !

ಎದರುವ ಹರಳೆಲ್ಲ ಚಿಂತಾಮಣಿ !

ಚೆನ್ನಮಲ್ಲಿಕಾರ್ಜುಯ್ಯನ ನೆಚ್ಚಿನ ಗಿರಿಯ ಸುತ್ತಿ

ನೋಡುತ ಬಂದು ಕದಳಿಯ ಬನದ ಕಂಡೆ ನಾನು ! ೨

ಈ ಕಾಡಿನಲ್ಲಿ ಇರುವ ಎಲ್ಲಾ ಮರಗಳು ಕಲ್ಪತರುಗಳು ! ಈ ಗಿಡಗಳಲ್ಲಿ ಅಡಗಿದ ಶಕ್ತಿ ಸಂಜೀವಿನಿ ಇಲ್ಲಿರುವ ಕಲ್ಲುಗಳೆಲ್ಲ ಪರುಷಮಣಿಯ ಶಕ್ತಿ ಹೊಂದಿರುವವು. ಇಡೀ ಕಾಡಿನ ನೆಲವೆಲ್ಲ ಪುಣ್ಯಕ್ಷೇತ್ರ ನೀರೆಲ್ಲವು ನಿಜವಾದ ಅಮೃತದಂತೆ, ಇಲ್ಲಿರುವ ಮೃಗಗಳೆಲ್ಲವು ಸರ್ವಶ್ರೇಷ್ಠವಾದವುಗಳು. ಇಲ್ಲಿ ಹರಡಿರುವ ಕಲ್ಲುಗಳೆಲ್ಲವು ಅಮೂಲ್ಯವಾದ ರತ್ನಗಳು ಇಂತಹ ಕಾಡಿನಲ್ಲಿ ವಾಸಿಸುವ ಚೆನ್ನಮಲ್ಲಿಕಾರ್ಜುನ ಹುಡುಕುತ್ತ ಬಂದು ಈ ಕದಳಿಯ ಬನವನ್ನು ಕಂಡೆ ನಾನು ! ಎಂದು ಅಕ್ಕ ತನ್ನ ಐಕ್ಯ ಸ್ಥಳವಾದ ಕದಳಿಬನವನ್ನು ಹೀಗೆ ಹೇಳುತ್ತಾಳೆ.

---

೧. ಡಾ. ಎಲ್. ಬಸವರಾಜು: ಅಕ್ಕನ ವಚನಗಳು: ೧೯೯೭ ಪುಟಸಂ.೪೪

೨. ಡಾ. ಎಲ್. ಬಸವರಾಜು: ಅಕ್ಕನ ವಚನಗಳು: ೧೯೯೭ ಪುಟಸಂ.೧೩೪

"ಕಳವಳದ ಮನವು ತಲೆಕೆಳಗಾದುದವ್ವ !

ಸುಳಿದು ಬೀಸುವ ಗಾಳಿ ಉರಿಯಾಯಿತವ್ವ !

ಬೆಳುದಿಂಗಳು ಬಿಸಿಲಾಯಿತು ಕೆಳದಿ !

ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವ !
ತಿಳುಹೌ ಬುದ್ಧಿಯ ಹೇಳಿ ಕರೆತಾರವ್ವ !
ಚನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವ" ! ೧

ನನ್ನ ಮನದ ಚಂಚಲವೆಲ್ಲಾ ದೂರವಾಯಿತು, ಬೀಸುವ ಗಾಳಿ ಉರಿಯಂತೆ ಕಠೊರವಾಯಿತು. ತಂಪಾದ ಬೆಳದಿಂಗಳು ಜಿಸಿಲಿನಂತೆ ಆಯಿತು, ಗೆಳತಿ ಇಂತಹ ಪರಿಸರದ ಪಟ್ಟಣದಲ್ಲಿ ತೊಳಲಾಡುತ್ತಿರುವೆನು ನನ್ನ ಮೇಲೆ ಮುನಿಸಿ ನನ್ನ ಬಿಟ್ಟು ಹೋದ ಚನ್ನಮಲ್ಲಿಕಾರ್ಜುನನಿಗೆ ಬುದ್ಧಿ ಹೇಳಿ ಕರೆತಾರೆ ಗೆಳತಿ ಎಂದು ಅಕ್ಕ ತನ್ನ ಗೆಳತಿಯರಿಗೆ ಹೇಳುವಳು.

"ಇಂದ್ರ ನೀಲದ ಗಿರಿಯ ನೇರಿಕೊಂಡು
ಚಂದ್ರಕಾಂತನ ಶಿಲೆಯ ಮೆಟ್ಟಿಕೊಂಡು
ಕೊಂಬ ಬಾರಿಸುತ ಹರನೆ,
ಎನ್ನ ಕುಂಭ ಕುಚದ ಮೇಲೆ ನಿಮ್ಮನೆಂದಪ್ಪಿಕೊಂಬೆನಯ್ಯ?
ಅಂಗ ಭಂಗ – ಮನಭಂಗವಳಿದು
ನಿಮ್ಮ ನೆಂದಿಂಗೊಮ್ಮೆ ನೆರೆವೆನೋ ಚನ್ನಮಲ್ಲಿಕಾರ್ಜುನ ?" ೨

ಇಂದ್ರನ ನೀಲಿ ಬಣ್ಣದ ಪರ್ವತವನ್ನು ಏರಿಕೊಂಡು ಅಲ್ಲಿ ಚಂದ್ರನಂತೆ ಹೊಳೆಯ ಬಂಡೆಯ ಮೇಲೆ ಡಮರು ಬಾರಿಸುತ್ತ ಇರುವ ಶಿವನೇ ನನ್ನ ನಿಮ್ಮಲ್ಲಿ ಎಂದು ಕರೆದುಕೊಳ್ಳುವೆಯೋ ನನ್ನ ದೇಹದ ಮೇಲಿನ ಆಸೆ ದೂರವಾಗಿ, ಮನದ ಆಸೆಯನ್ನು ದೂರ ಮಾಡಿಕೊಂಡು ನಿಮ್ಮೊಂದಿಗೆ ಸೇರುವೇನೋ ಎಂದು ನಾನು ಹಂಬಲಿಸುತ್ತಿರುವೆ ಚನ್ನಮಲ್ಲಿಕಾರ್ಜುನ.

"ಉರಿಯ ಪರಿಯನೆ ಉಡಿಸಿ, ಊರಿಂದ ಹೊರಗಿರಿಸಿ
ಕರೆಯಲಟ್ಟಿದ ಸಖಿಯ ನೆರೆದ ನೋಡೆಲೆಗವ್ವ !
ತುರ್ಯಾವಸ್ಥೆಯಲ್ಲಿ ತೂಗಿ ತೂಗಿ ನೋಡಿ
ಕರ ನೊಂದೆ ನೋಡವ್ವ !
ಅವಸ್ಥೆಯಿಂದ ಹಿರಿದು ದುಃಖದಲ್ಲಿ ಬೆಂದೆ !
ಕರಿ ಬೆಂದು, ಗಿರಿ ಬೆಂದು
ಹೊನನರಳಿಯ ಮರನುಳಿದು
ಓರಿಯತನಗೆಡಿಸಿ ನೆರೆವೆನು ಚನ್ನಮಲ್ಲಿಕಾರ್ಜುನನ !"೩

---

೧. ಡಾ.ಎಲ್. ಬಸವರಾಜ–ಅಕ್ಕನ ವಚನಗಳು ೧೯೯೭ ಪು. ಸಂ: ೭೨
೨. ಡಾ. ಎಂ. ಎಂ. ಕಲಬುರ್ಗಿ– ಶಿವಶರಣೆಯರ ವಚನ ಸಂಪುಟ–೧೯೯೩ ಪು.ಸಂ೭೭
೩. ಡಾ.ಎಲ್. ಬಸವರಾಜ–ಅಕ್ಕನ ವಚನಗಳು ೧೯೬೬ ಪು. ಸಂ: ೧೫೭

ಉರಿಯ ರೀತಿಯನ್ನೆ ವಸ್ತ್ರವಾಗಿ ತೊಡಿಸಿ ಊರಿಂದ ಹೊರಗೆ ಹಾಕಿದಾಗ ಪ್ರೀತಿಯಿಂದ ಕೈಹಿಡಿದು ಕರೆಯುವ ಸಖಿಯ ಕಾಣದೆ ನೊಂದಿರುವಾಗ ದೇವರಿಗೆ ತೂಗಿ ತೂಗಿ ನನ್ನ ಕೈ ನೊಂದಿತು ಮನಸ್ಸು ನೊಂದಿತು. ತನ್ನ ಬಂಗಾರ ಕಳೆದುಕೊಂಡು ಹುಚ್ಚಳಾದವಳಂತೆ ! ಹುಚ್ಚಳಾಗಿರುವ ನನ್ನ ಈ ದುಃಖ ದೂರ ಮಾಡಯ್ಯ ಚನ್ನಮಲ್ಲಿಕಾರ್ಜುನ.

"ಕಿಚ್ಚಿನೊಳಗೆ ಬೆಂದ ಕಾಯಕ್ಕೆ
ಅಚ್ಚುಗವುಂಟೆ ?
ಮುತ್ತು ಕಂಡವರು ಅಪ್ಪಿಕೊಂಬರಲ್ಲದೆ
ಬಿಚ್ಚಿ ಬಿಚ್ಚಿ ತೋರಿವುಂಟೆ ?
ಬಾಗಿಲ ಮುಂದೆ ಹಾಲ ಸಾಗರವಿದ್ದು ಒರಿತೆಯ
ನೀರಿಗೆ ಹಾರುವಂತೆ ?
ತುಂಬಿದ ಕೆರೆಗೆ ಹರಗೋಲ ಹಾಕಿ ಬಲೆಯ ಬೀಸಿದಂತೆ" ೧

ಬೆಂಕಿಯಲ್ಲಿ ಬೆಂದ ದೇಹಕ್ಕೆ ಆಕಾರವುಂಟೆ ಮುತ್ತು ಕಂಡಾಗ ಅದನ್ನು ಅಪ್ಪಿಕೊಂಬರಲ್ಲದೆ ಅದನ್ನು ಬಿಚ್ಚಿ ಬಿಚ್ಚಿ ತೋರಿಸುವರೆ ನಮ್ಮ ಬಾಗಿಲ ಮುಂದೆ ಹಾಲ ಸಾಗರವಿದ್ದಾಗ ನೀರಿನ ಬೆಲುಮೆಗಾಗಿ ಹಾರುವರೆ ತುಂಬಿ ಹರಿಯುವ ಕೆರೆಗೆ ದೋಣಿ ಬಿಟ್ಟು ಬಲೆಯ ಹಾಕಿದಂತೆ ಅದು ಕೈಗೆ ಸಿಗದು.

"ಉರಿಯೊಡ್ಡಿದಡೆ ಸೀತಳವೆನಗೆ
ಗಿರಿಮೇಲೆ ಬಿದ್ದರೆ ಪುಷ್ಪವೆನಗೆ
ಸಮುದ್ರ ಮೇಲು ವಾಯಿದೆರೆ ಕಾಲುವೆಯೆನಗೆ
ಚನ್ನಮಲ್ಲಿಕಾರ್ಜುನ ನಿಮ್ಮಾಣೆಯೆಂಬುದು
ತಲೆಯೆತ್ತಿ ಬಾರದ ಭಾರವೆನಗೆ" ೨

ಉರಿಯುವ ಬೆಂಕಿಯಲ್ಲಿ ಹಾಕಿದರು ಅದು ನನಗೆ ತಂಪು ನೀಡುವುದು ಪರ್ವತವೇ ಮೇಲೆ ಬಿದ್ದರೆ ಅದು ಪುಷ್ಪವೆಂಬಂತೆ ತೋರುವುದು ಎನಗೆ ಸಮುದ್ರ ಮೇಲೆ ಹಾಯ್ದು ಬಂದರೆ ಕಾಲ್ವೆಯನಗೆ ಚನ್ನಮಲ್ಲಿಕಾರ್ಜುನ ನಿಮ್ಮ ಆಣೆ ತಿನ್ನುವುದು ಎನಗೆ ತಲೆ ಎತ್ತದ ಭಾರವಾಗಿದೆ.

---

೧. ಡಾ. ಎಂ. ಎಂ. ಕಲಬುರ್ಗಿ– ಶಿವಶರಣೆಯರ ವಚನ ಸಂಪುಟ–೧೯೯೩ ಪು.ಸಂ೩೧
೨. ಡಾ.ಎಲ್. ಬಸವರಾಜ–ಅಕ್ಕನ ವಚನಗಳು ೧೯೯೬ ಪು. ಸಂ: ೧೫೭

"ಜಲದ ಮಂಟಪ ಮೇಲೆ
ಉರಿಯ ಚಪ್ಪರವನಿಕ್ಕಿ
ಆಲಿಕಲ್ಲ ಹಸೆಯ ಹಾಸೆ ಬಾಗದ ಕಡ್ಡ
ಕಾಲಿಲ್ಲದ ಹೆಂಡತಿಗೆ
ತಲೆಯಿಲ್ಲದ ಗಂಡ ಬಂದು ಮುಟ್ಟಿದನು ನೋಡಾ !
ಎಂದೆನೂ ಬಿಡದ ಬಾಳುವೆಗೆ ಕೊಬ್ಬರೆನ್ನ
ಚನ್ನಮಲ್ಲಿಕಾರ್ಜುನಯ್ಯನಿಗೆ !" ೧

ಅಕ್ಕ ತನ್ನ ಮದುವೆಗೆ ಸೃಷ್ಠಿಯ ವಸ್ತುಗಳೆಲ್ಲಾ ಹೇಗೆ ಅಲಂಕಾರದ ವಸ್ತುಗಳಾದವು ಎಂದು ಹೇಳುವಳು ಮದುವೆಯಾಗಿ ಸಿದ್ಧಗೊಂಡ ಜಲದ ಮಂಟಪವಾಗಿ ಅದರ ಮೇಲೆ ಉರಿಯ ಚಪ್ಪರವಾಗಿ ಆಲಿಕಲ್ಲು ಹಾಸಿಗೆಯಾಯಿತು. ಹಾಗೂ ಬಾಸಿಂಗ ಕಟ್ಟಿ ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡನೊಡನೆ ಕೂಡಿಕೊಂಡಳು ಎನ್ನುವಲ್ಲಿ ಎಲ್ಲವು ಬಯಲು ಆತ್ಮ ಆತ್ಮದೊಡನೆ ಬೇರೆಯಿತು. ಇದು ನಿರಾಕಾರವಾದದ್ದು.

"ಎನ್ನ ನಾನರಿಯದಲ್ಲಿ ಎಲ್ಲಿರ್ದೆ ?
ಹೇಳಯ್ಯ !
ಚಿನ್ನ ನೊಳಗಣ ಬಣ್ಣದಂತೆ ಎನ್ನೊಳಗಿರ್ದೆ !
ಅಯ್ಯ ಎನ್ನೊಳಗೆ ಇನಿತಿರ್ದು ಮೈದೋರದ ಭೇದವ
ನಿಮ್ಮಲ್ಲಿ ಕಂಡೆನು ಕಾಣಾ ಚನ್ನಮಲ್ಲಿಕಾರ್ಜುನ," ೨

ನನ್ನನು ನಾನು ಅರಿಯದಾದೆ ನೀನು ನನ್ನಲ್ಲಿ ಹೇಗಿದೆ ಎಂದರೆ ಚಿನ್ನದೊಳಗೆ ಇದ್ದ ಬಣ್ಣದಂತೆ ನನ್ನಲ್ಲಿ ನೀನು ಇದ್ದು ಮೈದೂರದ ಭೇದ ನನ್ನಲ್ಲಿ ನಿಮ್ಮ ನಾ ಕಂಡು ಸಂತೋಷ ಗೊಂಡೆನಯ್ಯ.

"ಹಗಲು ನಾಲ್ಕು ಜಾವ ಶನಕ್ಕೆ ಕಂದಿಮರು
ಇರಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು !
ಅಂಗ ನೀರೊಳಗಿದು ಬಾಯಾರಿ ಸತ್ತಂತೆ !
ತಮ್ಮೊಳಗಿರ್ದ ಮಹಾಘನವ ನರಿಯರು
ಚನ್ನಮಲ್ಲಿಕಾರ್ಜುನ." ೩

---

೧. ಡಾ.ಎಲ್. ಬಸವರಾಜ–ಅಕ್ಕನ ವಚನಗಳು ೧೯೯೬ ಪು. ಸಂ: ೫೭
೨. ಡಾ. ಎಂ. ಎಂ. ಕಲಬುರ್ಗಿ– ಶಿವಶರಣೆಯರ ವಚನ ಸಂಪುಟ–ಪು.ಸಂ೩೪
೩. ಡಾ. ಎಂ. ಎಂ. ಕಲಬುರ್ಗಿ– ಶಿವಶರಣೆಯರ ವಚನ ಸಂಪುಟ–ಪು.ಸಂ೧೨೩

ಹಗಲಿನ ನಾಲ್ಕು ಹೊತ್ತು ಬೇರೆಯವರ ನಿಂದೆಯಲ್ಲಿ ಕಳೆದರು ಇರುಳಿನ ನಾಲ್ಕು ಹೊತ್ತು ನಿದ್ದೆಯಲ್ಲಿ ಕಳೆದರು ಆಗಸ ನೀರಿನಲ್ಲಿ ಇದ್ದು ಸತ್ತಂತೆ ! ಹಾಗೆ ನಿಮ್ಮಲ್ಲಿ ಇವು ನಿಮ್ಮ ಮಹಿಮೆ ಅರಿಯದೆ ಸತ್ತೆನು ದೇವಾ ಚನ್ನಮಲ್ಲಿಕಾರ್ಜುನ

(ಆ) ಸಾಮಾಜಿಕ ನಿಲುವು:

"ಶರಣರ ಕ್ರಾಂತಿ, ಭಾರತದ ಮೊಟ್ಟಮೊದಲ ಜನತಾ ಆಂದೋಲನ", ಸಮಾಜದ ವಿವಿಧ ಸ್ತರಗಳಿಂದ ಬಂದ ಜನ ಇವರಲ್ಲಿ ಸಾಲುಗಾರರಾಗಿ, ಹಲವಾರು ವಿಷಯಗಳ ಬಗೆಗೆ ಸಮಷ್ಟಿ ಚಿಂತನೆ ನಡೆಸಿದರು. ವೃತ್ತಿ ಭೇದಗಳನ್ನು ತೊಡೆದುಹಾಕಿ, ಸಮಾಜದಲ್ಲಿ ಶಿವಭಕ್ತಿಯ ಮೌಲ್ಯದ ಸಮಾನತೆ ತರಲು ಬಯಸಿದರು. ಅನಂತ ಕಾಲದಿಂದ ಧಾರ್ಮಿಕ, ಸಾಮಾಜಿಕ ವ್ಯವಹಾರಗಳಿಂದ ದೂರ ಉಳಿದ, ಶೂದ್ರ ಸಮಾನಳೆಂದು ಪರಿಗಣಿಸಲ್ಪಟ್ಟ ಮಹಿಳೆಗೆ ಸಮಾಜದಲ್ಲಿ ಸಮಾನ ಅವಕಾಶ, ಗೌರವ ಸಲ್ಲುವಂತೆ ಮಾಡಿದರು. ತತ್ಪರಿಣಾಮವಾಗಿ ಮಹಿಳೆಯರಲ್ಲಿ ಜಾಗ್ರತಿ ಉಂಟಾಯಿತು. ಇಂತಹ ಜಾಗ್ರತಿಯ ಕುರುಹನ್ನು ಆ ಕಾಲದ ಶರಣೆಯರಲ್ಲಿ ನಿಚ್ಚಳವಾಗಿ ಗುರುತಿಸಹುದು. ದೀರ್ಘಕಾಲದ ನಂತರ ವಾಕ್ ಸ್ವಾತಂತ್ರ್ಯವನ್ನು ಪಡೆದ ಅವರು, ಸ್ತ್ರೀ, ಪುರುಷ ಸಮಾನಳೆಂಬ ವಾದವನ್ನು ಎತ್ತಿಹಿಡಿದರು. ಕೆಲವರು ಅದನ್ನು ವಾಚ್ಯವಾಗಿ ಹೇಳಿಯೂ ಬಿಟ್ಟರು:

"ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕ್ಷಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲಿ.
ಅದು ಜಗದ ಹಾಹೆ ಬಲ್ಲವರ ನೀತಿಯಲ್ಲ" ೧

ಎಂದಳು ಸತ್ಯಕ್ಕ, "ಮೊಲೆ ಮುಡಿ ಬಂದರೆ ಹೆಣ್ಣೆಂಬರು" ಎಂದು ಹೇಳಿದಗೊಗ್ಗವ್ವೆ ದೇವರ ದಾಸಿಮಯ್ಯನವರ ವಚನವನ್ನು, ಅಲ್ಪ ವ್ಯತ್ಯಾಸದೊಂದಿಗೆ ಮತ್ತೊಮ್ಮೆ ಉಗ್ಗಡಿಸಿದಳು. ಸಾಮಾಜಿಕವಾಗಿ ಹತ್ತಿಕ್ಕಲ್ಪಟ್ಟ ಅಂದಿನ ಸಂಕೀರ್ಣ ಸ್ಥಿತಿಯಲ್ಲಿ ಸ್ತ್ರೀ ಸಮಾನತೆಯನ್ನು ಕುರಿತು ಮಾತನಾಡಿದುದು ಅವರ ದಿಟ್ಟ ಮನಸ್ಸಿನಿಂದ ಹೇಳಿರಬೇಕು. "ಕೊಟಕ್ಕೆ ಸತಿಪತಿಯೆಂಬ ನಾಮವಲ್ಲದೆ ಅವರಿಂಗೆ ಬೇರೊಂದೊಡಲಂಟೆ ? ಎಂದು ಆಯ್ದಕ್ಕಿ ಲಕ್ಕಮ್ಮ.

"ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀ ಜಾತಿ ನಿಮ್ಮ ಶ್ರೀಪಾದದಲ್ಲಿ ಅಡಗಿತ್ತು. ಎನಗೆ ಭಿನ್ನದ ಮಾತಿಲ್ಲ" ಎಂದು ಮೋಳಿಗೆಯ ಮಹಾದೇವಿ ಹೇಳಿ, ಭಕ್ತಿ, ಜ್ಞಾನ, ಆಧ್ಯಾತ್ಮ ಮುಂತಾದ ವಿಷಯಗಳ ಬಗೆಗೆ ಸ್ತ್ರೀ ಪುರುಷರೆಂಬ ಭೇದಗಳೆಲ್ಲ ಅರ್ಥಹೀನ ಎಂದರು. ಮುಕ್ತಿ ಸಾಧನೆಯಂತಹ ಆಂತರಿಕ ಸಾಧನೆ ಆಕೆಯ ವ್ಯಾಪ್ತಿಗೆ ಮೀರಿದಲ್ಲ ಎಂದು ವಾದಿಸಿ, ಆ ರಂಗದಲ್ಲಿಯೂ ತಮ್ಮ ಹಿರಿತನವನ್ನು ಮೆರೆದರು. ಅಣ್ಣ ಅಜಗಣ್ಣನ ಅವಸಾನವಾದಾಗ ವ್ಯಥಿತಳಾದ ಮುಕ್ತಾಯಕ್ಕ, ತನ್ನನ್ನು ಸಂತೈಸಲು ಬಂದ ಶೂನ್ಯ ಸಿಂಹಾಸಾನಾಧಿಪತಿ

೧. ಡಾ.ಎಂ.ಎಂ.ಕಲಬುರ್ಗಿ– ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ.೨೩

ಅಲ್ಲಮಪ್ರಭು ಅವಾಕ್ಕಾಗುವಂತೆ ಕೇಳಿದ ಪ್ರಶ್ನೆಗಳು ಮುಕ್ತಾಯಕ್ಕಳ ಸಂಪಾದನೆ, ಅನುಭವ ಮಂಟಪದ ಶರಣರೆದುರಿಗೆ ತನ್ನನ್ನು ಒರೆಗಲ್ಲಿಗೆ ಹಚ್ಚಿದಾಗ ವೀರವಿರಾಗಿಣಿ ಮಹಾದೇವಿಯಕ್ಕ ವ್ಯೋಮ ಮೂರ್ತಿ ಅಲ್ಲಮನಿಗೆ ನೀಡಿದ ಉತ್ತರಗಳು ಯಾವುದೇ ವಿಷಯದಲ್ಲಾಗಲಿ ಸ್ತ್ರೀಯು ಪುರುಷನನ್ನು ಮೀರಬಲ್ಲಳು; ಅಂತಹ ಅದ್ಭುತ ಶಕ್ತಿ, ಧೈರ್ಯ, ಆತ್ಮ ಪ್ರತ್ಯಯಗಳು ಆಕೆಯಲ್ಲಿವೆ ಎಂಬುದನ್ನು ಧ್ವನಿಸುತ್ತವೆ.

"ಮಹಾದೇವಿಯಕ್ಕಂಗಳ ನಿಲುವಿಂಗೆ ನಮೊ" ಎಂದು ಪ್ರಭು ಹೇಳಬೇಕಾಯ್ತು. ಹೀಗೆ ಸ್ತ್ರೀ-ಪುರುಷ ಸಮಾನಳು ಎಂದು ಘೋಷಿಸಿ, ಮುಂದಿನ ಮಹಿಳಾ ಪ್ರಪಂಚಕ್ಕೆ ದಾರಿ ದೀಪವಾದರು. ಶರಣೆಯರು, ಪರಂಪರಾನುಗತವಾಗಿ ಬಂದ ಸಾಮಾಜಿಕ ಸಾಂಪ್ರದಾಯಗಳನ್ನು ಮುರಿದು, ವ್ಯಕ್ತಿ ಸ್ವಾತಂತ್ರ್ಯದಂತಹ ಮೌಲ್ಯವನ್ನು ಬದುಕಿ ತೋರಿದರು. ಶ್ರೇಷ್ಠ ಶರಣೆ ಅಕ್ಕಮಹಾದೇವಿಯ ಜೀವನವೇ ಇದಕ್ಕೊಂದು ಜ್ವಲಂತ ನಿದರ್ಶನ. ಎಂಟನೂರು ವರುಷಗಳ ಹಿಂದೆ ಕಟ್ಟುನಿಟ್ಟಾದ ವೈವಾಹಿಕ ಕಟ್ಟಳೆಯನ್ನು ಅಲ್ಲಗಳೆದು, ಸಾಂಪ್ರದಾಯ ವಿರೋಧಿಯಾಗಿ, ತನ್ನ ಹೆಣ್ತನ ತನ್ನ ವೈರಾಗ್ಯ ಸಾಧನೆಗೆ ಆತಂಕವಾಗಲಾರದೆಂಬುದನ್ನು ಧೈರ್ಯವಾಗಿ ತೋರಿಸಿಕೊಟ್ಟಳು. ಪ್ರಚಲಿತವಿದ್ದ ಜೀವನ ಮೌಲ್ಯಗಳನ್ನು ಒಪ್ಪಿಕೊಳ್ಳದೆ, ಅನುಭಾವವನ್ನೊಪ್ಪಿಕೊಂಡು, ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚನ್ನಮಲ್ಲಿಕಾರ್ಜುನನಿಗೆ ಒಲಿದಳು.

ವಚನಗಳು :

"ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು !
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು !
ಹದುಳೀಗರಲ್ಲ ದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು !
ಅರಿವು ಕಣ್ಣೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು !
ಭಾವಶುದ್ಧ ವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು !
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು
ಹೃದಯಕದು ಅರಳದವರಲ್ಲಿ ಇರಲೋಲ್ಲೆಯಯ್ಯ ನೀನು
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ
ಚನ್ನಮಲ್ಲಿಕಾರ್ಜುನಯ್ಯ." ೧

ಸಮಾಜದಲ್ಲಿ ದೇವರು ಎಂಥಾ ಜನರು ಇರಬೇಕು ಎಂದು ಬಯಸುವನು, ಮತ್ತು ಅವನ ಪೂಜೆಗಾಗಿ ಬೇಕಾಗುವ ಹೂವು, ನೀರು, ಆರತಿ, ಧೂಪ, ಗಂಧ, ಅಕ್ಷತೆ, ನೈವ್ಯದ್ಯ ತಾಂಬುಲಗಳನ್ನು ಯಾರಿಂದ ಸ್ವೀಕರಿಸಲು ಬಯಸುವನು ಎಂದು ಅಕ್ಕ ಇಡೀ ದೇಹದ ಒಂದೊಂದು ಅಂಗಗಳ ಶುದ್ಧಿಕರಣದ ಬಗ್ಗೆ ಹೇಳುವಳು. ಈ ವಚನದಲ್ಲಿ ದೇಹದ ಭಾಗಗಳಿಗೆ ಪ್ರಕೃತಿಯಲ್ಲಿ ದೊರೆಯುವ ವಸ್ತುಗಳಿಗೆ ಸಾಮ್ಯತೆಯನ್ನು ಕೊಡುತ್ತಾ ಶಿವನು ಭಕ್ತಿ ಇದ್ದಲ್ಲಿ ಇರಲು ಬಯಸುತ್ತಾನೆ ಎಂದು ಸಮಾಜದಲ್ಲಿ ಜನರಿಗೆ ದೇಹ ಶುದ್ಧಿ ಆತ್ಮ ಶುದ್ಧಿ ಹೊಂದಬೇಕು ಎಂದು ತಿಳಿಸಿ ಕೊಡುವಳು.

"ಕಿಚ್ಚಿಲ್ಲದ ಬೇಗೆಯಲ್ಲಿ ಬೆರಿದೆನವ್ವ
ಏರಿಲ್ಲಿದ ಘಾಯದಲ್ಲಿ ನೊಂದೆನವ್ವ
ಸುಖವಿಲ್ಲದ ಧಾವತಿಗೊಂಡೆನವ್ವ
ಚನ್ನಮಲ್ಲಿಕಾರ್ಜುನ ದೇವಂಗೊಲಿದು
ಬಾರದ ಭವಂಗಳಲ್ಲಿ ಬಂದೆನವ್ವ "೨

ಚನ್ನಮಲ್ಲಿಕಾರ್ಜುನನ ಭಕ್ತಿಯಲ್ಲಿ ತಾನು ತನ್ನ ವೇದನೆಯನ್ನು ಅಕ್ಕ ತನ್ನ ಸ್ನೇಹಿತೆಯರಿಗೆ ಹೇಳುವ ರೀತಿ. ಬೆಂಕಿಯ ಕಿಡಿ ಕಾಣದಿದ್ದರು, ನೋವಿನ ಬೆಂಕಿಯಲ್ಲಿ ಬೆಂದು ಹೋಗಿದ್ದೇನೆ. ನನ್ನ ಮನಸ್ಸಿಗೆ ಆದ ನೋವಿನ ಗಾಯವು ಯಾರಿಗೆ ಕಾಣುತ್ತಿಲ್ಲಾ, ಆ ಕಾಣದ ಗಾಯದಲ್ಲಿ ನೋವನ್ನು ಅನುಭವಿಸುತ್ತಿರುವೇನು ನಾನು ನಿನ್ನನ್ನು ಕಾಣಲು ಅನೇಕ ಕೆಲಸವ ಮಾಡಿದೆ ಅದರಿಂದ ಸುಖ ದೊರೆಯುವುದಿಲ್ಲ ಯಾವಾಗಲೂ ಬರಿ ನೋವಿನಲ್ಲಿ ಇರುವೆನು.

೧. ಡಾ. ಎಂ. ಎಂ. ಕಲಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ ೭೫–೭೬
೨. ಡಾ. ಎಂ. ಎಂ. ಕಲಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ ೫೩

“ಅರಿ ವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯ ಲೋಕವೆಲ್ಲವು
ಅರಿವು ಉಳಿಯಲರಿಯದೆ ಕೆಟ್ಟತ್ತು ಲೋಕವೆಲ್ಲವು
ನಾನೆಂತು ಬದುಕುವೆ ನಣ್ಣಾ ?
ಕತ್ತಲೆ ಬೆಳಗ ಕಾಂಬ ಸರದೇಹಿ ನಾನೊಬ್ಬಳು
ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತು ಅಜಗಣಾ ನಿನ್ನ ಯೋಗ.”೧

ಸಮಾಜದ ಜನರಲ್ಲಿ ಅರಿವು, ತಿಳುವಳಿಕೆ, ಜ್ಞಾನ ಮುಖ್ಯವಾದದ್ದು ತಿಳುವಳಿಕೆ ಇಲ್ಲದ ಜನ ತೊಳಲಾಡುತ್ತಿರುವರು ಭೂಮಿಯ ಮೇಲೆ ಜನರಿಗೆ ತಿಳಿ ಹೇಳುವರು ಯಾರಯ್ಯ ಈ ಜನರಿಗೆ ಸತ್ಯ ಅಸತ್ಯತೆಯ ತಿಳಿವು ಇಲ್ಲ ಯಾವು ಕತ್ತಲೆ ಯಾವು ಬೆಳಕು ಎಂದು ಅರಿಯರು ಇಲ್ಲ ಜನರಿಗೆ ಇದರಬಗ್ಗೆ ತಿಳಿಸುವುದು ಎಂದರೆ ಕಣ್ಣಿ ಬಟ್ಟೆ ಕಟ್ಟಿ ಕನ್ನಡಿ ತೊರಿಸಿದಂತೆ ಆಗುತ್ತದೆ ಅಜಗಣ್ಣ ಯೋಗಭಕ್ತಿ ತೋರಿಸಿದರೆ.

“ಊರ ಒಳಗಣ ಬುಲು, ಊರಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣಬಯಲು
ಊರಹೂರಗೆ ಹೊಲೆಯಬಯಲೆಂದುಂಟೆ
ಎಲ್ಲಿ ನೋಡಿದಡೆ ಬಯಲೊಂದೆ
ಭಿತ್ತಿಯಿಂದ ಒಳಹೊರಗೆಂಬ ನಾವುವ ವೈಸೆ
ಎಲ್ಲಿ ನೋಡಿದಡೆ ಕರೆದಡೆ ಓಎಂವಾತನೆ ಬಿಡಾಡಿ.” ೨

ಇಲ್ಲಿ ಭೂಮಿಯ ಸೀಮೆಯ ಜೊತೆ ಜಾತಿಯತೆಯ ಬಗ್ಗೆ ಸಹ ತಿಳಿಸುತ್ತದೆ. ಅಲ್ಲಿ ಒಂದು ಜಾತಿಯ ಜನರು ವಾಸಿಸುವ ಸೀಮೆ ಇಲ್ಲ ಒಂದು ಜಾತಿ ಜನರ ಸೀಮೆ ಆದರೆ ಎಲ್ಲಡೆಯ ಒಂದೇ ಭೂಮಿ ಆದರೆ ಎಲ್ಲಡೆಯು ಇರುವ ಶಿವನು ಒಬ್ಬನೆ ಅವನು ಯಾವ ಸೀಮೆಯಲ್ಲಿ ವಾಸಿಸುವ ಜನ ಕರೆದರು ಓ ಎಂದು ಉತ್ತರ ನೀಡುವಂತನೇ ಸರ್ವಶಕ್ತ ಶಿವನು ಎಂದು ತಿಳಿಸುತ್ತಾರೆ.

“ಘಟ ಪಟನಾದಿ ಓ ಎಂಬಾತ ಲಿಂಗ
ತರಗೆಲೆಗಳಿ ಗೊಂದೆ ಗಾಳಿ ಹಾರುತ್ತಿದ್ದವು.
ಒಂದೇ ಅನಿಲ ನಿಂದ ದೇಹಪಟ್ಟಗಳೊಳಗೆಲ್ಲ
ರೆದಡೆ ಓ ಎಂಬಾತನೆ ಬಿಡಾಡಿ.” ೩

---

೧. ವಾಣಿಶ್ರೀ ಪಾಟೀಲ್ ಪು.ಸಂ; ೨೬
೨. ಡಾ. ಎಂ.ಎಂ. ಕಲಬುರ್ಗಿ–ಶಿವಶರಣೆಯರ ವಚನ ಸಂಪುಟ–೧೯೯೩ ಪುಸಂ: ೩೨೫
೩. ಡಾ. ಎಂ.ಎಂ. ಕಲಬುರ್ಗಿ–ಶಿವಶರಣೆಯರ ವಚನ ಸಂಪುಟ–೧೯೯೩ ಪುಸಂ: ೩೨೫

ದೇಹ ಉಳ್ಳ ಯಾವ ವ್ಯಕ್ತಿಯು ಕರೆದರು ಓ ಎಂದು ಬರುವವನೆ ನಮ್ಮ ಶಿವ ಗಿಡ, ಮರ ಬಳ್ಳಿಗಳಿಗೆ ಒಂದೇ ಗಾಳಿ ಒಂದೇ ಅನಿಲ ಹೀಗಿರುವಾಗ ಜಾತಿಯ ಭೇದವೇಕೆ ದೇಹವಲ್ಲಿ ಗಾಳಿ ಇರುವ ಯಾರೆ ಕರೆದರು ಓ ಎಂದು ಬರುವವನೇ ನಮ್ಮ ಬಿಡಾಡಿ.

"ಕ್ರೋಧವೆಂಬ ಹೊಲಗೇರಿಯ ಹೊರವಂಟು
ಭೇದ ವೆಂಬೈವ ರನತಿಗಳೆದನು
ನಾದ ಬಿಂದು ವೆಂಬ ತೀರ್ಥವನ್ನು ಮಿಂದು
ಆದಿ ಎಂಬ ಅಷ್ಟದಳವಂ ರೆತ್ತೆತ್ತಿ ಹೋದನ್ನು.
ನಾದ ಬಿಂದು ಆದಿ ಬೋಧೆಗೆ ಒಳಗಾದ ಘನವನು
ಸಾಧಿಸಿದಂಭೋ ಎನ್ನ ಅಜಗಣ್ಣತಂದೆ." ೧

ಮುಕ್ತಾಯಕ್ಕ ತನ್ನ ಅಣ್ಣ ಅಜಗಣ್ಣ ಸಂಸಾರದಲ್ಲಿ ಇದ್ದುಕೊಂಡು ಸಹ ಸಮಾಜದ ಜನರಿಗೆ ಮುಕ್ತಿಸಾಧನೆಯ ಮಾರ್ಗದ ದಾರಿದೀಪವಾಗಿ ಕಾಣಿಸುತ್ತಾರೆ. ಯಾವ ಯಾವುದರಿಂದ ನಾವು ದೂರವಿರಬೇಕು ಎಂದು ಹೀಗೆ ಹೇಳುತ್ತಾಳೆ. ಮನುಷ್ಯನಿಗೆ ಸಿಟ್ಟು ಸಲ್ಲದು ಇವು ಹೇಗಿವೆ ಎಂದರೆ ನಮ್ಮ ಊರಿನಲ್ಲಿ ಎಲ್ಲಿ ಹೊಲಸನ್ನು ಹಾಕುವ ಸ್ಥಳದಂತೆ ಇದೆ. ಸಿಟ್ಟು ಮನಸ್ಸಿನಿಂದ ಹೊರಹಾಕುವ ಭೇದ-ಭಾವಗಳನ್ನು ಬಿಟ್ಟು "ನಾದ ಬಿಂದುವೆಂಬ ತಿರ್ಥಸ್ಥಳಗಳಲ್ಲಿ ಸ್ನಾನಮಾಡಿ ಸಂಸಾರದ ಸಮಾಜದ ಸಂಕೊಲೆಗಳನ್ನು ಕಿತ್ತು ಒಗೆದು ಎಲ್ಲದಕ್ಕೂ ಮೂಲನಾದ ಶಿವನಲ್ಲಿ ಲೀನನಾದನು ಎನ್ನ ಅಣ್ಣ ಅಜಗಣ್ಣತಂದೆ ಎಂದು ಮುಕ್ತಾಯಕ್ಕ ಹೇಳುವಳು.

"ಬಟ್ಟ ಬಯಲಲ್ಲಿ ಒಂದು ಶರಧಿ ಹುಟ್ಟಿತು,
ಆ ಶರಧಿಯ ನಡುವೆ ಒಂದು ಕಮಲ ಹುಟ್ಟಿತು,
ಆ ಕಮಲದ ನೆಲೆಯು ಕಾಣಲರಿಯದೆ ತೊಳೆಬಳಲಿ
ಜಗದೊಳಗೆ ನುಚ್ಚು ಮಚಿಗೊಳಗಾಗಿ ಚುಚ್ಚಳ ಮೂಜೆಗೆ ಸಿಲ್ಕಿ
ಕುಲದೆ ಛಲಕ್ಕೆ ಕೊಂದಾಡಿ, ಭವಕ್ಕೆ ಗುರಿಯಾಗುವ
ಮನುಜರ ಕಂಡು ನಾಚಿತ್ತೆನ್ನ ಮನವು.
ಮಹಾಜ್ಯೋತಿಯ ಬೆಳಗಿನಲಿ ಓಡಾಡುವ ಶರಣರ
ಆಸೆಯ ರೋಷಪಾಶಕ್ಕೊಳಗಾದ ಈ ಜಗದ ಹೇಸಿಗಳೆತ್ತಬಲ್ಲರು,
ಈ ಮಹಾಶರಣರ ನೆಲೆಯ, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ ?" ೨

೧. ವಾಣಿಶ್ರೀ ಎಸ್. ಪಾಟೀಲ್ ಪು.ಸಂ. ೨೭

೨. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪುಸಂ: ೩೭೭

ಎಲ್ಲ ಜನರ ಮೂಲಯಾವುದು ಎಂದು ತಿಳಿಯದೆ ಜಗದಲ್ಲಿ ತೊಳಲಾಡಿ ಜಾತಿಯತೆಯಲ್ಲಿ ಹೋರಾಡಿ ಫಲ ಸಾಧನೆಗೆ ಬಡಿದಾಡಿ ಸಂಸಾರದಲ್ಲಿ ತೊಳಲಾಡುವ ಜನರ ಕಂಡು ನಾಚಿಕೆಯಾಗುತ್ತಿದೆ. ನಮ್ಮ ನೆಲೆಯ ಬಗ್ಗೆ ಹೀಗೆ ಹೇಳುವಳು. ಬಟ್ಟ ಬಯಲಲ್ಲಿ ಒಂದು ಶರಧಿ ಹುಟ್ಟಿತು ಆ ಶರಧಿಯ ನಡುವೆ ಒಂದು ಕಮಲ ಹುಟ್ಟಿತು ಆ ಕಮಲದ ನೆಲೆ ಕಾಣವೆ ತೊಳಡುತ್ತಿರುವ ಜನರು ಶಿವಶರಣರ ಮಹಾಜ್ಯೋತಿಯ ಬೆಳಗನ್ನು ತಿಳಿಯದೆ ಇರುವರಲ್ಲ ಎಂದು ಲಿಂಗಮ್ಮ ತಾಯಿ ತನ್ನ ವಚನದಲ್ಲಿ ಹೇಳುತ್ತಾಳೆ.

"ಕಳಿವರಿದ ಮನವು ತಲೆಕೆಳಗಾದುದವ್ವ
ಸುಳಿದು ಬಿಸುವ ಗಾಳಿ ಉರಿಯೊಳಿತವ್ವ
ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ
ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವ
ತಿಳುಹೌ ಬುದ್ಧಿಯ ಹೇಳಿ ಕರೆತಾರೆಲೆಗವ್ವ
ಚನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವ" ೧

ಮುನಿಸಿಕೊಂಡು ಹೋದ ಗಂಡಸನ್ನು ಮನೆಗೆ ಕರೆತನ್ನಿರಿ ಎಂದು ಅಕ್ಕ ತನ್ನ ಗೆಳತಿಯರಿಗೆ ಹೀಗೆ ಹೇಳುವಳು ನಾನು ವಿಚಾರಿಸಿದ ವಿಚಾರಗಳು ಹಾಳಾದವು ನಮ್ಮ ಬಾಳೆಲ್ಲ ತಂಪಾದ ಗಾಳಿಬಿಸುವಾಗ ಉರಿ ಬಂದು ಹೊಗುತಿತ್ತವ್ವ, ತಣ್ಣನೆಯ ಬೆಳದಿಂಗಳು ಉರಿಯುವ ಬಿಸಿಲಿನಂತಾಯಿತು ಇದು ಪಟ್ಟಣಕ್ಕೆ ತಾಗಿ ಅಲ್ಲಿ ಜನ ಚಡಪಡಿಸುತ್ತಿದ್ದರು. ಈ ಅಗಲಿಕೆಯಿಂದ ನಮ್ಮನ್ನು ದೂರಮಾಡು ಎಂದು ತನ್ನ ಸ್ನೇಹಿತೆಯರಿಗೆ ಕೇಳುವಳು.

"ಕೂಟಕ್ಕೆ ಕುರುಹಾದುದ್ದನರಿಯದೆ,
ಆತ್ಮಕ್ಕೆ ಅರಿವಾದುದನರಿಯದೆ,
ಕೈಲಾಸವೆಂಬ ಸೂತ್ರದಲ್ಲಿ ಒಳಗಿಗೆ ಮನಸೋತಿರಲ್ಲಾ !
ಅಂಧಕನ ಕೈಯ ರತ್ನದಂತೆ ಆದಿರಲ್ಲಾ !
ಪಂಗುಳನ ಕರದ ಶಸ್ತ್ರವಂತೆ ಆದಿರಲ್ಲಾ !
ಈ ನಿರಂಗವ ತಿಳಿದು ನಿಂದಲ್ಲಿ ಬೇರೆ ಲಿಂಗವಡಗುವದಕ್ಕೆ
ಉಭಯವುಂಟಂಬ ದಂದುಗ ಬೇಡ.
ತಾ ನಿಂದಲ್ಲಿಯೆ ನಿಜಕೂಟ,
ತಿಳಿದಲ್ಲಿಯೆ ನಿರಂಗವೆಂಬುದು.
ಉಭಯವಿಲ್ಲ ಎನ್ನಯ್ಯಪ್ರಿಯ
ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ." ೨

---

೧. ಡಾ. ಎಂ.ಎಂ. ಕಲಬುರ್ಗಿ–ಶಿವಶರಣೆಯರ ವಚನ ಸಂಪುಟ–೧೯೯೩ ಪುಸಂ: ೪೮
೨. ಡಾ. ಎಂ.ಎಂ. ಕಲಬುರ್ಗಿ–ಶಿವಶರಣೆಯರ ವಚನ ಸಂಪುಟ–೧೯೯೩ ಪುಸಂ: ೩೪೫

ನಾವು ತಿಳುವಳಿಕೆ ಇಲ್ಲದೆ ಕೈಲಾಸಕ್ಕೆ ಹೋಗುವ ಕನಸ್ಸನ್ನು ಕಾಣುತ್ತೇವೆ, ಸ್ನೇಹದ ಸಂಗವನ್ನು ತಿಳಿಯದೆ ಆತ್ಮಶುದ್ಧಿಯನ್ನು ಹೊಂದದೆ ಹೇಗಿದ್ದೆವು ಎಂದರೆ ಮಾಣಿಕ್ಯದ ಬೆಲೆಯನ್ನು ತೀಳಿಯದೆ ಕುರುಡನ ಕೈಯಲ್ಲಿ ಮಾಣಿಕ್ಯವಿರುವಂತೆ ಅಸಾಹಾಯಕ ಕುಂಟನ ಕೈಯಲ್ಲಿ ಇರುವ ಶಸ್ತ್ರದಂತೆ ಮುಕ್ತಿಗಾಗಿ ಸಿದ್ಧರಾದಾಗ ಮನದಲ್ಲಿ ದುಗುಡಬೇಡ ಎಂದು ತಾನು ನಿಂತಲ್ಲೆ ಶಿವನ ಸ್ಥಾನ ಇಲ್ಲೆಮುಕ್ತಿ ಪಡೆಯುತ್ತೇವೆಂಬ ಭಕ್ತಿಬೇಕು ಎಂದು ಮಾಹಾದೇವಿ ಮುಕ್ತಿಗಾಗಿ ತೊಳಲಾಡುವವರಿಗೆ ತಿಳಿಹೇಳುವಳು.

"ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯನೆಲೇತಕ್ಕೆ ?
ಪರುಷರಸ ಕೈಯಲ್ಲಿದ್ದು ಕೂಲಿಯ ಮಾಡಲೇತಕ್ಕೆ ?
ಕ್ಷುತ್ತು ನಿವೃತ್ತಿಯೊದವಂಗೆ ಕಟ್ಟೋಗರದ ಹೊರೆಯ ಹೊರಲೇತಕ್ಕೆ ?
ನಿತ್ಯ ಅನಿತ್ಯವ ತಿಳಿದು, ಮರ್ತ್ಯ ಕೈಲಾಸವೆಂಬುದು ಭಕ್ತರಿಗೆ ಯುಕ್ತಿಯಲ್ಲ.
ನಿಶ್ಚಯುವ ತಾನರಿತು ಅತ್ತಣ ಇತ್ತಣ ಗೊತ್ತು ನಿಶ್ಚಯವಾಗಿ ನಿಂದಲ್ಲಿ,
ಆ ಬಚ್ಚಬಯಲ ಬೆಳಗ ನಿನ್ನ ನೀನೆ ನೋಡಿಕೊ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ. ೧

ಜ್ಞಾನವೆಂಬುದು ನಮ್ಮಲ್ಲೆ ಇರುವುದು ಅದನ್ನು ತಿಳಿಯಲು ಮನಸ್ಸು ಬೇಕು ನಮ್ಮಲ್ಲೆಯೇ ಬೆಂಕಿಃಬಿರುವಾಗ ಕತ್ತಲೆಯಡೆಗೆ ಏಕೆ ಹೊಗಬೇಕು ಬೇಡಿದ್ದನ್ನು ನೀಡುವ ಪರುಷಮಣಿ ನಮ್ಮ ಕೈಯಲ್ಲಿ ಇರುವಾಗ ಕೂಲಿಕೆಲಸ ಮಾಡುವ ಅವಶ್ಯಕತೆ ಏನಿದೆ ? ಯಾವುದು ಸತ್ಯವಾದದ್ದು ಯಾವು ನಿತ್ಯವಾದದ್ದು ಎಂದು ಜನರಿಗೆ ತಿಳಿಸಲು ಜ್ಞಾನದ ಕಣ್ಣು ತೆರೆದಾಗ ಆ ಬೆಳಕಿನಲ್ಲಿ ದೇವರು ಕಾಣುತ್ತಾನೆ, ಎಂದು ಮೊಳಿಗೆ ಮಾಹಾದೇವಿ ಹೇಳುತ್ತಾಳೆ.

ಮನ ಕತ್ತಲೆ, ತನು ಹಮ್ಮು ನೆನಹು ಮರವೆ,
ಇವರೊಳಗೆ ಇದ್ದು ಘನವಕಂಡೆಹೆನೆಂಬ
ಅಣ್ಣಗಳಿರಾ, ನೀವು ಕೇಳಿರೊ.
ಘನವ ಕಾಂಬುದಕ್ಕೆ ಮನವೆಂತಾಗಬೇಕೆಂದಡೆ,
ಅಕ್ಕಿಯ ಥಳಿಸಿದಂತೆ, ಹಲ್ಲ ಸುಲಿದಂತೆ,
ಕನ್ನಡಿಯ ನೋಡಿದಂತೆ,
ಮನ ನಿರ್ಮಲವಾದಲ್ಲದೆ ಘನವ ಕಾಣಬಾರದು
ನಮ್ಮ ಅಪ್ಪಣ್ಣಪ್ರಿಯ ಚನ್ನಬಸವಣ್ಣ. ೨

---

೧. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪುಸಂ: ೪೫
೨. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪುಸಂ: ೩೭೭

ಮನಸ್ಸಿನಲ್ಲಿ ಕೆಟ್ಟ ವಿಚಾರಗಳು ತುಂಬಿ ದೇಹದಲ್ಲಿ ಅಹಂಕಾರ ತುಂಬಿ, ನಿಮ್ಮನ್ನೆ ಮರೆತು ಇವರು ಶ್ರೇಷ್ಠತೆಯನ್ನು ಕಂಡೆವೆಂದು ಹೇಳುವ ಅಣ್ಣಗಳಿರಾ ನೀವು ಕೇಳಿರಿ ಶಿವನ ಘನವ ಕಾಣುವುದಕ್ಕೆ ಮನಸ್ಸು ಹೇಗಿರಬೇಕು ಎಂದರೆ ಅಕ್ಕಿಯನ್ನು ಥಳಿಸಿದಂತೆ, ಹಲ್ಲ ಸುಲಿದಂತೆ, ಕನ್ನಡಿಯ ನೋಡಿದಂತೆ ಆದರ ಪ್ರತಿರೂಪ ನಿರ್ಮಲವಾಗಿರಬೇಕು.

"ಮರ್ತ್ಯಲೋಕದ ಭಕ್ತರ ಮನದ ಬೆಳಗಲೆಂದು
ಇಳೀತಂದನಯ್ಯ ಶಿವನು
ಕತ್ತಲೆಯ ಪಾಳೆಯವ ಕಿವಿ ಹೊಕ್ಕಂತಾಯಿತಯ್ಯ
ಚಿತ್ತದ ಪ್ರವೃತ್ತಿಯ ಹಿಂಗಿಸಿ
ಮುಕ್ತಿ ಪಥವ ತೋರಿದನಲ್ಲಾ ಅಸಂಖ್ಯಾತರುಗಳಿಗೆ
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ
ಭಾವವೆಲ್ಲ ಮಹಾಘನದ ಬೆಳಗು
ಚನ್ನಮಲ್ಲಿಕಾರ್ಜುನಯ್ಯ
ನಿಮ್ಮ ಶರಣರ ರಮ್ಯಜ್ಞಾನಿ ಚನ್ನಬಸವಣ್ಣನ
ಶ್ರೀಪಾದಕ್ಕೆ ಶರಣೆಂದು." ೧

ಭೂಮಿಯ ಮೇಲೆ ಭಕ್ತ ಜನರನ್ನು ಬೆಳಗಿಸಲೆಂದು ಅವರಿಗೆ ಮುಕ್ತಿಯ ಮಾರ್ಗ ತೋರಲೆಂದು ಶಿವನು ಯಾವ ರೀತಿ ಜಗತ್ತಿನ ಕತ್ತಲೆಯನ್ನು ಕಳೆಯಲು ಸೂರ್ಯನು ಬರುವನೊ ಹಾಗೆ ಜನರ ಮನಸ್ಸಿನ ದುಗುಡವೆಲ್ಲಾ ದೂರ ಮಾಡಲು ತನುವೆಲ್ಲಾ ಲಿಂಗಮಯವಾಗಿ ಮಾಹಾಬೆಳಕನ್ನು ತೊರಿದ ಚನ್ನಬಸವಣ್ಣ.

"ಕೆಂಡದ ಶವದಂತೆ
ಸೂತ್ರ ತಪ್ಪಿದ ಬೊಂಬೆಯಂತೆ
ಜಲವರತ ತಟಾಕದಂತೆ
ಬೆಂದ ನುಲಿಯಂತೆ
ಮತ್ತೆ ಹಿಂದಣಂಗ ಉಂಟೈ ಅಣ್ಣ
ಚನ್ನಮಲ್ಲಿಕಾರ್ಜುನವಂಗೆ ಆಶ್ರಯಾಳಾಂದಗೆ." ೨

ಚನ್ನಮಲ್ಲಿಕಾರ್ಜುನನಿಗೆ ಶರಣಾದ ಅಕ್ಕ ತನ್ನ ಈ ದೇಹ ಹೇಗಿದೆ ಎಂದು ಹೇಳುವಳು. ಬೆಂಕಿಯಲ್ಲಿ ಸುಟ್ಟ ಶವದಂತೆ ಸೂತ್ರದ ಬೊಂಬೆಗೆ ನಿಲ್ಲಲು ದಾರವೇ ಮುಖ್ಯ

---

೧. ಡಾ. ಎಂ.ಎಂ. ಕಲಬುರ್ಗಿ–ಶಿವಶರಣೆಯರ ವಚನ ಸಂಪುಟ–೧೯೯೩ ಪುಸಂ: ೯೯–೧೦೦

೨. ಡಾ. ಎಲ್. ಬಸವರಾಜ –ಅಕ್ಕನ ವಚಗಳು–೧೯೫೬ ಪು.ಸಂ ೯೭

ಆ ದಾರಕಡಿದರೆ ಬೊಂಬೆ ಕುಸಿದು ಬೀಳುತ್ತದೆಯೋ ಹಾಗೆ ನೀರೆಲ್ಲವೂ ಒಣಗಿ ಹೋದ ಕೆರೆಯಂತೆ, ಸತ್ವವಿಲ್ಲದ ದಾರದಂತೆ, ಬೆಂಕಿಯಲ್ಲಿ ಬೆಂದ ದಾರದಂತೆ ನಾನು ಸಂಸಾರದಿಂದ ದೂರ ಬಂದಿದ್ದೇನೆ. ಯಾವರೀತಿ ಶವ, ಸೂತ್ರದ ಬೊಂಬೆ, ಕೆರೆ, ನುಲು ಮೊದಲಿನ ಸ್ಥಿತಿಗೆ ಬರಲಾರವೋ ಹಾಗೆ ನಾನು ಮತ್ತು ಸಮಾಜದ ಬಂಧನಕ್ಕೆ ಬರಲಾರೆ ಈಗ ಎನಗೆ ಚನ್ನಮಲ್ಲಿಕಾರ್ಜುನನ ಆಶ್ರಯ ದೊರೆತಿದೆ ಎಂದು ಅಕ್ಕ ಹೇಳುವಳು.

"ಹೋಗುತ್ತ ಹೋಗುತ್ತ ಹೊಗೆಯಕಂಡೆ,
ಹೊಗೆಯೊಳಗೊಂದು ನಗೆಯಕಂಡೆ,
ಬಟ್ಟ ಬಯಲಲ್ಲಿ ಒಂದು ಶರಧಿ ಹುಟ್ಟಿತ್ತು
ಶರಧಿಯ ನಡುವೆ ಒಂದು ಕಮಲ ಹುಟ್ಟಿತು." ೧

ಸಾಧನೆಯಲ್ಲಿ ತೊಡಗಿದಾಗ ಉಂಟಾದ ಮಾನಸಿಕ ಅಸ್ಥಿರತೆಯನ್ನು ಶರಣೆ ಲಿಂಗಮ್ಮ ಮಂಜು-ಮಂಜು ಆಕಾಶವನ್ನು ಕಂಡೆ, ಅದರಲ್ಲಿ ದೇವರು ನಗುವಿನಂತೆ ಮೋಡ ಬಯಲಾದಪ್ಪು ಕಂಡೆ, ಬಯಲು ಪ್ರದೇಶವೆಲ್ಲ ತುಂಬಿ ಹರಿಯುವ ಸಮುದ್ರ ಹುಟ್ಟಿ ಆ ಸಮುದ್ರದಲ್ಲಿ ಕಮಲ ಹುಟ್ಟುವ ಹಾಗೆ ನನ್ನ ಬಟ್ಟಬಯಲಾದ ಮನಸ್ಸಿನಲ್ಲಿ ಭಕ್ತಿ ಹುಟ್ಟಿತು, ಎಂದು ಭಕ್ತಿಯ ಪರಿಯನ್ನು ಸಮಾಜದಲ್ಲಿ ತಿಳಿಸಿ ಹೇಳುವಳು.

"ಮನಕತ್ತಲೆ ತನು ಹಮ್ಮು ನೆನಹು ಮರಿವೆ
ಇದರೊಳಗೆ ಇದ್ದು ಘನವ ಕಂಡಿಹೆನೆಂಬ ಅಣ್ಣಗಳಿದ ನೀವು ಕೇಳೀರ.
ಘನವ ಕಾಂಬುದಕ್ಕೆ ಮನವೆಂತಾಗಬೇಡೆಂದಡೆ
ಅಕ್ಕಿಯ ಥಳೀಸಿದಂತೆ ಹಲ್ಲ ಸುಲಿದಂತೆ, ಕನ್ನಡಿಯ ನೇಡಿದಂತೆ,
ಮನ ನಿರ್ಮಲವಾದಲ್ಲಿದೆ ಘನವ ಕಾಣಬಾರದು
ನಮ್ಮ ಅಪ್ಪಣ್ಣಪ್ರಿಯ ಚನ್ನಬಸವಣ್ಣಾ, " ೨

ಚಿತ್ತ ಶುದ್ಧವಾಗುವತನಕ ಬೆಳಗು ಕಾಣಲು ಸಾಧ್ಯವಿಲ್ಲ, ಅಂತಹ ಚಿತ್ತ ಶುದ್ಧಿಗಾಗಿ ಶರಣರ ಸಂಗಬೇಕು, ಜನನ ಮರಣವನ್ನು ಗೆಲ್ಲಬೇಕು, ಲೋಕ ವ್ಯಾಪಾರದ ಹಂಗು ಹರಿದು ತಾಪತ್ರೇಯ ಹಿಂಗಿ ತಾನು ಪಿವೇಕಿಯಾಗಿ ತನು ಮನ ಧನಗಳನ್ನು ಗುರು ಲಿಂಗ ಜಂಗಮಕ್ಕೆ ಅರ್ಪಿಸಿ, ತಾ ಬಯಲು ದೇಹಿಯಾಗಬೇಕು ಆಗ ಜಲದೊಳಗಣ ಸೂರ್ಯನ ಪ್ರತಿಬಿಂಬದಂತೆ ಸೋಟಪಿಲ್ಲದ ಚಂದ್ರನಂತೆ ಮನಶುದ್ಧವಾಗುತ್ತದೆ. ಈ ಭವಬಂಧನ ನೀಗಲು ಅನುವು ಮಾಡಿ ಕೊಡುತ್ತದೆ. ಎಂದು ಭಕ್ತಿಯ ಪರಿಯನ್ನು ಸಮಾಜದಲ್ಲಿ ಬಿತ್ತಲು ಜನರಿಗೆ ಸಾಮಾಜಿಕ ಉದಾಹರಣೆಯಿಂದ ತಿಳಿಸುವಳು.

೧. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪುಸಂ: ೩೭೫
೨. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪುಸಂ: ೩೭೯

"ತನುವೆಂಬ ಹುತ್ತಕ್ಕೆ ಮನವೆಂಬ ಸರ್ಪ
ಆವರಿಸಿ ಹೆಡೆಯತ್ತಿ ಆಡುತ್ತಿರಲು
ಆ ಸರ್ಪನ ಕಂಡು ನಾ ಹೆದರಿಕೊಂಡು
ಗುರು ಕರುಣವೆಂಬ ಪರುಷವ ತಂದು ಮುಟ್ಟಸಲು
ನೋಟನಿದಿತ್ತು ಹೆಡೆ ಅಡಗಿತ್ತು, ೧

ಹಾವು ಬಯಲಾಯಿತ್ತು ಆ ಗುರುಕರುಣವೆಂಬ ಪರುಷವೆ ನಿಂದಿತ್ತು, ನಿಂದ ಪರುಷವನ್ನ ಕೊಂಡು ನಿಜದಲ್ಲಿ ನಿರ್ಭಯಲಾಗುವ ಶರಣರ ಪಾದವ ನಂಬಿಕೆಟ್ಟು ಬಟ್ಟ ಬಯಲಾದೆನಯ್ಯ ದೇಹವೆಂಬ ಹುತ್ತಿನಲ್ಲಿ ಆಡಗಿದ ವಿಷಯವಾಸನೆಗಳಿಗೆ ಮನವೆಂಬ ವಿಷಸರ್ಪ ಆಡಿತು.

"ಉದಕದೊಳಗಣ ಕಿಚ್ಚಿನಂತೆ ಲಿಂಗೈಕ್ಯವು
ವಾಯುನುಂಗಿದ ಪರಿಮಳದಂತೆ ಲಿಂಗೈಕ್ಯವು
ಉರಿಯೊಳಡಗಿದ ಕರ್ಪೂರದಂತೆ ಲಿಂಗೈಕ್ಯವು
ಭಾವವನೆಡೆಸಿದ ಬಯಲಿನಂತೆ ಲಿಂಗೈಕ್ಯವು
ಅರಿವು ನುಂಗಿದ ಮರಹಿಂತೆ ಲಿಂಗೈಕ್ಯವು
"ಯತೋವಾಚೋ ನಿವರ್ತಂತೇ ನಿವರ್ತಂತೆ
ಅಪ್ರಾಪ್ಯಮನಸಾ ಸಹ " ಎಂಬುದಾಗಿ" ೨

ಇಲ್ಲಿ ಮೊದಲಿಗೇ ಸ್ಪಷ್ಟಪಡಿಸಿಕೊಳ್ಳಬೇಕಾದ ಅಂಶವೆಂದರೆ, ಸತ್ಯಕ್ಕನ ಈ ವಚನವು ಅಲ್ಲಮನ ಬೆಡಗಿನ ವಚನವನ್ನು ನೆನಪಿಸುತ್ತದೆ. ಹಾಗೆಯೇ ಅದೇ ವಚನದಲ್ಲಿ ಕೇವಲ ಹೊರನೋಟಕ್ಕೆ ವ್ಯಕ್ತವಾಗುವ ಇನ್ನೊಂದು ಅಂಶವೆಂದರೆ, ವಚನದ ಐದು ಸಾಲುಗಳ ಕೊನೆಯಲ್ಲೂ ನಿರಂತರವಾಗಿ ಬಳಸಲಾಗಿರುವ "ಲಿಂಗೈಕ್ಯ": ಎಂಬ ಒಂದು ಕ್ರಿಯಾವಿಶೇಷಣೆ. ವ್ಯಾಕರಣದ ದೃಷ್ಟಿಯಲ್ಲಿ ಇದೊಂದು ಕೇವಲ ಕ್ರಿಯಾವಿಶೇಷಣೆ. ಆದರೆ ಶರಣ ಧರ್ಮದ ಪರಿಭಾಷೆಯಲ್ಲಿ ಶರಣನ ಅಂತ್ಯವನ್ನು ಕುರಿತು ಹೇಳಲಾಗುವ ಒಂದು ಸಾಂಸ್ಕೃತಿಕ ನುಡಿಗಟ್ಟು ಅಥವಾ ಈ ವಚನವು ಸಾರುವ ಸತ್ಯವನ್ನು ಸ್ವಲ್ಪ ಸರಳಗೊಳಿಸಿ ಹೇಳಬೇಕೆಂದರೆ, ಅಕ್ಕನ ಈ ವಚನ "ಸಾವು" ನ್ನು ಕುರಿತದ್ದಾಗಿದೆ. ಆದರೆ ವೈದಿಕ ಧರ್ಮವನ್ನು ಮೊದಲುಗೊಂಡು ಅನ್ಯ ಧರ್ಮಗಳಂತೆ ಸಾವಿನೊಡನೆ ಸ್ವರ್ಗ ಮತ್ತು ನರಕಗಳನ್ನು ಥಳಕು ಹಾಕುವುದೂ ಇಲ್ಲ. ಅಥವಾ ಸಾವನ್ನು ವೈಭವೀಕರಿಸುವುದೂ ಇಲ್ಲ.

---

೧. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪುಸಂ: ೩೯೮

೨. ಡಾ. ಎಂ.ಎಂ. ಕಲಬುರ್ಗಿ-ಶಿವಶರಣೆಯರ ವಚನ ಸಂಪುಟ-೧೯೯೩ ಪುಸಂ: ೩೬೬

ಬದಲಾಗಿ, ಸಾವು ಹೇಗೆ ಮಾನವನ ಅರಿವು ಅಥವಾ ಪ್ರಜ್ಞಾವಲಯದಿಂದ ಹೊರತಾಗಿ ನಿಸರ್ಗದ ಅಂತರಾಳದಲ್ಲಿ ಅಡಗಿರುವುದೋ ಹಾಗೆಯ "ಉದಕದೊಳಗಣ ಕಿಚ್ಚಿನಂತೆ" "ವಾಯುನುಂಗಿದ ಪರಿಮಳದಂತೆ" "ಉರಿಯೊಳಡಗಿದ ಕರ್ಪೂರದಂತೆ" "ಭಾವನ ನಡೆಸಿದ ಬಯಲಿನಂತೆ" ಅಥವಾ "ಅರಿವು ನುಂಗಿದ ಮರಹಿನಂತೆ" ಮಾನವನಿಗೆ ಬರುವ ಸಾವು ಅದೃಶ್ಯ ಆಗಮನದಂತೆ, ಉದಕದೊಳಗಿರುವ ಕಿಚ್ಚಿನ ಸತ್ಯದಂತೆ, ವಾಯುವಿನಿಂದ ಬೇರ್ಪಡಿಸಲಾಗದ ಪರಿಮಳದಂತೆ, ಉರಿಯುವ ಕರ್ಪೂರವ ನುಂಗಿದ ಸತ್ಯದಂತೆ, ಅಕ್ಕನ ಅನುಭವ ಚಿಂತನೆ ವಚನದೊಳಗಿನ ಸಹಜ ಸುಂದರ ನಡೆ ಹಾಗೂ ಇದ್ದಕ್ಕಿದ್ದಂತಲೇ ವಚನದೊಳಗೆ ಎದ್ದು ನಿಲ್ಲುವ ಉಪಮೇಯಗಳ ಮಾಲೆಯಿಂದ ಅನುಭಾವ ಕಾವ್ಯ (Metaphysical poetry) ನಿಜರೂಪದ ಸಾಕ್ಷಾತ್ಕಾರವಾಗುತ್ತದೆ.

> "ಅಯ್ಯಾ, ನಾ ಮರ್ತ್ಯದಲ್ಲಿ ಹುಟ್ಟಿ ಕಷ್ಟ ಸಂಸಾರಿ ಎನಿಸಿಕೊಂಡ
> ಕತ್ತಲೆಯಲ್ಲಿ ಮುಳುಗಿ ಕರ್ಮಕ್ಕೆ ಗಿರಿಯಾಗುತ್ತಿದ್ದಡೆ
> ಹೆತ್ತತಾಯಿ ಎಂಬ ಗುರುಸ್ವಾಮಿ ತನ್ನ ಕೊರಳಿಗೆ ಗಂಡನೆಂಬ ಲಿಂಗವ ಕಟ್ಟಿದನು
> ಪ್ರಾಣಕ್ಕೆ ಪ್ರಸಾದವನೂಡಲಾಗಲೆ ಕತ್ತಲೆ ಹರಿಯಿತ್ತು ;
> ಕರ್ಮ ಹಿಂಗಿತ್ತು, ಮನ ಬತ್ತಲೆಯಾಯಿತ್ತು.
> ಚಿತ್ತ ಸುಯಿದಾನವಾಯಿತ್ತು ; ನಿಶ್ಚಿಂತವಾಯಿತ್ತು. "೧

ಈ ವಚನದೊಳಗೆ ಅಡಗಿರುವ ಹಲವು ಅರ್ಥಪೂರ್ಣವೂ ಗಂಭೀರವೂ ಆದ ವಿಚಾರಗಳನ್ನು ಗ್ರಹಿಸಿದರೆ, ಅಲ್ಲಿ ಕೇವಲ ಶರಣೆಯಾಗಿ ಲಿಂಗಮ್ಮನ ಆತ್ಮಕಥೆಯ ಅಂಶಗಳು ಮಾತ್ರವಲ್ಲದೇ, ಒಬ್ಬ ಪ್ರತಿಭಾವಂತೆಯಾದ ಕವಿಯತ್ರಿಯ ದರ್ಶನವಾಗುತ್ತದೆ. ಉದಾ: ಶರಣೆಗೆ, ವಚನದ ಮೊದಲ ಸಾಲಿನಲ್ಲೆ ಇರುವ ನಾ ಮರ್ತ್ಯದಲ್ಲಿ ಹುಟ್ಟಿ ಕಷ್ಟಸಂಸಾರಿ ಎನಿಸಿಕೊಂಡೆ ಎಂಬ ಮಾತಿನಲ್ಲಿ ಲೌಖಿಕ ಜೀವನದ ಬಗೆಗೆ ಒಂದು ರೀತಿಯ ವ್ಯಸನ ಅಥಾವ ವಿಷಾದ ಅಡಗಿರುವಂತೆ ಹೊರನೋಟಕ್ಕೆ ಭಾಸವಾಗುತ್ತದೆ. ಅದು ಸ್ವಲ್ಪ ಮಟ್ಟಿಗೆ ನಿಜ ಕೂಡ. ಏಕೆಂದರೆ, ಸಂಸಾರದ ಜಂಜಾಟಕ್ಕೆ ಸಿಲುಕಿ ಅಖಂಡ ಕಷ್ಟ ಕೋಟಲೆಗಳಿಗೆ ತುತ್ತಾದೆ, ಎಂಬ ಹತಾಶ ಭಾವನೆ ಈ ವಚನದೋಳಗಿದೆ.

---

೧. ಡಾ. ಮ.ನ. ಜವರಯ್ಯ ದಲಿತ ವರ್ಗದ ಶರಣ ಮತ್ತು ಶರಣೆಯರು ಪು.ಸಂ.೨೬೩

ಶರಣರು ತಮ್ಮ ದೇಹದಾಂತ್ಯದ ಶಕ್ತಿ ಸರ್ವಸ್ವದ ಅಣು-ಅಣುವನ್ನು ಹೇಗೆ ಶಿವಾಂಶವನ್ನಾಗಿ ಪರಿವರ್ತನೆ ಮಾಡಿಕೊಂಡರೆಂಬುವುದನ್ನು ತನ್ನ ಮೂಲಕ ತಮ್ಮ ಇಡಿ ಚೇತನಗಳನ್ನೆ ಕರಗಿಸಿ. ಅವುಗಳನ್ನು ಹೇಗೆ ಲೋಕ ಹಿತಾರ್ಥಕ್ಕಾಗಿ ಉನ್ನತ ವಿಚಾರಗಳನ್ನಾಗಿಯೂ. ಅತ್ಯುಚ್ಚ ಆದರ್ಶಗಳನ್ನಾಗಿಯೂ ಪರಿವರ್ತಿಸಿದ್ದಾರೆ. ಎಂಬುವುದನ್ನು ಉರಿಲಿಂಗ ಪೆದ್ದಿಯ ಒಂದು ವಚನದಲ್ಲಿ ಕಾಣಬಹುದಾಗಿದೆ.

"ದೇಹವೆಂಬ ಮನೆಯಲ್ಲಿ ಮಹಾಲಿಂಗವೆಂಬರಸು
ಮನವೆಂಬ ಪೀಠದ ಮೇಲೆ ಮೂರ್ತಿಗೊಂಡು
ಅಂತಃಕರಣಗಳೆಂಬ ಪರಿಚಾರಕರ ಕೈಯಿಂದ
ಪಂಚೇಂದ್ರಿಯಗಳೆಂಬ ಪರಿವಾಣದಲ್ಲಿ
ಶಬ್ದ, ಸ್ಪರ್ಶ, ರೂಪು, ರಸಗಂಧಗಳೆಂಬ ಪದಾರ್ಥಗಳನು
ಎಡೆ ಮಾಡಿಸಿಕೊಂಡು ಸವಿಯುತ್ತಿರಲು
ಆನಂದವೇ ಮಹಾಪ್ರಸಾದವಾಗಿ
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು
ಸದಾ ಸನ್ನಿಹಿತ ಕಾಣಿರೋ : ೧

ಈಗಾಗಲೇ ಸೂಚನೆ ಮಾಡಿರುವಂತೆ, ಶರಣರು ಪಂಚೇಂದ್ರಿಯಗಳನ್ನು ಗೆದ್ದ ಪರಿಯನ್ನೂ. ತನ್ಮೂಲಕ ಅಂತಃಕರಣದ ನಿತ್ಯ ನಿಯಂತ್ರಣವನ್ನು ಸಾಧಿಸಿದ ರೀತಿಯನ್ನೂ-ಅಂತಃಕರಣವನ್ನು 'ಪರಿಚಾರಕ' ಎಂದು ಕರೆದುದರಲ್ಲೂ, ಪಂಚೇಂದ್ರಿಯಗಳನ್ನು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚ ಪದಾರ್ಥಗಳನ್ನಾಗಿ ನಡೆಸಿಕೊಂಡಿರುವುದರಲ್ಲೂ ಉರಿಲಿಂಗ ಪೆದ್ದಿಯ ಈ ವಚನದಲ್ಲಿ ಕಾಣಬಹುದಾಗಿದೆ.

---

೧. ಡಾ. ಮ.ನ. ಜವರಯ್ಯ ದಲಿತ ವರ್ಗದ ಶರಣ ಮತ್ತು ಶರಣೆಯರು ಪು.ಸಂ.೧೧೮

ಇ) ವೈಜ್ಞಾನಿಕ ಹಿದೃಷ್ಟಿಕೋನ :

೧೬ನೇ ಶತಮಾನವನ್ನು ಇತಿಹಾಸದ ಪರ್ವಕಾಲವೆಂದು ಕರೆಯುತ್ತೇವೆ ಈ ಯುಗದಲ್ಲಿ ಜಾಗತಿಕ ಇತಿಹಾಸದಲ್ಲಿ ಹೊಸ ಹೊಸ ಸಂಶೋಧನೆಗಳು ನಡೆದವು. ಪಾಶ್ಚಿಮಾತ್ಯರ ಪ್ರಭಾವದಿಂದ ಅನೇಕ ಹೊಸ ವಿಷಯಗಳು ಬೆಳಕಿಗೆ ಬಂದವು. ಈ ಯುಗವನ್ನು ವೈಜ್ಞಾನಿಕ ಯುಗ ಎಂದು ಸಹ ಕರೆಯುತ್ತೇವೆ. ಈ ಭೂಮಿಯ ಚಲನೆಯ ನಿಯಮ, ಗುರತ್ವಾಕರ್ಷಣೆಯ ನಿಯಮ, ಖಗೋಳಶಾಸ್ತ್ರದ ಕಲ್ಪನೆ ಆಕಾಶ ಕಾಯಗಳಾದ ಸೂರ್ಯ, ಚಂದ್ರ, ನಕ್ಷತ್ರಗಳ ಬೆಳಕಿನ ಕಲ್ಪನೆಯನ್ನು ನೀಡಿದರು. ನಮ್ಮ ಆಧುನಿಕ ವಿಜ್ಞಾನಿಗಳು.

ಈ ವಿಷಯಗಳ ಬಗ್ಗೆ ೧೨ನೇ ಶತಮಾನದ ನಮ್ಮ ಶರಣ–ಶರಣೆಯರ ವಚನದಲ್ಲಿ ಮೊದಲೇ ಪ್ರಸ್ತುತವಾಗಿತ್ತು ಎಂದರೆ ನಮಗೆಲ್ಲಾ ಆಶ್ಚರ್ಯ ಮೂಡಿಸಬಹುದು. ಅವರ ಅಗಾಧ ವಿಚಾರ ಕಲ್ಪನೆಗೆ ನಿದರ್ಶನವಾಗಿ ಅವರ ಅನೇಕ ವಚನಗಳನ್ನು ನಾವು ಕಾಣಬಹುದು. ಭೂಮಿಯ ಗುರತ್ವಾಕರ್ಷಣೆಯ ನಿಯಮದ ಕಲ್ಪನೆ ನೀಡುವಲ್ಲಿ "ತೊಟ್ಟು ಬಿಟ್ಟು ಬಿದ್ದ ಹಣ್ಣು ಮರಳಿ ತೊಟ್ಟನಪ್ಪ ಬಲ್ಲುದೆ?" ಒಂದು ವಸ್ತು ಪುನ: ತನ್ನ ಸ್ಥಿತಿಗೆ ಬರಲಾರದು ಎನ್ನುವುದಕ್ಕೆ "ಸುಟ್ಟ ಮಡಿಕೆ ಮುನ್ನಿನಂತೆ ಮರಳಿ ಧರೆಯನಪ್ಪ ಬಲ್ಲುದೇ?" ಭಾರವಾದ ವಸ್ತುಗಳು ನೀರಿನಲ್ಲಿ ಮುಳುಗುತ್ತವೆ ಎಂದು ಹೇಳಲು "ಕಲ್ಲು ಹೊತ್ತು ಕಡಲೊಳಗೆ ಮುಳುಗಿದಡೆ ಎಡರಿಂಗೆ ಕಡೆಯುಂಟೆ ಅವ್ವ?" ಯಾವುದು ಹೆಚ್ಚು ಶಕ್ತಿಯುತವಾಗಿದೆ ಎಂದು ತಿಳಿಸುತ್ತದೆ. ಯಾವುದರ ಮುಂದೆ ಯಾವುದರ ನಾಶವಾಗುತ್ತದೆ ಎಂದು ಹೇಳುವಲ್ಲಿ "ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಿರಯ್ಯ" ಎಂಬಲ್ಲಿ ಅಗ್ನಿಯ ಶಕ್ತಿಯ ಮುಂದೆ ಉರುವಲು ಇಂಧನಗಳು ನಾಶ ಎಂದು ತೋರಿಸುತ್ತದೆ. ಗಗನದ ಗುಂಪು ಚಂದ್ರಮ ಬಲದಲ್ಲಿದೆ, ನದಿಯ ಗುಂಪು ತಾವರೆ ಬಲ್ಲದಲ್ಲಿದೆ, ಪುಷ್ಪದ ಪರಿಮಳ ತುಂಬಿ ಬಲ್ಲದಲ್ಲದೆ ಎಂದು ಹೇಳುವಾಗ ನಕ್ಷತ್ರ ಕಾಯಗಳು ನದಿಯ ಏರಿಳಿತ ಹೂವಿನ ಗಂಧ ತಿಳಿಸುತ್ತದೆ. "ಮಾಣಿಕ್ಯದ ಬೆಳಗುಳ್ಳಡೆ ದೀಪದ ಹಂಗೇಕೆ" ಎನ್ನುವಲ್ಲಿ ದೀಪಕ್ಕಿಂತಲು ಪ್ರಕಾಶಮಾನವಾದ ವಜ್ರದ ಬೆಳಕು ಇರುವಾಗ ದೀಪದ ಬೆಳಕಿನ ಅವಶ್ಯಕತೆ ಇಲ್ಲಾ.

ಹಗಲಿರುಳಿನ ಕಲ್ಪನೆಯನ್ನು ಹೀಗೆ ಹೇಳುವರು. "ದೃಷ್ಟವಾದ ರವಿಯ ಬೆಳಗು ಆಕಾಶದ ವಿಸ್ತೀರ್ಣ ವಾಯುವಿನ ಚಲನೆ ತರುಗುಲ್ಮ ಲತಾದಿಗಳಲ್ಲಿ ಪುಷ್ಪಗಳಲ್ಲಿ ಪಡುವಣ ಪೂಜೆ ಹಗಲಿನಲ್ಲಿ ಇರುವುದು. ಅಂದರೆ ಇವುಗಳ ಚಟುವಟಿಕೆ ಬೆಳಗಿನ ಜಾವದಲ್ಲಿ ಹೆಚ್ಚಾಗಿರುತ್ತದೆ. ರಾತ್ರಿಯ ವೇಳೆ ಚಂದ್ರಮನ ಪ್ರಕಾಶ ನಕ್ಷತ್ರಗಳ ಬೆಳಕು ಇರುಳಿನ ಪೂಜೆಗೆ

ಸಲ್ಲುತ್ತದೆ ಎಂದು ಹೇಳುವಲ್ಲಿ ಹಗಲು ರಾತ್ರಿಯ ಕಲ್ಪನೆ ಮೂಡಿಸುತ್ತದೆ. "ನೆಲದ ಮರೆಯ ನಿಧಾನದಂತೆ ತಿಲದ ಮರೆಯ ತೈಲದಂತೆ, ಫಲದ ಮರೆಯ ರುಚಿಯಂತೆ" ಎಂದು ಹೇಳುವಾಗ ಯಾವುದರಲ್ಲಿ ಯಾವ ಸತ್ವವು ಒಳಗೊಂಡಿದೆ ಎಂದು ತಿಳಿಸುತ್ತದೆ. ಮತ್ತೊಂದು "ಪಾತಾಳವಿತ್ತತ್ತ ಪಾಂಗಳತ್ತತ್ತ ದಸದಿಕ್ಕು ತೋರುವ ಶಿವನ ಪರಿಯನ್ನು ಹೇಳುವರು. ಅಕ್ಕನ ಮತ್ತೊಂದು ವಚನದಲ್ಲಿ ತಮ್ಮ ಬಂಧುಗಳು ತನ್ನ ಮದುವೆಗೆ ಹೇಗೆ ಸಿದ್ದತೆ ಮಾಡಿದರು ಎಂದು ಹೀಗೆ ಹೇಳುವರು ಪಚ್ಚೆ, ಕನಕ, ವಜ್ರ, ಹವಳ, ಮುತ್ತು, ಮಾಣಿಕ್ಯದ ಮೇಲ್ ಕಟ್ಟೆಯ ಕಟ್ಟಿದರು ಎಮ್ಮವರು ಎನಗೆ ಮದುವೆಯ ಮಾಡಿದರು.

"ಭಾನುವಿನಂತಿಪ್ಪುದು ಜ್ಞಾನ, ಭಾನು ಕಿರಣದಂತಿಪ್ಪದು ಭಕ್ತಿ, ಭಾನುವನಳಿದು ಕಿರಣಂಗಳಿಲ್ಲ, ಕಿರಣಂಗಳನಳಿದು ಭಾನುವಿಲ್ಲಾ". ಸೂರ್ಯ ಮತ್ತು ಅವನ ಕಿರಣಗಳ ಅವಿನಾಭಾವ ಸಂಬಂಧವನ್ನು ತಿಳಿಸುತ್ತದೆ. ಬೆಂಕಿ ಹೇಗೆ ಉತ್ಪಾದನೆಯಾಗುತ್ತದೆ ಎಂಬ ಕಲ್ಪನೆ ಹೀಗೆ ವ್ಯಕ್ತವಾಗುತ್ತದೆ. "ಮರ ಮರ ಮಂತಿಸಿ ಕಿಚ್ಚು ಹುಟ್ಟಿಸಿ ತರುವಾದಿಗಳ ಸುಡಲಾಯಿತು".

ಹಾಲು ತುಪ್ಪವ ನುಂಗಿ ಬೆರಾಗ ಬಲ್ಲದೆ?

ಸೂರ್ಯ ಕಾಂತವ ಅಗ್ನಿಯನ್ನಾರು ಭೇದಿಸಬಲ್ಲರು.

ಹೀಗೆ ಯಾವದರಲ್ಲಿ ಯಾವ ಸತ್ವ ಅಡಗಿದೆ ಎಂದು ಅದನ್ನು ಭೇದಿಸುವ ಪರಿ ಹೇಗೆ ಎಂದು ಕೇಳುವರು. ವೃಕ್ಷ ಮತ್ತು ಬೀಜ ಬೆಳವಣಿಗೆಯ ಕಲ್ಪನೆ ಹೀಗೆ ನೀಡುವರು. ಬೀಜವಿಲ್ಲದೆ ವೃಕ್ಷ ಬೆಳೆಯುವುದೇ? ಹೂವಿಲ್ಲದೆ ಹಣ್ಣಾಗ ಬಲ್ಲುದೆ? ತೆಂಗಿನ ಮರ ಬಿತ್ತಿದಡೆ ಅಂಬರಕ್ಕೆ ಹೋಯಿತು ಕಾಯಿಲ್ಲದೆ ? ನೀರಿಲ್ಲದೆ ಗಾಳಿಗೆ ಮರ ಮುರಿದಂತೆ ಇಂತಹಾ ಅನೇಕ ಮಾತುಗಳಿಂದ ಅವರಿಗಿದ್ದ ವೈಜ್ಞಾನಿಕಾ ಕಲ್ಪನೆಯನ್ನು ಅವರ ಈ ವಚನದಲ್ಲಿ ಕಾಣಬಹುದು.

ವಚನಗಳು :

"ಲೋಕದ ಚೇಷ್ಟೆಗೆ ರವಿ ಬೀಜ ವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ !
ಎನಗುಳುದೊಂದು ಮನ,
ಆ ಮನ ನಿಮ್ಮಲ್ಲಿ ಬಡವೆರೆದ ಬಳಿಕ
ಎನಗೆ ಭಯವುಂಟು ಚನ್ನಮಲ್ಲಿಕಾರ್ಜುನಯ್ಯ ? ! ೧

ಜಗವ ಬೆಳಗಲು ಸೂರ್ಯೋದಯವಾಗಬೇಕು ಕಿವಿಗಳು ಶಬ್ದಗಳು ಕೇಳಬೇಕಾದರೆ ಮನಸ್ಸೆ ಅದರ ಮೂಲ ಬೀಜ ! ಹೀಗೆ ಇರುವಾಗ ನನ್ನಲ್ಲಿ ಇರುವುದು ಒಂದೇ ಮನಸ್ಸು ಆ ಮನಸ್ಸು ನಿಮ್ಮಲಿದ್ದ ಕಾರಣ ನನಗೆ ಭಯೆಂಬುದೆಲ್ಲಿ ಚನ್ನಮಲ್ಲಿಕಾರ್ಜುನ

"ಕಿಡಿ ಕಿಡಿ ಕೆದರಿದರೆ
ಎನಗೆ ಹಸಿವು, ತೃಷೆ ಅಡಗಿತ್ತೆಂಬೆನು
ಮುಗಿಲು ಹರಿದು ಬಿದ್ದರೆ
ಎನಗೆ ಮಜ್ಜನಕ್ಕೆ ರೆದರೆಂಬೆನು ?
ಗಿರಿಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು !
ಚನ್ನಮಲ್ಲಿಕಾರ್ಜುನಯ್ಯ ಶಿರ ಹರಿದು ಬಿದ್ದರೆ
ಪ್ರಾಣ ನಿಮಗರ್ಪಿತವೆಂಬೆನು. ೨

ಕಿಡಿ ಕಿಡಿ ಕೆದರಿದಾಗ ನನ್ನ ಹಸಿವು ನೀರಡಿಕೆ ಅಡಗಿ ಹೊಯಿತು ಎನ್ನುವೆ ಮುಗಿಲು ಹರಿದು ಅದರಿಂದ ಮಳೆ ಬಿದ್ದಾಗ ನನಗೆ ಮಜ್ಜನವಾಯಿತು ಎನ್ನುವೆ, ಪರ್ವತಗಳು ಮೇಲೆ ಬಿದ್ದರೆ ಎನಗೆ ಪುಷ್ಪಬಿದ್ದಂತೆ ಎನ್ನುವೆ ಚನ್ನಮಲ್ಲಿಕಾರ್ಜುನ, ನನ್ನ ತಲೆ ಕಡಿದು ಬಿದ್ದಡೆ ನನ್ನ ಪ್ರಾಣ ನಿಮ್ಮಲ್ಲಿ ಸೇರಿತು ಎನ್ನುವೆ.

"ವರಚಕ್ರಿ ಬೆಸಗೆಯೊಡೆ ಅಲಗಿನ ಹಂಗೇಕೆ ?
ಪರುಷ ಕೈಯಲುಳೊಡೆ ಸಿರಿಯ ಹಂಗೇಕೆ ?
ಮಾಣಿಕ್ಯದ ಬೆಳಗುಳೊಡೆ ಜ್ಯೋತಿಯ ಹಂಗೇಕೆ ?
ಕಾಮಧೇನು ಕರೆವಡೆ ಕರುವಿನ ಹಂಗೇಕೆ
ಎನ್ನ ದೇವ ಶ್ರೀಶೈಲ ಚನ್ನಮಲ್ಲಿಕಾರ್ಜುನನುಳ್ಳೊಡೆ
ಮರಳಿ ಸಂಸಾರದ ಹಂಗೇಕೆ ?" ೩

---

೧. ಡಾ.ಎಲ್. ಬಸವರಾಜ ಅಕ್ಕನ ವಚನಗಳು ೧೯೯೭ ಪು.ಸಂ: ೫೬
೨. ಡಾ. ಎಂ. ಎಂ. ಕಲಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ ೫೨
೩. ಡಾ.ಎಲ್. ಬಸವರಾಜ ಅಕ್ಕನ ವಚನಗಳು ೧೯೯೭ ಪು.ಸಂ: ೫೨

ಚಕ್ರವರ್ತಿಯು ಚಕ್ರಿಯೊಡನೇ ಸೇರಿದ ಮೇಲೆ ಬೆಳಕಿನ ಹಂಗು ಯಾಕಯ್ಯಾ ? ಪರುಷಮಣಿ ಕೈಯಲ್ಲಿ ಇರಲು ಬೇಡಿದನ್ನ ಕೊಡುವಾಗ ಹಣದ ಶ್ರೀಮಂತಿಕೆಯ ಹಂಗು ಏಕೆ ? ಮಾಣಿಕ್ಯದ ಬೆಳಕು ಇರುವಾಗ ಜ್ಯೋತಿಯ ದೀಪದ ಬೆಳಕಿನ ಹಂಗೇಕೆ ? ಕಾಮಧೇನು ಮನೆಯಲ್ಲಿ ಇರುವಾಗ ಬೇರೆ ಆಕಳ ಹಂಗೇಕೆ ? ಎನ್ನ ದೇವಮಲ್ಲಿಕಾರ್ಜುನನೆ ನನ್ನಲ್ಲಿ ಇರುವಾಗ ಈ ಸಂಸಾರದ ಹಂಗು ನನಗೇಕೆ ? ಎಂದು ಅಕ್ಕ ಪ್ರಶ್ನಿಸುತ್ತಾಳೆ.

"ಹಗಲೆನ್ನೆ, ಇರುಳೆನ್ನೆ !
ಉದಯವೆನ್ನೆ, ಅಸ್ತಮಾನವೆನ್ನೆ ! ಹಿಂದೆನ್ನೆ ಮುಂದೆನ್ನೆ !
ನೀನಲ್ಲದೆ ಪೆರತೊಂದ ಹುದೆನ್ನೆ ಮನ ಘನವಾದುದಿಲ್ಲಯ್ಯ !
ಕತ್ತಲೆಯಲ್ಲಿ ಕನ್ನಡಿಯ ನೋಡಿ ಕಳವಳಗೊಂಡೆನಯ್ಯ !
ನಿಮ್ಮ ಶರಣ ಬಸವಣ್ಣನ ತೇಜದೊಳಗಲ್ಲದೆ
ಆನೆನ್ನ ನೆಂತು ಕಾಂಬೆನು ಹೇಳಾ ಚನ್ನಮಲ್ಲಿಕಾರ್ಜುನ " ೧

ಸದಾ ಕಾಲ ಹಗಲು ರಾತ್ರಿ ಬೆಳಗಾಗುವ ಸಮಯ ಹೊತ್ತು ಮುಳುಗುವ ವೇಳೆ ಹಿಂದೆ ಮುಂದೆ ಯಾವಾಗಲು ನಾನು ನಿಮ್ಮ ಧ್ಯಾನದಲ್ಲಿ ಇರುವ ನಾನು ಬೇರೆನು ಚಿಂತಿಸಲಾರೆ. ನನ್ನ ಮನ ನಿಮ್ಮ ಶ್ರೇಷ್ಠತೆಯ ಬಗ್ಗೆ ಚಿಂತಿಸುತ್ತಿದೆ, ನಾನು ಕತ್ತಲೆಯಲ್ಲಿ ಕನ್ನಡಿಯನ್ನು ನೋಡುತ್ತಿರುವಾಗ ಮನಸ್ಸು ಚಂಚಲಗೊಂಡಿತು, ಆಗ ನಿಮ್ಮ ಶರಣರಾದ ಬಸವಣ್ಣನ ತೇಜದ ಬೆಳಕು ತಿಳಿಯರಲಾರದೆ ನಾನು ಕತ್ತಲೆಯಲ್ಲಿ ಕನ್ನಡಿ ನೋಡಲು ಆಗದು ಹಾಗೆ ನನ್ನ ಬಾಳಿನ ಕನ್ನಡಿಯು ಬೆಳಕು ಶರಣ ಜ್ಞಾನದ ಮಾರ್ಗ ಎಂದು ಹೇಳುವಳು ಅಕ್ಕ.

"ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ
ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯ
ಕಂದ, ನೀನಿತ್ತ ಬಾ ಎಂದು
ನೀವು ನಿಮ್ಮಂದವ ತೋರಯ್ಯ ಚನ್ನಮಲ್ಲಿಕಾರ್ಜುನ. " ೨

ಪ್ರಕೃತಿಯ ಪ್ರತಿಯೊಂದು ಜೀವಿಯು ಸಂಗವನ್ನು ಬಯಸುತ್ತದೆ, ಅದು ತನ್ನ ಸ್ನೇಹದವರನ್ನು ತನ್ನ ಸಂಗವನ್ನು ಬಿಟ್ಟು ಇರಲು ಬಯಸುವುದಿಲ್ಲಾ ತನ್ನವರ ಬಳಿ ಇರಲು ಬಯಸುತ್ತಾರೆ. ತನ್ನ ಗುಂಪಿನಿಂದ ದೂರಾದ ಆನೆಯು ತನ್ನ ಹಿಂಡಿನವರನ್ನು ನೆನೆ ನೆನೆದು ದುಃಖಿಸುವಂತೆ ಒಂದು ಗಿಳಿಯನ್ನು ತಂದು ಪಂಜರದಲ್ಲಿ ಇಟ್ಟಾಗ ಅದು ತನ್ನ ಬಂಧು ಬಳಗವನ್ನು ನೆನೆದು ಅವರ ಹತ್ತಿರ ಹೋಗಲು ಬಯಸಿ ದುಃಖಿಸುವಂತೆ ನನ್ನ ಪರಮ ಬಂಧುವಾದ ಮಲ್ಲಿಕಾರ್ಜುನ ನಿವು ಯಾವಾಗ ನನಗೆ ಸಿಗುವಿರಿ ಈ ಪ್ರಾಣಿಗಳಂತೆ ನಾನು ನಿಮ್ಮ ನೆನಪಿನಲ್ಲಿ ದುಃಖಿಸುತ್ತಿರುವೆ ಎಂದು ಅಕ್ಕ ಈ ವಚನದಲ್ಲಿ ಹೇಳುವಳು.

---

೧. ಡಾ. ಎಂ. ಎಂ. ಕಲಬುರ್ಗಿ–ಶಿವಶರಣೆಯರ ವಚನ ಸಂಪುಟ–೯೯೩ ಪು.ಸಂ ೧೨೩
೨. ಡಾ. ಎಂ. ಎಂ. ಕಲಬುರ್ಗಿ–ಶಿವಶರಣೆಯರ ವಚನ ಸಂಪುಟ–೯೯೩ ಪು.ಸಂ ೧೨೬

ಕಬ್ಬುನ ಉಂಡ ನೀರಿನಂತೆ, ಕಬ್ಬಿಸಿಲುಂಡ ಆರಿಸಿನದಂತೆ
ಉರಿಯೊಳಗಡಗಿದ ಕರ್ಪುರದಂತೆ ಬಯಲಿನಪ್ಪಿದವಾಯಿವಿನಂತೆ

ಇಪ್ಪನಿಲವು ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೆ ?

ಅರಿವಡೆಮತಿಯಿಲ್ಲ ನೆನೆವಡೆ ಮನವಿಲ್ಲ

ಎನ್ನ ಅಜಗಣ್ಣ ತಂದೆಯನೊಳ ಕೊಂಡಿಪ್ಪ ನಿಮ್ಮ

ಮಹಿಮೆಗೆ ನಮೋ ನಮೋ ಎನುತಿರ್ದೆನು ? ೧

ಜ್ಞಾನವೆನ್ನುವುದು ಸಹಜವಾಗಿ ಸಿಗದು ಇದನ್ನು ತಿಳಿದಕೊಳ್ಳುವ ಮನಸ್ಸಿರಬೇಕು ಇದು ನಮ್ಮ ಮುಂದೆ ಇದ್ದರು ನೇರವಾಗಿ ಕಾಣುದು ಇದು ಹೇಗೆ ಆಡಗಿರುತ್ತದೆ ಏಂದರೆ ಕಬ್ಬುನಿರನ್ನುಂಡರು ಸಹ ಸಿಹಿಯಾಗಿರುವಂತೆ ಬಿಸಿನಲ್ಲಿ ಒಣದಿದ ಅರಸಿನದಂತೆ ಇರುಬೇಕು ಹೀಗೆ ಹೇಳಿವೆನೆಂದರೆ ದುಃಖಿಸಿದೆ ಪ್ರಕೃತಿಸದಾ ಜ್ಞಾನದೊರೆಯುತ್ತದೆ ನೇನೆದವರ ಮನದಲ್ಲಿ ಇರುವ ಎನ್ನ ಅಣ್ಣ ಅಜಗಣ್ಣ ತಂದೆ ಎನ್ನವಳು.

ಜಲದ ಚಿತ್ತಾರದ ಕೊರಳಿನಲ್ಲಿ

ದಾರವಿಲ್ಲದ ಮುತ್ತಿನ ಸರವು ನೋಡಾ !

ಚಿತ್ತಾರವಳಿಯದೆ ಮುತ್ತು ಉಳಿಯದೆ

ನಿಂದ ನಿಲುವಿನ ಪರಿನೋಡಾ !

ಗಮನವಿಲ್ಲದ ಗಂಭೀರ ಶಬುದವಿಲ್ಲದ ಸಾರಾಯ

ಸಮತೆಯಾಗಿನಿಂದ ಅಜಗಣ್ಣಂಗೆ ಇನ್ನಾರು ಸರಿ ಎಂಬೆನು ? ೨

ತನ್ನ ಅಣ್ಣ ಅಜಗಣ್ಣ ಲಿಂಗೈಕ್ಯವಾದಾಗ ಮುಕ್ತಾಯಕ್ಕ ಅವನಿರುವ ಪರಿ ಹೀಗೆ ವರ್ಣಿಸುವಳು. ನೀರಿನಲ್ಲಿ ಮೂಡಿ ಬರುವ ಅವನ ಭಾವ ಚಿತ್ರವನ್ನು ನೋಡಿರಿ, ಆ ಚಿತ್ರದ ಕೊಳಿನಲ್ಲಿ ನೀರಿನಗುಳ್ಳೆಗಳ, ಮುತ್ತಿನ ಮೊತಿ ಇದೆ. ಆ ಚಿತ್ರ ಅಚ್ಚಳಿಯದೆ ಹಾಗೆ ಇದೆ ಅದರ ಮುತ್ತುಗಳು ಮಾತ್ರ ಉಳಿಯಲಿಲ್ಲಾ ಆದರು ಅವನ ಚಿತ್ರ ನಿಲ್ಲುವ ರೀತಿ ಗಮನ್ಕೆ ಬಾರದೆ ಗಂಭೀರವಾಗಿ ಶಬ್ದಮಾಡದಂತೆ ಇದೆ.

ಆವ ಬೀಜವು ಬೀಳುವಲ್ಲಿ ಮೊಳೆ ಮುಖ ಹಿಂಚು ಮುಂಚುಂಟೆ ?
ನೀ ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೆ ?
ಮೂಲ ನಷ್ಟವಾದಲ್ಲಿ ಅಂಕುರ ನಿಂದಿತು

ಕೂಟಕ್ಕೆ ಸತಿ ಪತಿ ಎಂಬ ನಾಮವಲ್ಲದೆ
ಅರಿವಿಂತೆ ಬೇರೊಂದೊಡಲುಚಿಟೇ

---

೧) ವಾಣಿಶ್ರೀ ಎಸ್. ಪಾಟೀಲ್ :ಶಿವಶರಣೆಯರ ಸಂಕ್ಷಿಪ್ತ ಜೀವನ ಮತ್ತು ವಚನಗಳು ಪುಸಂ.೨೮
೨) ಡಾ. ಎಂ.ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ.೨೨೦

ಬೇರೊಂದಡೆಇಯಿಡದಿರು, ಮಾರಯ್ಯಾ ಪ್ರಿಯ
ಅಮರೇಶ್ವರ ಲಿಂಗ. ೧

ಯಾವ ಬೀಜವನ್ನು ಬಿತ್ತು ಅದು ಬೆಳೆಯುವಲ್ಲಿ ಹಿಂದು ಮುಂದೆ ಆಗ ಬಹುದು ಹೊರತು ಅವರ ಮೂಲ ಸ್ಥಳ ಒಂದೇ ಭೂಮಿಯಿರುವುದು. ನನಗೆ ತಿಳಿದ ಹಾಗೆ ಸತಿ ಪತಿ ಸೇರುವ ಲಿಂಗದಲ್ಲಿ ಭೇದವುಂಟು ಆದರೆ ಜ್ಞಾನ ಅಂಕುರಿಸುವ ತಲೆಯಲ್ಲಿ ಭೇದವಿಲ್ಲಾ ಹೀಗಿರುವಾಗ ಜ್ಞಾನ ಪಡೆಯುವಲ್ಲಿ ಸ್ತ್ರೀ ಪುರುಷ ಎಂಬ ಭೇದ ನಮ್ಮ ಅಮರೇಶ್ವರ ಲಿಂಗಕ್ಕೆ ಸಲ್ಲಿದು.

ಅನ್ನವ ನೀಡುವವರಿಗೆ ಧಾನ್ಯವೇಲೋಕ
ಅರ್ಥವ ಕೊಡುವವರಿಂಗೆ ಪಾಷಾಣವೇ ಲೋಕ
ಹೆಣ್ಣು-ಹೊನ್ನು ಮಣ್ಣು ಮೂರನೂ
ಕಣ್ಣಿನಲ್ಲಿ ನೋಡಿ, ಕವಿಯಲ್ಲಿ ಕೇಳಿ.
ಕೈಯಲ್ಲಿ ಮುಟ್ಟಿ ಮಾಡುವ ಭಕ್ತಿ
ಸಣ್ಣವರ ಸಮಾರಾಧನೆಯಾಯಿತು
ತನ್ನ ನಿತ್ತು ತುಷ್ಟಿವಡೆವರನೆನಗೆ ತೋರಾ
ಶ್ರೀ ಗಿರಿ ಚೆನ್ನಮಲ್ಲಿಕಾರ್ಜುನ. ೨

ಲೋಕದಲ್ಲಿ ಬರಿ ತೋರಿಕೆಗಾಗಿ ಕಾರ್ಯ ಮಾಡುವವರನ್ನು ಕುರಿತು ಹೀಗೆ ಹೇಳುವಳು. ಕೇಲವರು ಅನ್ನ ದಾನ ಮಾಡುತ್ತೇವೆ. ಜ್ಞಾನ ದಾನ ಮಾಡುತ್ತೇವೆ ಎಂದು ಹೊನ್ನು , ಹೆಣ್ಣು, ಮಣ್ಣಿನ ಆಸೆಯಿಂದ ಮಾಡುವ ಕೆಲಸ ಕೇವಲ ಡಾಂಬಿಕವಾದ್ದು. ಅವರಲ್ಲಿಯಾವುದೇ ಬೆಲೆಬಾಳುವ ಗುಣಗಳು ಇದ್ದರೆ ನನಗೆ ತೋರಿಸಯ್ಯಾ ಮಲ್ಲಿಕಾರ್ಜುನ.

ಅಲರೊಳಡಗಿದ ಪರಿಮಳದಂತೆ,
ಪತಂಗದೊಳಡಗಿದ ಅನಲನಂತೆ,
ಶಶಿಯೊಳಡಗಿದ ಷೋಡಶಕಳೆಯಂತೆ
ಉಲುಹಡಗಿದ ವಾಯುವಿನಂತೆ
ಸಿಡಿಲೊಡಗಿದ ಗಾತ್ರದ ತೇಜದಂತೆ.
ಇರಬೇಕಯ್ಯಾ ಯೋಗ,
ಎನ್ನ ಅಜಗಣ್ಣ ತಂದೆಯಂತೆ ೨

---

೧. ವಾಣಿಶ್ರೀ ಎಸ್. ಪಾಟೀಲ್ :ಶಿವಶರಣೆಯರ ಸಂಕ್ಷಿಪ್ತ ಜೀವನ ಮತ್ತು ವಚನಗಳು ಪುಸಂ.೨೫
೨. ಡಾ.ಎಲ್. ಬಸವರಾಜ ಅಕ್ಕನವಚನಗಳು ೧೯೬೬ ಪು.ಸಂ.೪೩

ಹೂವಿನಲ್ಲಿ ಅಡಗಿರುವ ಪರಿಮಳದಂತೆ. ಪತಂಗದಲ್ಲಿ ಅಡಗಿರುವ ಬೆಳಕಿನಂತೆ, ಚಂದ್ರನಲ್ಲಿ ಮರೆಯಾದ ಮೊಡದಂತೆ, ಸಿಡಿಲಿನಲ್ಲಿ ಅಡಗಿರುವ ಬೆಂಕಿಯಂತೆ, ಗಾಳಿಯಲ್ಲಿ ಅಡಗಿರುವ ಧ್ವನಿಯಂತೆ, ಎಂಬುದರಲ್ಲಿ ಶರಣೆಯರು ಬರಿ ಪ್ರಕೃತಿಯ ವಸ್ತುವನ್ನು ನೊಡದೆ ಅದರ ಶಕ್ತಿಯ ಬಗ್ಗೆ ಅಪರ ವಿಶೇಷತೆಯ ಬಗ್ಗೆ ವೈಜ್ಞಾನಿಕ ಪ್ರಜ್ಞೆ ಇತ್ತು ಎಂದು ತಿಳಿಯುತ್ತದೆ ಯಾವುದರಲ್ಲಿ ಎಂತಹ ಚೇತನ ವಿದೆ ಎಂದು ಅವರು ಅರಿತಿದ್ದರು ಆ ಚೇತನದ ಮಹಿಮೆ ಗೊತಿತ್ತು ಎಂದು ತೊರುತ್ತದೆ.

ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಮರದ ಮರೆಯ ತೇಜದಂತೆ
ಭಾವದ ಮರೆಯ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನ ! ನಿಲವನಾರು ಬಲ್ಲರು ೧

ಪ್ರಕೃತಿಯ ಒಂದೊಂದು ವಸ್ತುಸಹ ಒಂದೊಂದು ರೀತಿಯ ಸತ್ವವನ್ನು ಒಳಗೊಂಡಿದೆ ಅದನು ಹುಡುಕಿ ತೆಗೆಯುವ ಗುಣಬೇಕು. ಭೂಮಿಯಲ್ಲಿ ಉದುಗಿವದ್ರವ್ಯ ಕಣ್ಣಿಗೆ ಕಾಣದು, ಫಲದಲ್ಲಿ ಅಡಗಿದ ರುಚಿ ತಿನ್ನುವವರೆಗೆ ತಿಳಿಯದು, ಕಲ್ಲಿನಲ್ಲಿ ಅಡಗಿರುವ ಕೊತ ಬಂಗಾರದಂತೆ ಎಳ್ಳಿನ ಒಳಗಿರುವ ಎಣ್ಣೆಯಂತೆ, ಮರದ ಹಿಂದೆ ಅಡಗಿದ ಬೇಳಕಿನಂತೆ ಎಂಬಲ್ಲಿ ಅವರು ತಿಳಿದಿರುವ ಪರಿಸರದ ಪ್ರತಿ ವಸ್ತುವಿನ ಅಪಾರ ಜ್ಞಾನ ಕಾಣುತ್ತೇವೆ.

ಗಟ್ಟಿತುಪ್ಪಕ್ಕೆ ತಿಳಿದುಪ್ಪಕ್ಕೆ ಹಂಗುಂಟೇ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದವುಂಟೇ ಅಯ್ಯಾ?
ಅಂಗಕ್ಕೆ ಆತ್ಮಗೆ ಭಿನ್ನವುಂಟೇ ಅಯ್ಯಾ?
ಎನ್ನಂಗವನು ಶ್ರೀಗುರು ಮಂತ್ರವಮಾಡಿ ತೋರಿದತಾಗಿ
ಸಾವಯವಕ್ಕೂ ನಿರವಯವಕ್ಕೂ ಭಿನ್ನವಿಲ್ಲವಯ್ಯ
ಚೆನ್ನಮಲ್ಲಿಕಾರ್ಜುನ ದೇವರ ಬೆರಸಿ
ಮತಿಗೆಟ್ಟವಳ ನೇತಕ್ಕೆ ನುಡಿಸುವಿರಯ್ಯ. ೨

---

೧) ಡಾ. ಎಂ. ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ. ೫೭

2) ಡಾ. ಎಂ. ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ. ೮೬

ಈ ವಚನದಲ್ಲಿ ವಸ್ತುವಿನ ಭೇದ ಹೇಳುವಲ್ಲಿ ಅವರ ಪರಿಸರ ಪ್ರಜ್ಞೆಯ ಜೊತೆಗೆ ವೈಜ್ಞಾನಿಕ ಪ್ರಜ್ಞೆಯ ಕಾಣುತ್ತದೆ. ಮೂಲ ಗುಣ ಒಂದೇ ಇರುವ ತುಪ್ಪವು ಘನರೂಪದಲ್ಲಿ ಇದ್ದರು, ದ್ರವರೂಪದಲ್ಲಿ ಇದ್ದರು ಒಂದೇ ಯಾವ ರೀತಿ ಒಂದು ಸಣ್ಣ ದೀಪಕ್ಕೂ, ದೀವಿಗೆಯು ಬೆಳಕು ನೀಡುವ ಒಂದೇ ಗುಣವಿರುತ್ತದೆ ಹಾಗೆ ಅದೇ ರೀತಿ ಇಲ್ಲಿ ಇನ್ನೊಂದು ಉತ್ತಮ ನಿದೇರ್ಶನಕೊಡತ್ತಾರೆ. ಸಾವಯುವಬೇಸಾಯ ಪದ್ಧತಿ ಬೆಸಾಯಿ ಪದ್ಧತಿಯಿಂದ ಬೇಸಾಯ ಮಾಡಿದರು. ಮೂಲ ಉದ್ದೇಶ ಬೆಳೆ ಬೆಳಯುವುದೇ ಎಂಬ ಮಾತಿನಲ್ಲಿ ಅವರ ವೈಜ್ಞಾನಿಕ ಕಲ್ಪನೆ ವ್ಯಕ್ತವಾಗುತ್ತದೆ.

ಫಲ ಒಳಗೆ ಪಕ್ವವಾಗಿರುಯಲ್ಲದೆ,
ಹೊರಗಳ ಸಿಪ್ಪೆ ಒಪ್ಪಗೆಡದು,
ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿಹಿತೆಂದು
ಆ ಭಾವದಿಂದ ಮುಚ್ಚಿದೆ
ಇದಕ್ಕೆ ನೋವೇಕೆ ? ಕಾಡದಿರಣ
ಚೆನ್ನಮಲ್ಲಿಕಾರ್ಜುನ ಜೀವನ ಒಳಗಾದವಳ. ೧

ಒಂದು ಹಣ್ಣು ಪಕ್ವಗೊಂಡಿದೆ ಎಂದು ಅದನ್ನು ಬಿಚಿನೋಡುವ ಅಶ್ಯಕತೆ ಇಲ್ಲ ಅದರ ಸಿಪ್ಪಿಯ ಬಣ್ಣ ನಾವು ಗುರುತಿಸಬಹುದು ಹಣ್ಣು. ಪಕ್ವಗೊಂಡಿದೆ ಅಥವಾ ಇಲ್ಲಾ ಎಂದು ಯಾವ ರೀತಿ ಬಳಿಯ ಬಣ್ಣದಲ್ಲೆ ಏಳು ಬಣ್ಣಗಳು ಒಳಗೊಂಡಿರುವ ಕಾಮನಬಿಲ್ಲಿನಂತೆ ಓೀಗೆ ಆಕಾಶದಲ್ಲಿ ಮೂಡುವ ಕಾಮನ ಬಿಲ್ಲಿನ ಕಲ್ಪನೆಯನ್ನು ಹೊಂದಿದ ನಮ್ಮ ಶರಣೆಯರು ಬರಿ ಸಮಾಜಿಕ ಪ್ರಜ್ಞನೆ ಹೊಂದಿರದ ಸೃಷ್ಟಿಯ ಪ್ರತಿಯೊಂದು ಆಗು ಹೊಗುಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸಿ ಅದರ ಬದಲಾವಣೆಗೆ ಕಾರಣ ತಿಳಿದು ಅದನ್ನು ತಮ್ಮ ವಚನಗಳಲ್ಲಿ ನಿರ್ದೇಶನದ ಮೂಲಕ ತಿಳಿಸಿದ್ದಾರೆ.

ಕಲ್ಲ ಬಿತ್ತಿ ನೀರನೆರೆದಲ್ಲಿ
ಪಲ್ಲವಿಸುವುದೇ ದಿಟದ ಬೀಜದ ವೃಕ್ಷದಂತೆ
ಶ್ರದ್ಧೆ ಸನ್ಮಾರ್ಗ ಭಕ್ತಿ ಇಲ್ಲದಲ್ಲಿ
ಗುರುಭಕ್ತಿ, ಶಿವಲಿಂಗ ಪೂಜೆ, ಚರಸೇವೆ
ತ್ರಿವಿನ ಇತ್ತವೆ ಉಳಿಯಿತು
ಮತ್ತೆ ನಿಜವಸ್ತುವಿನ ಸುದ್ದಿ ನಿಮಗೆತ್ತಣದೊ ?
ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ವಿಶ್ವಾಸಬೇಕು. ೨

---

೧) ಡಾ. ಎಂ. ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ. ೩೦೨
೨) ಡಾ. ಎಂ. ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ. ೩೧೦

ಇಲ್ಲಿ ಬಿಜ ಮೊಳಕೆ ಒಡೆಯಲು ಮೃದುವಾದ ಭೂಮಿ ಬೇಕೆಂಬ ಕಲ್ಪನೆ ತೋರುತ್ತದೆ ರೀತಿ ಭೂಮಿ ಇಲ್ಲದ ಕಲ್ಲಿನ ಮೇಲೆ ಬೀಜ ಬಿತ್ತಿ ನೀರು ಸುರಿಸಿದರೆ ಫಲಬರಲಾರದೊ ಆದು ಫಲಬರಬೇಕಾದರೆ ಭೂಮಿಯ ಬೇಕು. ಶ್ರದ್ಧೆ , ಸನ್ಮಾರ್ಗ, ಭಕ್ತಿ ಇದ್ದಾಗ ಮಾತ್ರ ಶಿವನೋಲಿಯವನು ಎಂದು ಮೊಳಿಗಯ ಮಹಾದೇವಿ ಹೇಳುವಲ್ಲಿ ಸಸ್ಯಯ ಬೆಳವಣಿಗೆಯು ಪರಿಕಲ್ಪನೆಯೊಂದಿಗೆ ದೇವರ ಭಕ್ತಿಗೆ ಒಳ್ಳೆಯ ಮನಸ್ಸು ಬೇಕು. ಎಂದು ಸಾದರ ಪಡಿಸುವಳ ಎಲ್ಲದಕ್ಕೂ ವಿಶ್ವಾಸವೇ ಮುಖ್ಯವಲ್ಲ ಎಲ್ಲಿ ಯಾವಗುಣ ವಿದೆ ಎಂಬ ವೈಜ್ಞಾನಿಕ ಕಲ್ಪನೆ ಕಾಣುತ್ತವೆ.

ಬಯಲು ಹೊಲವಿನಲ್ಲಿ ಹುಟ್ಟದಬೆಳಗು
ಶಿಲೆ ಲೋಹ ಕಂಚುಗಳಲ್ಲಿ ಬೆಳಗಿನ ಕಳೆತೋರುವಂತೆ
ಎನ್ನ ಕರತಗಳದಲ್ಲಿ ಸವಯುಭುವಪ್ಪ ಲಿಂಗವೆ
ನಿನ್ನ ಕಳೆ ಎನ್ನ ಕಂಗಳಿಗೆ ಹೊಲಬಾಗಿ ಏಕೆ ತೋರದು ?
ಅದು ಎನ್ನದು ಉಡವೊ ನಿನ್ನಯ ಪ್ರಕೃತಿಯೋ ?
ಅದು ನಿನ್ನ ಬಿನ್ನಾಣದ ಗನ್ನದ ಭೇದವೊ ?
ಎನ್ನಲ್ಲ ನೀ ನಿಲ್ಲದ ಕಾರಣವೊ ?
ನಾ ನಿನ್ನಲ್ಲಿ ಸುಗುಣವಿಲ್ಲದ ಕಾರಣವೊ
ಎನಗೆ ಭೀನ್ನನಾದೆ ಎನ್ನಯ್ಯಾ ಪ್ರಿಯ ಇಮ್ಮ ನಿಃಕಳಂಕ
ಮಲ್ಲಿಕಾರ್ಜುನ ಎನ್ನಲ್ಲಿ ನೀ ಸನ್ನದ್ಧನಾಗಿರು. ೧

ವಿಶಾಲವಾಥ ಪ್ರದೇಶವಲ್ಲಿ ಹುಟ್ಟಿದ ಬೆಳಕು ಬಯಲ ಪ್ರವೇಶಕ್ಕೆ ಮಾಥ್ರ ಹರಡುತ್ತಾ ಭೂಮಿಯ ಮೇಲೆ ಇರುವ ಅನೇಕ ಲೋಹಗಳಲ್ಲಿ ಸಹ ಬೆಳಕಿನ ಶಕ್ತಿ ತುಂಬುತ್ತದೆ ಯಾವ ರೀತಿ ಕಂಚು, ಓತ್ತಾಳೆಗಳು, ಶಿಲೆಗಳು ಬೆಳಕಿನಿಂದ ಹೊಳೆಯುತ್ತೇವೆ. ಹಾಗೆ ನಿನ್ನ ಶಕ್ತಿಯಿಂದ ನನ್ನ ಕಂಗಳು ಏಕೆ ಹೊಳೆಯಲಾರವು ನಾನು ಅಷ್ಟು ಜಡವಾಗಿ ಇದ್ದೇನೆ ಅಥವಾ ಇದು ನಿನ್ನಮಾಯೇ ಫಲವೂ ! ನನ್ನಲ್ಲಿ ನೀನು ಇಲ್ಲದ ಕಾರಣ ನಾನು ಭಿನ್ನವಾಗಿರುತಯೋ ?

ಸಂಗದಿಂದಲ್ಲದೆ ಅಗ್ನಿಯಚ್ಚದು
ಸಂಗದಿಂದಲ್ಲದೆ ಬೀಜ ಮೊಳೆದೋರದು !
ಸಂಗಾವಿಂದಲ್ಲದೆ ದೇಹವಾಗದು !
ಸಂಗದಿಂದಲ್ಲದೆ ಸರ್ವಸುಖದೋರದು
ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಶರಣರ ಅನುಭವಸುಖದಿಂದಾನು
ಪರಮ ಸುಖಿಯಯ್ಯ ! ೨

೧) ಡಾ. ಎಂ. ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ. ೨೧೧
2) ಡಾ. ಎಂ. ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ ೧೯೯೩ ಪು.ಸಂ. ೩೧೫

ಸಂಗದಿಂದಲೆ ಅಗ್ನಿ ಹುಟ್ಟಿತು ಸಂಗಾದಿಂದ ಬೀಜ ಮೊಳೆದೂರಿತು ಪರಸ್ಪರ ಸಂಗದಿಂದಲೆ ದೇಹವಾಯಿತು ಸಂಗದಿಂದಲ್ಲದೆ ಜೀವನದ ಸರ್ವೋತ್ತಮ ಸುಖ ಸಿಗಬಾರದು ಚೆನ್ನಮಲ್ಲಿಕಾರ್ಜುನ ನಿಮ್ಮ ಶರಣರ ಅನುಭವದ ಸಂಗದಿಂದಲೆ ನನಗೆ ಪರಮ ಸುವಿದೆ ಎಂದು ಹೇಳುವಲ್ಲಿ ಪ್ರತಿಯೊಂದು ವಸ್ತುವಿನ ಬೆಳವಣಿಗೆಗೆ ಮತ್ತು ಏಳಿಗೆಗೆ ಸಂಗಬೇಕೇ ಬೇಕು.

ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ,
ವಾಯುವಿನ ಚಲನೆ, ತರುಗುಲ್ಮ ಲತಾದಿಗಳಲ್ಲಯ ತಳಿರು ಪುಷ್ಪ
ಷಡು ವರ್ಣಂಗಳೆಲ್ಲ ಹಗಲಿನ ಪೂಜೆ
ಚಂದ್ರ ಪ್ರಕಾಶ, ನಕ್ಷೇತ್ರ, ಅಗ್ನಿ, ವಿದ್ಯುತ್ ಆದಿಗಳು
ದೀಪ್ತಿಯ ವೆನಿಸಿಪ್ಪವುಗಳೆಲ್ಲಿ
ಇರುಳಿನ ಪೂಜೆ !
ಹಗಲಿರುಳು ನಿನ್ನ ಪೂಜೆಯಲ್ಲಿ ಎನ್ನ ಮರೆದಿಪ್ಪನೆಯ್ಯ
ಚೆನ್ನಮಲ್ಲಿಕಾರ್ಜುನ ! 1

ಕೆಲವು ಹಗಲಿನಲ್ಲಿ ಪೂಜಿಲಸ್ಪಡುತ್ತವೆ, ಕೆಲವು ಇರುಳುನಲ್ಲಿ ಪೂಜಿಲಸ್ಪಡುತ್ತವೆ. ಹಗಲಿನಲ್ಲಿ ರವಿ, ಬೆಳಕು, ಆಕಾಶದ ವಿಸ್ತೀರ್ಣ, ವಾಯುವಿನ ಚಲನೆ, ತರುಗಳ ಪೂದೆಗಳ ಹೂವು, ಹಣ್ಣು, ಕಾಯಿ, ಪುಷ್ಪಗಳು ಆರುವಣಾರ್ಗಗಳು ಹಗಲಿನಲ್ಲಿ ಪೂಜಿಸಲ್ಪಟರೆ ರಾತ್ರಿಯಲ್ಲಿ ಚಂದ್ರ, ಬೆಳಗಿಂಗಳು, ನಕ್ಷತ್ರ, ಅಗ್ನಿ, ವಿದ್ಯುತ್ ದೀಪ್ತಿ ಮತ್ತು ಬೆಳಗಿನ ಲಕ್ಷಣ ಹೊಂದಿದವೆಲ್ಲ ರಾತ್ರಿಯಲ್ಲಿ ಪೂಜಿಸಲ್ಪಡುವವು ಹೀಗೆ ಕೇಲವು ಪೂಜೆ ಹಗಲಿರುಳು ಮಾಡುವ ನನಗೆ ಮರೆಯಬೇಡಿ ದೇವ ಎಂದು ಬೇಡಿಕೊಂಡಳು.

ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಬ
ಪವಳದ ಚಪ್ಪರವಿಕ್ಕಿ ಮಾಣಿಕದ ಮೇಲುಕಟ್ಟು ಕಟ್ಟಿ,
ಮದುವೆಯ ಮಾಡಿದರು ನಮ್ಮವರೆನ್ನ ಮದುವೆಯ ಮಾಡಿದರು,
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನವುದುವೆಯ
ಮಾಡಿದರು. 2

1) ಡಾ. ಎಂ. ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ 1993 ಪು.ಸಂ. 72
3) ಡಾ. ಎಂ. ಎಂ. ಕಲ್ಬುರ್ಗಿ ಶಿವಶರಣೆಯರ ವಚನ ಸಂಪುಟ 1993 ಪು.ಸಂ. 82

ಅಧ್ಯಾಯ – ೪

ವೈಚಾರಿಕತೆ ಹಾಗೂ ವಚನ ಸಾಹಿತ್ಯಸ

ಅಧ್ಯಾಯ-೪
ವೈಚಾರಿಕತೆ ಹಾಗೂ ವಚನ ಸಾಹಿತ್ಯ

ಕರ್ನಾಟಕದ ಇತಿಹಾಸದಲ್ಲಿ ವಚನಕಾರರ ಕಾಲ ಅಮೂಲ್ಯಾಗ್ರವಾಗಿ ಸಾಮಾಜಿಕ ಬದಲಾವಣೆಯನ್ನು ತರಲು ಪ್ರಯತ್ನಿಸಿದ ಯುಗ. ಪಂಡಿತರ ಕೈಯಲ್ಲಿ ಉಸಿರುಗಟ್ಟಿ ತೊಳಲಾಡುತ್ತಿದ್ದ ಸಾಹಿತ್ಯ ಈ ಕಾಲದಲ್ಲಿ ಸ್ವಚ್ಛಂದವಾಗಿ ಉಸಿರಾಡುವಂತಾಯಿತು. ಸಿಂಹಾಸನದ ಮಧ್ಯದಿಂದ ನುಸುಳಿ ಬಂದು ಬಯಲು ಗಾಳಿಯಲ್ಲಿ ಉಯ್ಯಾಲೆಯಾಡಿತು. ಹೆಚ್ಚು ಜೀವಂತಿಕೆ ಪಡೆಯಿತು. ಸತ್ವಪೂರ್ಣವಾಯಿತು. ಸ್ವತಂತ್ರ ವಿಚಾರ ಬೆಳೆಸಿಕೊಂಡಿತು.

ವೈಚಾರಿಕತೆಗೆ ನಾಂದಿಯಾಯಿತು ಎಂದಾಗ ವೈಚಾರಿಕತೆ ಎಂದರೇನು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ವೈಚಾರಿಕತೆ ಎಂದರೆ ಯಾವುದೇ ಒಂದು ವಿಷಯವನ್ನು ವಿಮರ್ಶೆಯ ಒರೆಗಲ್ಲಿಗೆ ಉಜ್ಜಿ ಅದರ ಒಳಿತು ಕೆಡುಕುಗಳನ್ನು ಗುರುತಿಸಿ ಒಳಿತನ್ನು ಸ್ವೀಕರಿಸುವ, ಕೆಡಕನ್ನು ಬಿಟ್ಟು ಬಿಡುವ ಚಿಂತನಾ ಕ್ರಮ. ಯಾವುದು ಓದುಗನಲ್ಲಿ ಪ್ರತಿಕ್ರಿಯೆಯನ್ನು ಉಂಟು ಮಾಡುವುದೋ, ಚಿಂತನ ಮಂತನಗಳಿಗೆ ಪ್ರೇರಣೆ ನೀಡುವುದೋ, ಚರ್ಚೆಗೆ ವಸ್ತುವಾಗುವುದೋ, ಯಾವುದು ನಮ್ಮ ತಿಳುವಳಿಕೆಗೆ ಹೊಸದೊಂದು ಆಯಾಮ ನೀಡಿ ಹೊಸ ಹೊಸ ಕ್ಷಿತಿಜಗಳನ್ನು ತೆರೆದು ತೋರಿಸುವುದೋ ಅದೇ ವೈಚಾರಿಕತೆ. ಈ ವೈಚಾರಿಕತೆ ಇರುವುದರಿಂದಲೇ ಮಾನವ ಉಳಿದ ಪ್ರಾಣಿಗಳಿಂದ ಭಿನ್ನವೆನಿಸಿಕೊಳ್ಳುತ್ತಾನೆ.

ವೈಚಾರಿಕ ಪ್ರಜ್ಞೆ ಮೂಡಿಸಿಕೊಂಡ ವ್ಯಕ್ತಿ ಯಾವುದೇ ಸಂಗತಿ, ವಿಷಯವನ್ನು ಒಂದೇ ಬಾರಿಗೆ ಒಪ್ಪಲಾರ. ನಿಜಾಂಶಕ್ಕಾಗಿ ಅವನ ವಿಚಾರ ಶಕ್ತಿ ಶ್ರಮಿಸುತ್ತಿರುತ್ತದೆ. ಯಾವುದೇ ವಿಷಯದಲ್ಲಿ ಪ್ರಪಂಚದಲ್ಲಿ ಅಹುದೆಂದು ಒಂದು ಕಡೆಯಿಂದ ಹೇಳಲಿ, ವೈಚಾರಿಕನು ಅದನ್ನು ಒಪ್ಪಲಾರ. ಅವನ ಪ್ರಜ್ಞೆಗೆ ಒಪ್ಪಿತವಾದ ವಿಷಯವನ್ನು ಲೋಕ ಅಲ್ಲಗಳೆದರೂ ಅವನು ತನ್ನ ಅಭಿಪ್ರಾಯ ಬದಲಿಸಲಾರ. ಇದು ವೈಚಾರಿಕನ ಸ್ವಭಾವ. ವೇದ, ಆಗಮ, ಉಪನಿಷತ್ತುಗಳು ಇಲ್ಲಿಯವರೆಗೆ ವೈಚಾರಿಕತೆ ಸಾರುತ್ತಾ ಬಂದಿದೆ. ಸಾಮಾಜಿಕ ಬೆಳವಣಿಗೆಗೆ ವೈಚಾರಿಕತೆಯೇ ಮುಖ್ಯ ಕಾರಣ. ವೈಚಾರಿಕತೆ ಬೆಳೆದಂತೆ ಪ್ರಜ್ಞಾವಂತ ಸಮಾಜ ನಿರ್ಮಾಣವಾಗುತ್ತದೆ. ಇದು ಸಮಾಜವನ್ನು ತಿದ್ದುವ ಬಹುಮುಖ್ಯ ಅಸ್ತ್ರ. ವಿಚಾರ ಸಾಹಿತ್ಯದ ಗುರಿ ಮಾನಸಿಕ ಮಾರ್ಪಾಡು. ಸಂಶಯಕ್ಕೆ ಎಡೆ ಮಾಡಿಕೊಡುವ, ಅಪನಂಬಿಕೆ ಮೂಡಿಸುವ ವಿಷಯಗಳನ್ನು ಕುರಿತು ವಿಶ್ಲೇಷಣೆ ಮಾಡಿ, ಅವುಗಳಿಂದಾಗಿ ಮಾನವ ಪ್ರಗತಿಗೆ ಆಗಿರುವ ತೊಡಕುಗಳನ್ನು ವಿಶದೀಕರಿಸಿ ಅವುಗಳ ಜಾಲದಿಂದ ಪುಟಿದೆದ್ದು ಹೊರಬರಲು ಪ್ರಚೋದನೆ

ನೀಡುವ ಸಾಹಿತ್ಯವೇ ವೈಚಾರಿಕ ಸಾಹಿತ್ಯ. ಸಾಹಿತ್ಯದಲ್ಲಿ ಜ್ಞಾನ–ಲಲಿತ ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಜ್ಞಾನ ಸಾಹಿತ್ಯದ ಒಂದು ಅಂಗವೇ ವಿಚಾರ ಸಾಹಿತ್ಯ. ಪ್ರಾಣಿ ಪಶುವಿನಂತಿದ್ದ ಮಾನವ ಕ್ರಮೇಣ ಬುದ್ಧಿಶಕ್ತಿ, ವಿಚಾರಶಕ್ತಿ, ಬೆಳೆಸಿಕೊಂಡು ಕನೆಯಂತೆ, ಕಾಳಿನ ತೆನೆಯಂತೆ "ವಿಕಾಸ ಕ್ರಮದಲ್ಲಿ ನವಿರಾಗಿ ನಿಧಾನವಾಗಿ ವಿಕಾಸಗೊಂಡು ಅವನಲ್ಲಿ ವಿಚಾರಶಕ್ತಿ ಬೆಳೆಯಿತು. ವೈಚಾರಿಕತೆ ದೀವಿಗೆಯಿದ್ದಂತೆ. ತನ್ಮಯನಾದ ಶ್ರೋತೃವಿನಲ್ಲಿ ಸ್ವತಂತ್ರ ವಿಚಾರವಂತನು ತನ್ನಂತಹ ಜ್ಯೋತಿಯನ್ನೇ ಪ್ರಕಟಿಸುವನು. ವಿಚಾರವಂತನು ಬುದ್ಧಿಗೆ ಮುಸುಕಿದ ಅಮವಾಸೆಯನ್ನು ತನ್ನ ಬುದ್ಧಿಮಂತ್ರದಿಂದ ಹುಣ್ಣಿಮೆಯಾಗಿ ಮಾಡುವನು. ಇದರ ವ್ಯಾಪ್ತಿ ಇಂತಿಷ್ಟೇ ಎಂದು ಗೆರೆ ಎಳೆದು ಹೇಳುವಂತಿಲ್ಲ. ಒಂದು ವಿಷಯ ಚರ್ಚೆಗೆ ತೆಗೆದುಕೊಂಡಾಗ ಸಂಶಯ, ಪ್ರಮೇಯ, ಸಮಸ್ಯೆ, ಪ್ರಶ್ನೆ, ಉಪಪ್ರಶ್ನೆ, ಹೊಸತರ್ಕ, ಸರಣಿ ಹೀಗೆ ಬೆಳೆಯುತ್ತಲೇ ಹೋಗುತ್ತದೆ. ಹೀಗಾಗಿ ವಿಚಾರ ಸಾಹಿತ್ಯಕ್ಕೆ ಗಡಿ ರೇಖೆಗಳಿಲ್ಲ.

ವೈಚಾರಿಕನ ಮುಖ್ಯ ಲಕ್ಷಣವೆಂದರೆ ಅವನು ಮುಕ್ತ ಮತ್ತು ಸ್ವಚ್ಛಂದವಾಗಿ ಬರೆಯುತ್ತಾನೆ. ಯಾವುದೇ ಮುಲಾಜಿಗೆ ಒಳಗಾಗದೆ, ಓಲೈಸದೆ ತನಗನಿಸಿದ್ದನ್ನು ನಿಷ್ಠುರವಾಗಿ ಹೇಳುತ್ತಾನೆ. ಈ ಬುದ್ಧಿಜೀವಿ ಒಂದು ವ್ಯವಸ್ಥೆಯಲ್ಲಿಯೇ ಹುಟ್ಟಿರುತ್ತಾನೆ. ಆದರೆ ಆ ವ್ಯವಸ್ಥೆಯಿಂದ ಬದಲಾಗಿ ಬೆಳೆದು ಭಿನ್ನ ವಿಚಾರವಂತನಾಗಿ ವೈಚಾರಿಕನೆನಿಸಿಕೊಳ್ಳುತ್ತಾನೆ. ಈ ವ್ಯವಸ್ಥೆಯನ್ನೇ ಕುರಿತು ಅವನು ಪ್ರಶ್ನಿಸುತ್ತಾನೆ. ಆಧುನಿಕ ವೈಚಾರಿಕನು ವ್ಯಾಸಂಗ ಮತ್ತು ಪತ್ರಿಕೋದ್ಯಮದಿಂದ ಹುಟ್ಟಿದನೆಂದು ಹೇಳುತ್ತಾರೆ. ಅವನು ಹಳೆಯ ವ್ಯವಸ್ಥೆ ಸಂಪ್ರದಾಯ ಮೌಲ್ಯಗಳನ್ನು ತನ್ನ ಒರೆಗಲ್ಲಿಗೆ ಹಚ್ಚಿ ನೋಡುವ ಚಿನಿವಾರನಾಗಿ ಕಾಣಿಸಿಕೊಳ್ಳುತ್ತಾನೆ. ಸಾಮಾಜಿಕ ಜೀವನದಲ್ಲಿ ಹಳೆಯ ಮೌಲ್ಯಗಳೆಲ್ಲ ನಿಂತ ನೀರಾಗಿ ಕೊಳೆತು ನಾರುತ್ತಿರುವಾಗ ಹೊಸ ವ್ಯವಸ್ಥೆಯ ರೂಬುಗಳ ಮೂಲಕ ಹರಿಯಬಿಟ್ಟು ಹೊಸತನ್ನು ಸೇರಿಸಲು ಪ್ರಯತ್ನಿಸುತ್ತಾನೆ. ಗೌರೀಶ ಕಾಯ್ಕಿಣಿಯವರು ಹೇಳುವಂತೆ ಪ್ರಾಧ್ಯಾಪಕ, ಪತ್ರಿಕೋದ್ಯಮಿ, ಜನಪ್ರಿಯ ಪ್ರಚಾರವಾಜ್ಮಯ, ಲೇಖಕ, ರಾಜಕೀಯ, ಭಾಷ್ಯಕಾರ, ಆರ್ಥಿಕ, ಸಾಮಾಜಿಕ, ನೈಸರ್ಗಿಕ, ನೈತಿಕ, ಧಾರ್ಮಿಕ ಸಮಸ್ಯೆಗಳ, ಅವುಗಳ ಪರಿಹಾರಗಳ, ಸಿದ್ಧಾಂತಗಳ ಅವುಗಳ ಪ್ರಯೋಜನಗಳ ಪರಿಚಯವನ್ನು ಮಾಡಿಕೊಡುವ ಬುದ್ಧಿವಂತಿಕೆ ವೈಚಾರಿಕನದು.

ವೈಚಾರಿಕನು ವಿಮರ್ಶಿಸಿ, ವಿಶ್ಲೇಷಿಸಿ ವಿವಾದ ನಡೆಸಿ ವಿಚಾರ ಪ್ರಚೋದನೆಯನ್ನು ಕೈಗೊಳ್ಳುವ ಸಾಹಸಿ. ಬಳಿಕ ಸಾಹಿತಿ ಅವನಿಗೆ ಅಗಾಧ ಪ್ರತಿಭೆ ಬೇಕಿಲ್ಲ. ಗಹನ ವಿದ್ವತ್ತೆ ಬೇಕಿಲ್ಲ. ಅವೆರಡು ಬೇಡವೆಂದೂ ಅಲ್ಲ. ತೀಕ್ಷ್ಣಬುದ್ಧಿಬೇಕು. ಬಹುಮುಖ ಆಸಕ್ತಿ ಹಾಗೂ ನಿರಂಕುಶಮತಿಯಾಗಿರಬೇಕು. ಸುತ್ತಲಿನ ಪ್ರಜ್ಞಾಪ್ರವಾಹಕ್ಕೆ ತೀರ ಹತ್ತಿರವೂ ಎತ್ತರವೂ ನಿಲ್ಲದೆ

ತೀರ ಹೊರತಾಗಿಯೂ ಹೊರಗಿನವನಾಗಿ ಉಳಿಯಬಾರದು. ಇವೆಲ್ಲ ಪರಿಸ್ಥಿತಿಗಳ ನಡುವೆಯೇ ಅವನು ಸ್ವತಂತ್ರ. ಆಧುನಿಕ ವೈಚಾರಿಕ ಬರಹಗಾರನಿಗೆ ಮುಖ್ಯವಾಗಿ ಧೈರ್ಯವಿರಬೇಕು. ಇಲ್ಲದಿದ್ದರೆ ತನ್ನ ಮುಕ್ತವಾದ ವೈಚಾರಿಕ ನಿಲುವನ್ನು ಪ್ರಕಟಿಸಲು ಸಾಧ್ಯವಿಲ್ಲ. ಯಾವುದೇ ಪ್ರಭಾವ ಪ್ರೇರಣೆ ದಬ್ಬಾಳಿಕೆಗಳಿಗೆ ತನ್ನ ನಿಲುವನ್ನು ಬದಲಾಯಿಸಿಕೊಳ್ಳದವನಾಗಬೇಕು. ಅವನು ತನ್ನ ದಾರಿಯಲ್ಲಿ ಮುನ್ನಡೆದಾಗ ಮಾತ್ರ ವೈಚಾರಿಕನೆನಿಸಿಕೊಳ್ಳಲು ಸಾಧ್ಯವಿದೆ. ನಿರಂಕುಶಮತಿಯಾದರೂ ಜವಾಬ್ದಾರಿಯುಳ್ಳವನಾಗಿರಬೇಕು. ಆ ಜವಾಬ್ದಾರಿಯಿಂದ ಸಮಾಜ ಸೇವಕನೆಂದು ಭಾವಿಸಿಕೊಳ್ಳಬೇಕು. ಗತಕಾಲದ ಪ್ರತಿನಿಧಿಯಾಗಿ, ವರ್ತಮಾನದ ಕಷ್ಟ-ಸುಖಗಳಲ್ಲಿ ಪಾಲುದಾರನಾಗಿ ಭವಿಷ್ಯದ ಹರಿಕಾರನಾಗಿ ನಿರ್ವಹಿಸಬೇಕಾದ ಚಾರಿತ್ರಿಕ ಪಾತ್ರ ಈ ವಿಚಾರಶೀಲನದು. ವೈಚಾರಿಕತೆಯನ್ನು ಬೋಧಿಸುವಾಗ ಎಚ್ಚರಿಕೆಯಿಂದ ಇರಬೇಕು. ಅನೇಕರ ಮನಸ್ಸಿನಲ್ಲಿ ವೈಚಾರಿಕತೆಯೆಂದರೆ ನಾಸ್ತಿಕವಾದ ಎಂಬ ಭಾವನೆಯಿದೆ. ವಿಚಾರವಾದ ನಾಸ್ತಿಕವಾದವಲ್ಲ. ಜನಸಾಮಾನ್ಯರಲ್ಲಿ ವೈಚಾರಿಕಪ್ರಜ್ಞೆ ಮೂಡಿಸಬೇಕು. ಕುರಿತು ಹೇಳುವವರು

ಆಧ್ಯಾತ್ಮಿಕ ಧೈರ್ಯವನ್ನು ಪಡೆದುಕೊಂಡಿರಬೇಕು. ವೈಚಾರಿಕತೆಯನ್ನು ಬಿತ್ತರಿಸುವ ಒಳ್ಳೆಯ ಮಾರ್ಗವೆಂದರೆ, ಪ್ರತಿ ಹಳ್ಳಿಗೂ ಒಂದೊಂದು ವೇದಿಕೆ ನಿರ್ಮಾಣ ಮಾಡಿ, ಜನರಿಗೆ ವಿಶ್ವಾಸ ಮೂಡುವಂತೆ ಮಾಡಿ ನಂತರ ಆ 'ವಿಚಾರ ವೇದಿಕೆ' ಮುಖಾಂತರ ವೈಚಾರಿಕ ಪ್ರಜ್ಞೆ ಮೂಡಿಸುವುದು. ಅನೇಕ ಜನ ಸಂಪ್ರದಾಯವಾದಿಗಳು ಸಂಪ್ರದಾಯವನ್ನು, ನಂಬಿಕೆಗಳನ್ನು ಪ್ರಶ್ನಿಸದೆ ಅನುಸರಿಸುತ್ತಿರುವುದರ ಹಿನ್ನೆಲೆಯಲ್ಲಿ ಇವುಗಳನ್ನು ವೈಚಾರಿಕತೆಯ ತಳಹದಿಯ ಮೇಲೆ **ಪ್ರಶ್ನಿಸುವ ತಾತ್ವಿಕ ಧೋರಣೆಗೆ ವಿಚಾರ ವಾದ ಎನ್ನುತ್ತಾರೆ.**

ವಿಚಾರವಾದ ಶುಷ್ಕ ತರ್ಕವಾಗಬಾರದು. ಹೃದಯಹೀನ ಜೀವವಿರೋಧಿಯಾಗುವ ಸಾಧ್ಯತೆಯಿದೆ. ವೈಚಾರಿಕತೆ, ಬೌದ್ಧಿಕತೆ ವಿಚಾರ ವಾದ ಮುಂತಾದವುಗಳಿಗೆ ಬೆಲೆ ಬರುವುದು ಅದು ಜೀವನ ಮೌಲ್ಯಗಳಿಂದ ಸಮೃದ್ಧವಾದಾಗ ಮಾತ್ರ. ಜೀವನ ಮೌಲ್ಯವೆಂದರೆ ಸತ್ಯ, ಅಹಿಂಸೆ, ಶೀಲ, ಸಂಯಮ, ದಯೆ, ಕ್ಷಮೆ, ತನ್ನಂತೆ ಪರರ ಬಗೆವರೀತಿ, ಬೌದ್ಧಿಕ ಪ್ರಾಮಾಣಿಕತೆ ಮತ್ತಿತರ ಮಾನವೀಯ ಗುಣಗಳು, ಮೌಲ್ಯಗಳು ಸಾಕ್ಷಾತ್ಕರಿಸುವುದೇ ವೈಚಾರಿಕತೆ. ವಿಚಾರ ಸಾಹಿತ್ಯದ ಕರ್ತೃ ತನ್ನ ಸಾಹಿತ್ಯದಲ್ಲಿ ಅಭಿಪ್ರಾಯ, ಅನಿಸಿಕೆಗಳನ್ನು ಸ್ಪಷ್ಟಪಡಿಸಬೇಕಾದರೆ ಅದಕ್ಕೆ ಬೇಕಾದ ತಾರ್ಕಿಕ ಅನುಕ್ರಮ ಮತ್ತು ಆಧಾರಗಳೊಂದಿಗೆ ನಿರೂಪಿಸುವುದು ಅವನ ಹೊಣೆಗಾರಿಕೆ. ಅವನ ವಿಚಾರಗಳನ್ನು ಉಳಿದವರು ಯಾಕೆ ಮನ್ನಿಸಬೇಕು ಎಂಬುದನ್ನು ಅದರಲ್ಲಿ ಮನಗಾಣಿಸುವುದು ವಿಚಾರವಂತನ ಕರ್ತವ್ಯ. ಬುದ್ಧಿಮತ್ತವಾದ ಇಂಥಕರ್ತವ್ಯವನ್ನು ನಿರ್ವಹಿಸಲು ಬೇಕಾದ ಮಾನಸಿಕ ಶಿಕ್ಷಣವೇ ವಿಚಾರ

ಸಾಹಿತ್ಯ. ಪರಂಪರೆಯಿಂದ ಬಂದಿರುವ ಆಧ್ಯಾತ್ಮ, ಮತ, ಧರ್ಮ, ಜಾತಿ, ಪಂಥ ಇವುಗಳಲ್ಲಿಯ ಮೌಢ್ಯಾರ್ಥರಹಿತವಾದ ವಿಧಿ ನಿಷೇಧಗಳು ಮೂಢ ನಂಬಿಕೆಗಳು ಮತ್ತು ಅಂಥ ಸಂಪ್ರದಾಯಗಳು ಇವೇ ಮುಂತಾದವುಗಳು ಸಂಶಯಕ್ಕೆ ಎಡೆ ಮಾಡಿಕೊಡುವ, ಅಪನಂಬಿಕೆ ಮೂಡಿಸುವ ವಿಷಯಗಳಾಗಿವೆ.

ಆದ್ದರಿಂದ ಈ ವಿಷಯಗಳನ್ನು ಕುರಿತು ಮಾಡಿ ಅವುಗಳಿಂದಾಗಿ ಮಾನವ ಪ್ರಗತಿಗೆ ಆಗಿರುವ ತೊಡಕುಗಳನ್ನು ವಿಷದೀಕರಿಸಿ ಅವುಗಳ ಜಾಲದಿಂದ ಪುಟದೆದ್ದು ಹೊರ ಬರಲು ಪ್ರಚೋದನೆ ನೀಡುವಂತಹದು ವೈಚಾರಿಕ ಸಾಹಿತ್ಯ ಎನ್ನಬಹುದು. ತಾವುದೇ ವಿಷಯಕ್ಕೆ ಸಂಬಂಧಿಸಿದಂತೆ ದೀರ್ಘವಾದ ಚಿಂತನ ಮಂಥನ ನಡೆದು ನವನೀತೋಪಾದಿಯಲ್ಲಿ ಬಂದ ವಿಷಯಗಳನ್ನು ವಿಚಾರ ಸಾಹಿತ್ಯವೆಂದು ಪರಿಗಣಿಸಲಾಗುತ್ತದೆ. ವೈಚಾರಿಕತೆಯನ್ನು ವೈಚಾರಿಕತೆ. ವಿಚಾರವಾದ. ವೈಚಾರಿಕ ಸಾಹಿತ್ಯ ಹೀಗೆ ಮೂರು ಹಂತಗಳಲ್ಲಿ ಗುರುತಿಸಲ್ಪಡುತ್ತದೆ. ವಚನ ಸಾಹಿತ್ಯ ವಚನ ಸಾಹಿತ್ಯವನ್ನು – ಓದಿದಾಗ ಮತ್ತೆ ಓದಬೇಕೆಂಬ ಅರಿವನ್ನು ವೈಚಾರಿಕರಿಗೆ ತಂದುಕೊಂಡುತ್ತದೆ.

ಅದು ಅಂದಿನ ಸಾಮಾಜಿಕ ವ್ಯವಸ್ಥೆಯ ಅನಿವಾರ್ಯ ಫಲವಾಗಿದೆ. ಇಂದಿನ ವಿಚಾರವಂತ ಸಾಮಾಜಿಕ ವ್ಯವಸ್ಥೆಗೆ ಜೀವಾಳವಾಗಿದೆ. ವಚನ ಸಾಹಿತ್ಯವನ್ನು ವೈಚಾರಿಕ ದೃಷ್ಟಿಯಿಂದ ನೋಡಿದಾಗ ಅದರ ಓಜಸ್ಸು ಹೆಚ್ಚಾಗುತ್ತದೆ. ಎತ್ತರ ಬೆಳೆಯುತ್ತ ಹೋಗುತ್ತದೆ. ವಚನಸಾಹಿತ್ಯ ಶರಣರ ವೈಚಾರಿಕ ಕ್ರಾಂತಿಯ ಫಲ. ಕ್ರಾಂತಿಯೆಂದರೆ ಶೋಷಣೆಯ ಮಾಧ್ಯಮಗಳನ್ನು ಹಿಡಿದು ನಿರ್ನಾಮಗೊಳಿಸಿ ಅವುಗಳನ್ನು ನಂಬಿದವರನ್ನು ನಿಸ್ಸಹಾಯಕರನ್ನಾಗಿಸುವುದು ಮತ್ತು ಪರಿವರ್ತನೆಗೊಳಿಸುವುದು. ಈ ಕ್ರಾಂತಿ ಕೊಳೆಯನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಹಾಕುತ್ತದೆ. ಕತ್ತರಿಸಿ ಹಾಕುವುದಷ್ಟೇ ಅಲ್ಲ, ಪುನರ್ ಸೃಷ್ಟಿಯ ಮಾರ್ಗವನ್ನು ಕಂಡುಕೊಳ್ಳುವುದು, ಜೀವಂತಿಕೆಯ ಉಸಿರನ್ನು ಊದುವುದು, ಹೊಸ ಮೌಲ್ಯಗಳ ಆವಿಷ್ಕಾರ ಮಾಡುವುದು.

"ಇದು ಕೂಡ ವೈಚಾರಿಕತೆಯ ಒಂದು ಮಗ್ಗುಲು. ವಚನ ಸಾಹಿತ್ಯದ ಮೂಲ ಕುರಿತು ಅಧ್ಯಯನಕ್ಕೆ ತೊಡಗಿದಾಗ ಕಂಡು ಬಂದದ್ದು ಅವರ ಮೂಲ ಆಶಯ ಸಾಹಿತ್ಯ ಸಾಧನೆಯಲ್ಲ. ಜೀವನ ಶೋಧನೆ. ವ್ಯಷ್ಟಿ ಜೀವನದಂತೆ ಸಮಷ್ಟಿ ಜೀವನದ ಒಳಿತನ್ನು ಸಾಧಿಸುವುದು ಅವರ ಗುರಿ. 'ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ.... ಕರ್ಣದಲಿ ಜನಿಸಿದವರುಂಟೇ ಜಗದೊಳಗೆ' ಎಂದು ಪ್ರಶ್ನಿಸುತ್ತಾರೆ ಬಸವಣ್ಣ. ದೀನ ದಲಿತರೊಡನೆ ಬೆರೆತು ಅವರನ್ನು ಮೇಲೆತ್ತಲು ಮುನ್ನುಗ್ಗಿದರು. ಈಗಿನ ರಾಜಕಾರಣಿಗಳಂತೆ ದೂರ ನಿಂತು

ಅವರ ಉದ್ಧಾರಕ್ಕಾಗಿ ನಾಟಕವಾಡದೆ ಅವರ ಮಧ್ಯದಲ್ಲಿ ಹೋಗಿ ನಿಜವಾದ ಸಮಸ್ಯೆಯನ್ನು ಅರಿಯುತ್ತಾರೆ." ೧

ವೈಚಾರಿಕ ಯುಗ ನುಡಿದಂತೆ ನಡೆ ಎನ್ನುವ ಮಾತಿಗೆ ಮಹತ್ವ ಕೊಡುತ್ತದೆ. ಅದನ್ನು ಕುರಿತೆ ವಚನದಲ್ಲಿ ಏನಯ್ಯ ವಿಪ್ರರು ನುಡಿದಂತೆ ನಡೆಯರು... ಇದೆಂತಯ್ಯ ? ತನಗೊಂದು

---

೧. ಸಾಹಿತ್ಯ ಸೌರಭ – ಯಶೋಧಮ್ಮ ಸಿದ್ದಬಟ್ಟೆ –೨೦೦೬ ಪು.ಸಂ ೨೭

ವಚನಗಳು:

"ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು
ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು
ಅಜ್ಞಾನ ಹುಟ್ಟಿದಲ್ಲಿ ಆಸೆ ಹುಟ್ಟಿತ್ತು
ಆಸೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು
ಆ ಕೋಪಾಗ್ನಿಯ ತಾಮಸ ಧೂಮ್ರ ಮುಸುಕಿದಲ್ಲಿ
ನಾ ನಿಮ್ಮ ಮರೆದು ಭವ ದುಃಖಕ್ಕೀಡಾದೆ
ನೀಕರುಣದಿಂದೆತ್ತಿ ಎನ್ನ ಮರಹ ವಿಂಗಡಿಸಿ
ನಿಮ್ಮ ಪಾದವನರುಹಿಸಯ್ಯಾ ಚೆನ್ನಮಲ್ಲಿಕಾರ್ಜುನ" ೧

ಒಂದರ ಹಿಂದೆ ಒಂದು ಸರಪಳಿಯ ಹಾಗೆ ಹುಟ್ಟುತ್ತವೆ. ಹುಟ್ಟಿದೊಡನೆ ಸಂಸಾರ ಹುಟ್ಟುತ್ತದೆ. ಅದರ ಭ್ರಮೆಯಿಂದ ಅಜ್ಞಾನ, ಅಜ್ಞಾನದಿಂದ ಆಸೆ-ದುರಾಸೆ, ಕೋಪ ಹುಟ್ಟುತ್ತವೆ. ಆ ಕೋಪಾಗ್ನಿಯ ತಾಮಸದಿಂದ ಸತ್ಯಸುಖ ಇಲ್ಲದಂತಾಗಿ ಭವದುಃಖ ಶಾಶ್ವತವಾಗಿಬಿಡುತ್ತವೆ. ಇಂಥ ಸಂದರ್ಭಗಳಲ್ಲಿ ಜಾಗ್ರತಿಬೇಕು. ಒಲೆಯನ್ನು ಹೊಕ್ಕು ಉರಿಯನ್ನು, ಮಳೆಯನ್ನು ಹೊಕ್ಕು ಉಲುಹನ್ನು ಮರೆಯುವಂತಾಗುವುದು ನಿಜವಾದ ಸಾಧನೆ. ಆಗ ಆ ಸಂಸಾರದ ಅನುಭವ ಬೇರೆಯೇ ಆಗುತ್ತದೆ. ಈ ಸಂಸಾರ ಒಂದೊಂದು ವಯಸ್ಸಿನಲ್ಲಿ ಹೇಗೆ ಕಾಡುತ್ತದೆಂಬುದನ್ನು ಗುರುತಿಸಿದ್ದಾಳೆ.

"ಕುರಿಕೋಳಿ ಕಿರಿಮೀನು ತಿಂಬವರಿಗೆಲ್ಲ
ಕುಲಕುಲಜರೆಂಬರು
ಶಿವಗೆ ಪಂಚಾಮೃತ ಕರೆವ
ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು
ಅವರೆಂತು ಕೀಳುಜಾತಿಯಾದರು ?
ಜಾತಿಗಳು ನೀವೇಕೆ ಕೀಳಾಗಿರೊ ?
ಬ್ರಾಹ್ಮಣನುಂಡುದು –
ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿಹೋಯಿತು
ಮಾದಿಗರುಂಡುದು –
ಪುಲ್ಲಿಗೆ ಬ್ರಾಹ್ಮಣನಾಗಿ ಶೋಭಿತವಾಯಿತು
ಅದೆಂತೆದಡೆ :

---

೧. ಡಾ. ಜಯಶ್ರೀ ದಂಡೆ- ಅಕ್ಕಮಹಾದೇವಿ –೨೦೦೧ ಪು.ಸಂ. ೧೯

ಸಿದ್ಧಲಿಕೆಯಾಯಿತು ಸಗ್ಗಳಿಯಾಯಿತು

ಸಿದ್ಧಲಿಕೆಯ ತುಪ್ಪವನು ಸಗ್ಗಳಿಯೆ ನೀರನು

ಶುದ್ಧವೆಂದು ಕುಡಿದ

ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪುದಯ್ಯ

ಉರಿಲಿಂಘ ಪೆದ್ದಿಗಳರಸು ಒಲ್ಲನವ್ವಾ ೧ "

ಪುರುಷನ ಸ್ಥಾನ ನಿಷ್ಕರ್ಷೆಗೂ ಸ್ತ್ರೀಯ ಸ್ಥಾನ ನಿಷ್ಕರ್ಷೆಗೂ ಒಂದೇ ಮೂಲವಾಗಿರುವ ಮೌಲ್ಯ ವ್ಯವಸ್ಥೆಯನ್ನು ಪ್ರಶ್ನಿಸಿದ ಕಾಳವ್ವೆ ಮತ್ತೊಂದೆಡೆವರ್ಣನಿರ್ಧಾರಿತ ಮೌಲ್ಯವ್ಯವಸ್ಥೆಯನ್ನು ವಿಡಂಬಿಸುತ್ತಾಳೆ. ಇನ್ನೊಂಡೆ ಸ್ತ್ರೀಯಾಗಿ ಪುರುಷನನ್ನೂ, ಅವನ ಅಚಿತಃಸತ್ವದ ಮೌಲಿಕ್ಯತೆಯನ್ನು ತುಂಬಾ ತೀಕ್ಷ್ಣವಾದ ವಿಮರ್ಶೆಗೆ ಗುರಿಪಡಿಸುತ್ತಾಳೆ.

ಅಲ್ಲಮನು ಅಕ್ಕಮಹಾದೇವಿಯನ್ನು ಹೀಗೆ ಕೇಳುತ್ತಾನೆ. "ಸತ್ತೆನೆಂದು ಹೆಣ ಕೂಗುದುಂಟೆ ? ಬೈಚಿಟ್ಟ ಬಯಕೆ ಕೂಗುದುಂಟೆ ? ಹೆಪ್ಪು ಹಾಕಿದ ಹಾಲು ಸಿಹಿಯಾಗಬಹುದೇ ?" ಈ ಸಮರ್ಥನೆಯನ್ನು ಗುಹೇಶ್ವರ ಒಪ್ಪುವುದಲ್ಲಿ. ಅಕ್ಕನಿಗೆ ಈ ಪ್ರಶ್ನೆಗಳನ್ನು ಕೇಳಿ ನಗು ಬಂದಿರಬೇಕು. ಇಷ್ಟೂ ಇವರಿಗೆ ತಿಳಿಯದೆ ? ಇದೆಂಥ ಅನುಭವ ಎನಿಸಿರಬೇಕು. ಉತ್ತರಿಸುತ್ತಾಳೆ – ಸತ್ತ ಹೆಣ ಕೂಗಿದ್ದೂ ಉಂಟು. ಬೈಚಿಟ್ಟ ಬಯಕೆ ಕರೆದದ್ದೂ ಉಂಟು ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದದ್ದೂ ಉಂಟು. ಇದನ್ನು ಬೇಕಾದರೆ ಪರೀಕ್ಷಿಸಿ ಪ್ರಾಮಾಣಿಸಿಕೊಳ್ಳಿ ಎನ್ನುತ್ತಾಳೆ. ಅದು ಹೇಗೆಂದು ಅಕ್ಕನಿಂದಲೇ ಪರಿಚಯಿಸಿಕೊಡಬೇಕೆಂದು ಅಲ್ಲಮ ಆಕೆಗೆ ವಿವರಿಸಲು ಹೇಳುತ್ತಾನೆ.

"ಮರೆದೊರಗಿ ಕನಸ ಕಂಡು ಹೇಳುವಲ್ಲಿ

ಸತ್ತ ಹೆಣ ಎದ್ದಿತ್ತು. ತನ್ನ ಋಣನಿಧಾನ ಎದ್ದು ಕರೆದಿತ್ತು

ಹೆಪ್ಪಿಟ್ಟ ಹಾಲು ಗ್ಟಟ್ಟಿ ತುಪ್ಪವಾಗಿ ಸಿಹಿಯಾಗಿತ್ತು

ಇದಕ್ಕೆ ತುಪ್ಪ ಸಾಧಿಸಲೇಕೆ ? ಚನ್ನಮಲ್ಲಿಕಾರ್ಜುನ ದೇವರ ದೇವನಣ್ಣಗಳಿರಾ ! "೨

ಅಲ್ಲಮ ಜೊತೆಗೆ ಅನುಭವ ಮಂಟಪದಲ್ಲಿ ಸೇರಿದ ಎಲ್ಲ ಶರಣರಿಗೂ ಅಹುದಹುದು ಎನಿಸುತ್ತದೆ. ಎಲ್ಲರೂ ಅಕ್ಕನ ಮಾತುಗಳನ್ನು ಒಪ್ಪಿಕೊಳ್ಳುತ್ತಾರೆ. ಎಲ್ಲ ಶರಣರು ಅಕ್ಕನ ವ್ಯಕ್ತಿತ್ವನ್ನು ಕೊಂಡಾಡುತ್ತಾರೆ. ಮಡಿವಾಳ ಮಾಚಿದೇವ ಹೇಳುತ್ತಾನೆ. – ಅಕ್ಕ ಕಾಮಿ ಆಗಿಯೂ ನಿಃಕಾಮಿ ಆದಾಕೆ. ಸಾತ್ವಿಕ ಕಾಮವನ್ನು ಲಿಂಗದೊಂದಿಗೆ ಇಟ್ಟುಕೊಂಡಾಕೆ.

೧. ಡಾ.ಮ.ನ. ಜವರಯ್ಯ-ದಲಿತ ವರ್ಗದ ಶರಣರು ಮತ್ತು ಶರಣೆಯರು -೧೯೯೭ ಪು.ಸಂ.೨೧೭

೨. ಡಾ.ಜಯಶ್ರೀ ದಂಡೆ ಅಕ್ಕಮಹಾದೇವಿ–೨೦೦೭ ಪು.ಸಂ. ೩೫

ಸೀಮೆಯಲ್ಲಿದ್ದೂ, ನಿಸ್ಸೀಮ ಗುಣವನ್ನು ಪಡೆದಾಕೆ. ಭವಿಯ ಸಂಗವನ್ನು ತೊರೆದು, ಭವಬಾಧೆಯನ್ನು ಹರಿದುಕೊಂಡು ಶರಣರ ಸನಿಹಕ್ಕೆ ಬಂದಾಕೆ. ಭವಗೆದ್ದು ಬಂದ ಅಕ್ಕನಿಗೆ ನಾನು ಮಡಿಯನ್ನು ಹಾಸಿ ನಡೆಸುತ್ತೇನೆ. ಆ ಮಡಿಯನ್ನು ಅಕ್ಕ ಸರ್ವಾಂಗಕ್ಕೆ ಹೊದಿಕೆಯಾಗಿಸಿಕೊಂಡಾಳು ಅಕ್ಕ ಮಡಿಯನ್ನುಟ್ಟಳು. ಇಂಥವಳನ್ನು ಏನೆಂದು ಉಪಮಿಸಬೇಕು. ಬಸವಣ್ಣನ ಕೃಪೆಯಿಂದ ಅಕ್ಕನ ದರ್ಶನ ಭಾಗ್ಯ ತಮಗೆಲ್ಲ ದೊರಕಿದೆ ಎಂದು ಕೃತಜ್ಞತೆ ಅರ್ಪಿಸಿದ್ದಾನೆ.

"ಹದಮಣ್ಣಲ್ಲದೆ ಮಡ 'ಕೆಯಾಗಲಾರದು
ವ್ರತಹೀನನ ಬೆರೆಯಲಾಗದು
ಬೆರೆದಡೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ, ಕುಂಭೇಶ್ವರಾ" ೧

ಈ ವಚನದಲ್ಲಿ ಅಡಗಿರುವ ಇನ್ನೊಂದು ಜನಪ್ರಿಯವೂ ಗಮನಾರ್ಹವೂ ಆದ ಸಂಗತಿ ಎಂದರೆ, ಶರಣರು ತಮ್ಮ ಉಪಜೀವನಕ್ಕಾಗಿ ಹಿಡಿದ ಕಾಯಕದ ಪರಿಭಾಷೆಯಲ್ಲೇ, ಆ ಮಾತಿನ ಸೊಗಡಿನಲ್ಲೇ ವಚನಗಳನ್ನು ರಚಿಸಿದುದು. ಅಂತೆಯೇ, ಮಣ್ಣು ಹದವಿಲ್ಲದೆ ಹೇಗೆ ಮಡಿಕೆ ಒಂದು ಪರಿಪೂರ್ಣ ವ್ಯಕ್ತಿತ್ವನ್ನೂ ಅಸ್ತಿತ್ವವನ್ನೂ ಪಡೆಯಲಾರದೋ, ಹಾಗೆಯೇ ಶರಣನಾದವನು ಕೇವಲ ಶಿವನಿಷ್ಠೆಯನ್ನು ಮಾತ್ರವಲ್ಲವೆ, ಇಡೀ ಜೀವನವನ್ನೆ ಆಧ್ಯಾತ್ಮಿಕರಣಗೊಳಿಸಿಕೊಳ್ಳದಿದ್ದಲ್ಲಿ ಶಿವಮಾರ್ಗದಲ್ಲಿ ಅವನು ಶರಣನಾಗಲಾರ ನೆಂಬ ಗಹನ ವಿಚಾರವನ್ನು ವ್ರತಹಿನನ ಬೆರೆಯಲಾಗದು. ಬೆರೆದಡೆ ನರಕ ತಪ್ಪದು ಎಂಬ ಸರಳ ನುಡಿಯಲ್ಲೂ ಸಾಮಾನ್ಯರ ಗ್ರಹಿಕೆಗೆ ಸೂಕ್ತ ಧಾಟಿಯಲ್ಲೂ, ಆದರೆ ಸಾಮಾನ್ಯ ವೃತ್ತಿಯಾದ ಕುಂಬಾರಿಕೆಯ ಪರಿಭಾಷೆಯಲ್ಲೂ ಹೇಳುವಲ್ಲಿನ, ಶರಯರು ಕಸಿ ಮಾಡಿದ ಶರಣ ತತ್ವದ ಸೈದ್ಧಾಂತಿಕ ಸೊಗವನ್ನೂ ಕಲಾತ್ಮಕ ಸರಳತೆಯನ್ನೂ ವಚನದಲ್ಲಿ ಅರ್ಥಮಾಡಿ ಕೊಳ್ಳಬೇಕಾಗುತ್ತದೆ.

"ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು
ಗಿಡು ಗಿಡುದಪ್ಪದೆ ಬೇಡಿದೆನೆನ್ನಂಗಕ್ಕೆಂದು
ಅವು ನೀಡಿದವು ತಮ್ಮ ಲಿಂಗಕ್ಕೆಂದು
ಆನು ಬೇಡಿ ಭವಿಯಾದೆನು" ೨

೧. ಡಾ.ಮ.ನ. ಜವರಯ್ಯ-ದಲಿತ ವರ್ಗದ ಶರಣರು ಮತ್ತು ಶರಣೆಯರು -೧೯೯೭ ಪು.ಸಂ೨೫೩
೨. ಡಾ.ಮ.ನ. ಜವರಯ್ಯ-ದಲಿತ ವರ್ಗದ ಶರಣರು ಮತ್ತು ಶರಣೆಯರು -೧೯೯೭ ಪು.ಸಂ೫೦

ಪ್ರಾರಂಭದಲ್ಲಿ ಹಸಿವು ತೃಷೆ ನಿದ್ರೆ, ಅರಿಷಡ್ವೈರಿಗಳಿಗೆ ನಿಲ್ಲು ನಿಲ್ಲು ಎಂದು ಕೇಳಿಸಿಕೊಂಡರೂ, ಚನ್ನಮಲ್ಲಿಕಾರ್ಜುನನನ್ನು ಮಟ್ಟುವೆನೋ ಇಲ್ಲವೋ ಎಂಬ ಆಂತಕ ಕಾಡಿದಾಗ, ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ ನಲ್ಲನ ಕೂಡಬೇಕಾದರೆ, ಒಡಲುವಿಡಿದು ಕೆಡಬಾರದೆಂಬ ಎಚ್ಚರವಿದೆ. ಒಡಲ ಹ್ಮಡಿಗಟ್ಟಿ ಮೃಡನೊಳಗೆ ಎಡೆದೆರಹಿಲಲ್ದಿರಬೇಕೆಂದ ಅರಿವಿದ್ದರೂ, ಚನ್ನಮಲ್ಲಿಕಾರ್ಜುನನೆಂಬ ಅಲಗು ಒಡಲಲ್ಲಿ ಮುರಿದೂರ ಹೇಗೋ ಒಡಲ ಕಳವಳ ಕಾಡಿದಾಗ ಬಹಳ ನೋಂದಿದ್ದಾಳೆ.

> "ನೆವದಿಂದ ಶರಣರ ಬಾಗಿಲಲ್ಲಿ ಹೋಗಿ,
> ಕಟ್ಟಿದ ಹಸು ಕೂಡಿದ ಎತ್ತ ಬಿಡಿರೋ
> ಎಂದು ಕೂಗುತಿದ್ದೇನೆ.
> ಎನ್ನ ಕೂಗಿನ ದನಿಯಿಂದ
> ಮಹಾಶರಣರ ಸತಿ ಬಂದು
> ಕಟ್ಟಿದ ಹಸುವ ಬಿಟ್ಟು
> ಕೂಡಿದ ಎತ್ತ ಕಡಹಿ
> ನಾಳೆ ಕೊಡಿಯೆಂದು ಹೊಡೆದ್ದೇನೆ
> ಗೋಪಿನಾಥ ವಿಶ್ವೇಶ್ವರ ಲಿಂಗಡಿಗಾಗಿ" ೧

ತುರುಗಾಹಿ ರೇವಮ್ಮ ಈ ವಚನದಲ್ಲಿ ಮೇಲೆ ಮಾಡಿರುವ ಪ್ರತಿಪಾದನೆಗೆ ಪೂರಕವಾದ ಹಲವಾರು ವಿಚಾರಗಳು ಅಡಕವಾಗರುವುದನ್ನು ಕಾಣಬಹುದು. ಶರಣರ ಮನೆಗಳ ದನಗಳನ್ನು ಮೇಯಿಸಿಕೊಂಡು ಬಹುವುದು ರೇವಮ್ಮ ದಂಪತಿಗಳು ಕಾಯಕ. ಈ ಕಾಯಕವನ್ನು ಎಷ್ಟು ನಿಷ್ಠೆಯಿಂದ ಪಾಲಿಸುತ್ತಿದ್ದರೆಂಬುದನ್ನು ವಚನದ ಮೊದಲ ಸಾಲಿನಲ್ಲೇ ಇರುವ ನೆವದಿಂದ ಎಂಬ ಕ್ರಿಯಾಪದ ಸಾಧಾರವಾಗಿ ಸಿದ್ಧಪಡಿಸುತ್ತದೆ. ಇವುಗಳಿಗಿಂತಲೂ ಮುಖ್ಯವೆನಿಸುವ ಅಂಶವೆಂದರೆ, ದನ ಕಾಯುವ ತನ್ನ ವೃತ್ತಿಯಲ್ಲೇ ಆಧ್ಯಾತ್ಮದ ಔನ್ನತ್ಯವನ್ನು ಸಾಧಿಸಿದನೆಂಬುದು. ಹಾಗೆಯೇ ತನ್ನ ಆಧ್ಯಾತ್ಮದ ಉತ್ಕರ್ಷಕ್ಕೆ ಮಾತ್ರವಲ್ಲದೇ ಬದುಕಿನ ಒಂದು ಮಾರ್ಗವಾಗಿಯೂ ತನ್ನ ಪಾಲಿನ ಕಾಯಕವನ್ನು ನಡೆಸಿರುವುದನ್ನು ಇನ್ನೊಂದು ವಚನದಲ್ಲಿ ಪರಿಭಾವಿಸಹುದು.

> "ಹಸುವಿಗೆ ಹಾಗ
> ಎತ್ತಿಗೆ ಹಣವಡ್ಡ
> ಕರುವಿಗೆ ಮೂರು ಹಣ;

---

೧. ಡಾ.ಮ.ನ. ಜವರಯ್ಯ–ದಲಿತ ವರ್ಗದ ಶರಣರು ಮತ್ತು ಶರಣೆಯರು –೧೯೯೭

ಎಮ್ಮೆ ಕೋಣ ಕುಲವ-
ನಾ ಕಾಯಲಿಲ್ಲ.
ಆವು ತನ್ನ ತರುವಿಗೆ ಹೊರಗು;
ಗೊಂಡು ಹೋಗದಂತೆ ಕಾದೊಪ್ಪಿಸುವೆ
ಗೋಪಿನಾಥ ವಿಶ್ವೇಶ್ವರ ಲಿಂಗಕ್ಕೆ" ೨

ಈಗಾಗಲೇ ಹೇಳಿರುವಂತೆ ದನಕರುಗಳನ್ನು ಮೇಯಿಸುವ ಕಾಯಕ ರೇವಮ್ಮನದೆಂಬುದು ಸರಿಯೇ. ಹಾಗೆಯೇ ಈ ವಚನದಲ್ಲಿ ಬಳಸಲಾಗುವ ಹಸು, ಎಮ್ಮೆ ಕೋಣ ಮುಂತಾದುವೆಲ್ಲ ರವಿವಮ್ಮನಿಂದ ಕಾಯಲ್ಪಟ್ಟವೆಂಬುದೂ ನಿಜವೇ. ಆದರೆ, ಇವುಗಳನ್ನು ವಚನಗಳಲ್ಲಿರೂಪಕಗಳನ್ನಾಗಿಸಿ ಇಷ್ಟರ ಮಟ್ಟಿಗೆ ವಚನಗಳನ್ನು ರೂಪಿಸಬೇಕಾದರೆ ಈ ಕಾಯಕದಲ್ಲಿ ಅವನಿಗೆ ಬಲುದೀರ್ಘವಾದ ಅನುಭವವೇ ಇರಬೇಕು. ಈ ದೀರ್ಘಾನು ಭವದೊಡನೆ ಷವನ ಕಾಯಕ ನಿಷ್ಠೆಯೂ ಸೇರಿ ಬೆಳೆದು ನಿಂತಿರುವ ರೆವಮ್ಮನ ಅನುಭಾವಿಕ ವ್ಯಕ್ತಿತ್ವದ ಘನತೆಯನ್ನೂ ಇದರಿಂದ ಅರಿಯಬಹುದು. ಅಷ್ಟೇ ಅಲ್ಲದೇ ರೆವಮ್ಮನ ಈ ವಚನದ ಅರ್ಥ ಕೂಡ ಇಷ್ಟಕ್ಕೆ ಇಲ್ಲುವುದಿಲ್ಲ.

"ಅಕ್ಕಿ ಬೇಳೆ ಉಪ್ಪು ಮೆಣಸು ಅಡಕೆ ಫಲ ರಸ ದ್ರವ್ಯ ಮುಂತಾದ
ದ್ರವಕ್ಕೆ ವ್ರತವೊ ? ಮುಟ್ಟುವ ತಟ್ಟುವ ಸೋಂಕುವ ಚಿತ್ತಕ್ಕೆ ವ್ರತವೋ :
ಇವು ಬಾಹ್ಯದಲ್ಲಿ ಮಾಡುವ ನೌಕರಿಯವಲ್ಲದೆ ವ್ರತಕ್ಕೆ ಸಲ
ವ್ರತವಾವ್ಯದೆಂದಡೆ :
ತನ್ನಾಯ ಸ್ವಪ್ನದಲ್ಲಿ ತನಗಲ್ಲದುದ ಕಂಡಡೆ
ತಾ ಮುಟ್ಟಿದುದ ಮುಟ್ಟಿದಡೆ, ತಆ ಕೊಳ್ಳದುದ ಕೊಂಡಡೆ
ಆ ಸೂಕ್ಷ್ಮ ತನುವಿನಲ್ಲಿ ಆ ತನುವಂ ಬಿಟ್ಟು ನಿಂದುದು ವ್ರತ
ಸ್ಥೂಲತನುವಿನಲ್ಲಿ ಸರ್ವರ ನಿಂದೆಗೊಡಲಾಗದೆ
ಮಿಕೊಂಡ ನೇಮಕಕ್ಕೆ ಕೇಡು ಬಂದಲ್ಲಿ
ಆ ಅಂಗಕ್ಕೆ ಓ ಸರಿಸದೆ ನಿಂದು ಆಚಾರ
ಇಂತೀ ಅಂತರಂಗದಲ್ಲಿ ವ್ರತ ಬಹಿರಂಗದಲ್ಲಿ ಆಚಾರ
ಇಂತೀ ಉಭಯ ಸಿದ್ಧವಾಗಿ ನಡೆವುದೆ ವ್ರತ ಆಚಾರ

---

೧. ಡಾ.ಮ.ನ. ಜವರಯ್ಯ-ದಲಿತ ವರ್ಗದ ಶರಣರು ಮತ್ತು ಶರಣೆಯರು -೧೯೯೭

ಇಂತವನರಿದು ಮರದಲ್ಲಿ, ತಾ ಮಾಡಿಕೊಂಡ ಕುತ್ತಕ್ಕೆ ಹಾಡಿ ಮುದ್ದನೆರೆದಂತೆ
ಆಗಕ್ಕೆ ಭಕ್ತನಾಗಿ ಆತ್ಮಂಗೆ ಅನುಸರಣೆಯಾದಲ್ಲಿ
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗಕ್ಕೆ ಸಲ್ಲದನೇಮ" ೧

ಹಲವಾರು ಆಹಾರ ಪದಾರ್ಥಗಳಾದ, ಅಕ್ಕಿ ಬೇಳೆ, ಬೆಲ್ಲ, ಉಪ್ಪು, ಮೆಣಸು, ಅಡಿಕೆ, ಫಲ, ರಸ, ದ್ರವ್ಯ ಮುಂತಾದವುಗಳು ಮುಟ್ಟದರೆ ಅವುಗಳಿಗೆ ಮುಟ್ಟಿನಲ್ಲ ಸೊಂಕಿಲ್ಲಬರಿ ಜನರ ತೊರಿಕೆಗೆ ಮಾಡು ನಾಟಕವಿದು ತನಗೆ ಅರಿವಿಲ್ಲದೆ ಏನೆಲ್ಲ ಮಾಡುತ್ತೇವೆ. ಅದು ಮೈಲಿಗೆ ಆಗದು ಜನರಿಗೆ ಮುಟ್ಟಿದಾಗ ಹೇಗೆ ಮೈಲಿಗೆ ಆಗುತ್ತದೆ. ಮಣ್ಣಿನ ಮುದ್ದೆ ಯಾವ ದೇಹಕ್ಕೆ ಮಟ್ಟಿದ್ದಾಗ ಎನ್ನುವರು.

"ಒಂದು ಬಿದಿರಿಗೆ ಕವೆ ಮೂರು
ಆ ಕವೆಯೊಳಗೆ ಲಕ್ಕ ಸಿಬಿರು
ಮೂರು ಕವೆಯ ಕೊಚ್ಚಿಸಿ,
ಬಿಲ್ಲ ಸ್ಕಿಬಿಡಿಸಿ, ಸಿಗಿದ ಬಿದಿರ
ಹೊರೆ ಹ್ರೆರೆಯಲ್ಲಿ ನೆಯಿದೆ ತೊಟ್ಟಿಲಸಂದ ಕ್ಪಣದಂತೆ,
ನಾಲ್ಕು ಕಾಲನಿಕ್ಕಿ ಅಂದು
ಅಚಿದವಾದ ತೊಟ್ಟಿಲ ದಂಡೆಯನಿಕ್ಕಿ
ಕಟ್ಟುವುದಕ್ಕೆ .
ಶೃತ ದೃಷ್ಟವೆಂಬೆರಡು ದಾರದಲ್ಲಿ ತೊಟ್ಟಿಲಕಟ್ಟಿ
ಗೌರೇಶ್ವಲಿಂಗಕ್ಕೆ
ಹುಟ್ಟುಗೆಟ್ಟು ಹೋಗೇ ಎಂದು ಜೋಗುಳವಾಡಿದೆ" ೨

ಈ ವಚನದೊಳಗೆ ಎಷ್ಟೊಂದು ಭಾವಗಳು ತುಂಬಿಕೊಂಡಿವೆ ಎಂದರೆ, ಬಹುಶಃ ಈ ವಚನದ ಬಗ್ಗೆ ಏನೂ ಮಾತಾಡದೆ ಇರುವುದೇ ಅಸಾಧ್ಯವೆನಿಸುತ್ತದೆ. ಆದ್ದರಿಂದ ಸತ್ಯ ಕೇವಲ ಎರಡೇ ಎರಡು ಮಾತುಗಳು : ಒಂದನೆಯಯದಾಗಿ, ಈ ವಚನದೊಳಗಿನ ಭಾವಸಾಂದ್ರತೆಗೆ ಕಾರಣ ಬಸವಯುಗದ ಪ್ರಾಚೀನ ಶರಣಧರ್ಮದ ಆದೋಲನ, ಶಿಖರ ಪ್ರಾಯವಾಗಿ ಬೆಳೆದಿದ್ದುದು. ಎರಡನೆಯದಾಗಿ, ಅಕ್ಕಮ್ಮ ತನ್ನ ಇಷ್ಟದೇವತೆಯಾದ ಧೂಳೇಶ್ವರ ನಿಗಿಂತಲೂ ಮೊದಲಾಗಿ ಸ್ಮರಿಸಿಕೊಂಡಿರುವುದು ಈಗ ಮೇದರ ಕೇತಯ್ಯನ ಒಂದು ವಚನ :

---

೧. ವಾಣಿಶ್ರೀ ಎಸ್. ಪಾಟೀಲ್ -ಶಿವಶರಣೆಯರು ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ವಚನಗಳು ಪು.ಸಂ. ೭೧
೨. ವಾಣಿಶ್ರೀ ಎಸ್. ಪಾಟೀಲ್ -ಶಿವಶರಣೆಯರು ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ವಚನಗಳು

“ಅಜ ಎಮ್ಮೆ ಹಾಲ ಬಿಟ್ಟಲ್ಲಿ ಹೇರಂಡವ ಬೆಳೆಯಲಿಲ್ಲ
ಬೆಳೆದಡೆ ಮನಗೆ ತರಲಿಲ್ಲ; ತಲಿಲ್ಲದ ಮತ್ತೆ ಅಡಲಿಲ್ಲ
ಅದು ದೀಪದ ಬೆಳಗಿಂಗೆ ದೇವರಿಗೆ ನಿಹಿತವಲ್ಲ
ಅದು ರಾಕ್ಷಸ ವಂಶ ಭೂತವಾದ ಕಾರಣ
ಕಂಡುದ ಬಿಟ್ಟು ಕಾಣದುದ ನರಸಿಕೊಳಬೇಕು
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ ವ್ರತ ಮುಕ್ತನ ನೇಮ” ೧

ಆಡು. ಎಮ್ಮೆಯು ಸಾಲು ಹಾಕಿದರೆ ಔಡಲದ ಗಿಡ ಬೆಳೆಯುವುದೇ ? ಒಂದು ವೇಳೆ ಬೆಳೆದರು. ಅದು ಉಪಯೋಗಕ್ಕೆ ಬರುವುದೆ ಇಲ್ಲ ದಪವರಿಗೆ ದೀಪದರ ಬೆಳಕು ಬೇಕು, ಕತ್ತಲೇ ಅಲ್ಲಾ ಕತ್ತಲೆ ಬಯಸುವುದು ರಾಕ್ಷಸ ವಂಶದ ಭೂತ ಇದು ಇದ್ದಿದ್ದನು ಬಿಟ್ಟು ಇರಲಾರದ್ದು ಕೇಳುವುದು ದೇವರು ಇರಲಾರದ ವ್ರತ ಆಚಾರ ಬೇಡನು ಅವನು ಬರಿ ಭಕ್ತಿಗೆ ಒಲಿಯುತ್ತಾನೆ.

“ನಾನಾವರ್ಣದ ಗೋವುಗಳೆಲ್ಲವೂ ಕೂಡಿ
ಒಂದೇ ಹೊಲದಲ್ಲಿ ಮೇದು,
ಆರು ಕೆರೆಯ ನೀರ ಕುಡಿದು,
ಒಂದೇ ದಾರಿಯಲ್ಲಿ ಬಂದು,
ಮೂರು ಕೊಟ್ಟಿಗೆಯ ಗೂತ್ತಿಂಗೊಳಗಾದುದು.
ಬಿಟ್ಟು ಕರೆಯಲಾಗಿ,
ಗೋವಿಂಗೆ ವರ್ಣ ಹಲವು, ಹಾಲಿಗೆ ಏಕವರ್ಣ,
ಹಾಲತಂದು ಭಾಜನದಲ್ಲಿ ನೀಡಿ ಕಾಸುವಲ್ಲಿ
ಚಟ್ಟ ಹತ್ತದೆ, ಹಸುಕು ನಾರದೆ
ಕೌರು ಏಳದೆ ನೀರರಸತಪ್ಪಿ ಮಧುರ ರಸತುಂಬಿ
ಕಾಸಿ ಉಣಬಲ್ಲಡೆ ಆತನೆ ಭೋಗಿ
ಆತನಿರತಿಶಯಾನುಭಾವ ಶುದ್ಧಾತ್ಮನು
ಕಾಲಕರ್ಮವಿರಹಿತ ತ್ರಿಪುರಾಂತಕ ಲಿಂಗತಾನೆ” ೨

---

೧. ಡಾ.ಮ.ನ. ಜವರಯ್ಯ ಶರಣರು ಮತ್ತು ಶರಣೆಯರು ೧೯೯೭ ಪು.ಸಂ. ೨೬೬

೨. ಡಾ.ಮ.ನ. ಜವರಯ್ಯ ಶರಣರು ಮತ್ತು ಶರಣೆಯರು ೧೯೯೭

ಓೀಗೆಯೇ. ಕ್ರಿಯೇಯಾದ ಅಕ್ಕಮ ವಚನವೂ ಇದೇ ಧಾಟಿಯಲ್ಲಿ ಸಾಗಿದೆ. ಈ ವಚನಕಾರ ಗೊಲ್ಲರ ಕೋಮಿಗೆ ಸೇರಿದವನು. ಹಸು ಸಾಕಿ, ಹಾಲು ಕರೆದು, ಹಾಲಿನ ಪದಾರ್ಥಗಳನ್ನು ಮಾರಿ ದಾಸೋಹಿಯಾಗಿ ಬದುಕುವುದು ಇವನ ಕಾಯಕ ಹಸುಗಳ ವರ್ಣಗಳು ಅಸಂಖ್ಯವಿರಬಹುದು. ಆದರೆ, ಅವುಗಳ ಹಾಲಿನ ವರ್ಣ ಮಾತ್ರ ಒಂದೇ ಕಟ್ಟಿ, ಮಗುವನ್ನು ಮಲಗಿಸಿ. ತೂಗಿ, ಜೋಗುಳವಾಡುತ್ತಿರುವ ಒಂದು ಸ್ಪಷ್ಟ ಚಿತ್ರವಿದೆ.

"ಹಳೆಯ ಹುತ್ತದೊಳಗೆ
ಒಂದು ಎಳೆಯ ಸರ್ಪನಕಂಡೆ
ಆ ಎಳೆಯ ಸರ್ಪ ಹೊರಟು
ಬೆಳಗು ಕತ್ತಲೆ ನುಂಗಿತ್ತು."

ಅಧ್ಯಾಯ - ೫

ಇಂದಿನ ದಿನಗಳಲ್ಲಿ ವಚನಗಳ ಪುಸ್ತುತತೆ

ಅಧ್ಯಾಯ –೫
ಇಂದಿನ ದಿನಗಳಲ್ಲಿ ವಚನಗಳ ಪ್ರಸ್ತುತತೆ

ವಚನಗಳು ಕನ್ನಡ ಸಾಹಿತ್ಯದ ಕಾವ್ಯ ಪರಂಪರೆಯ ವಿಶಿಷ್ಟ ಪ್ರಕಾರಗಳಲ್ಲೊಂದು. ಅದು ಅನುಭಾವಗಮ್ಯ ಕಾವ್ಯವಾಹಿನಿ. ನಿಮ್ಮ ಸಂಸ್ಕೃತಿಯಲ್ಲಿ ಸಾಮಾಜಿಕ, ಸಾಹಿತ್ಯಿಕ ಧಾರ್ಮಿಕ. ವೈಜ್ಞಾನಿಕ. ನೈಸರ್ಗಿಕ, ಹಾಗೂ ಭಾಷಿಕ ವಿಷಯಗಳ ಜ್ಞಾನವನ್ನು ನೀಡುವ ಕಾರ್ಯ ಮಾಡಿದೆ. ೧೨ನೇಯ ಶತಮಾನದಲ್ಲಿ ಅಸಂಖ್ಯಾತ ವಚನಕಾರರು ತಮ್ಮ ಅನುಭವಗಳನ್ನು ಸಾಹಿತ್ಯಾತ್ಮಕ ರೀತಿಯಲ್ಲಿ ಪ್ರಮಾಣೀಕರಿಸಿ "ವಚನಗಳ ಮೂಲಕ ದಾಖಲಿಸಿದ್ದಾರೆ.

೧೨ನೇ ಶತಮಾನಗಳಿಗಿಂತ ಮುಂಚೆ ಭಾರತೀಯ ಸಮಾಜದಲ್ಲಿ ಸ್ತ್ರೀಯ ಸ್ಥಿತಿ ತುಂಬಾ ಶೋಚನಿಯವಾಗಿತ್ತು, ಸಮಾಜದಲ್ಲಿ ಮಾನಗಳಿಂದ ಹೆಣ್ಣು ಸಾಮಾಜಿಕವಾಗಿ, ಧಾರ್ಮಿಕವಾಗಿ. ರಾಜಕೀಯವಾಗಿ. ಅತ್ಯಂತ ಕೇಳಸ್ಥರದ ಜೀವನ ನಡೆಸುತ್ತಿದ್ದಳು, ಹೆಣ್ಣು ಅಬಲೆ, ಕೇವಲ ಭೋಗದ ವಸ್ತು ಜ್ಞಾನವಿಲ್ಲದವಳು ಎಂದು ಬಂಧನ ಇಟ್ಟುಕೊಂಡ ಕಾಲದಲ್ಲಿ ಬಸವಯುಗದಲ್ಲಿ ಕಲ್ಯಾಣ ಕ್ಷೇತ್ರ ಕೈಲಾಸವಾಯಿತು. ಶರಣರ ಧಾರ್ಮಿಕ, ಸಾಮಾಜಿಕ. ಕಾಂತ್ರಿಯ ಫಲವಾಗಿ ಹೊಸಬದಲಾವಣೆಯನ್ನು ಕಾಣುತ್ತೇವೆ.

ಈ ಕಾಲದಲ್ಲಿ ಅನೇಕ ಜನ ಶರಣೆಯರು ವಚನ ರಚನೆ ಮಾಡಿದ್ದಲ್ಲದೆ, ತಮ್ಮ ಧ್ಯೇಯ ಧೋರಣೆಗಳನ್ನು ನಿರ್ಭೀತಿಯಿಂದ ಧಾರ್ಮಿಕವಾಗಿ, ಸಮಾಜದಲ್ಲಿ ಪುರುಷನಿಗೆ ಸಮವಾಗಿ ಕುಳಿತು ಧಾರ್ಮಿಕವಾಗಿ. ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ ಚರ್ಚಿಸುವದನ್ನು ಕಲ್ಪಿಸಿದರು. ಹೆಣ್ಣು. ಹೊನ್ನು, ಮಣ್ಣು, ಮಾಯ ಎಂದು ಭಾವಿಸಿದ ಈ ಜನಕ್ಕೆ ಅಲ್ಲಮಪ್ರಭುಗಳು ಓಗೆ ಹೇಳುವರು "ಹೆಣ್ಣುಮಾಯೆಯಲ್ಲ ಮಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ" ಎಂದು ಹೇಳುವರು.

ಆ ಕಾಲದಲ್ಲಿ ಕಲ್ಯಾಣ ಕೈಲಾಸವಾಗಿತ್ತು. "ಎತ್ತೆತ್ತನೋಡಿದಡತತ್ತ ಬಸವನೆಂಬ ಬೆಳ್ಳಿ ಹಬ್ಬ" ಲಿಂಗವೆಂಬ ಗೊಂಚಲು ಕಂಗೊಳಿಸುತಿತ್ತು. ಕಾಯಕ, ದಾಸೋಹ, ವಚನ ರಚನೆ, ತತ್ವ ಚಿಂತನೆ, ವೈಜ್ಞಾನಿಕ ಚಿಂತನೆ "ಅನುಭವ ಮಂಟಪ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಕಮ್ಮಟ ಜಾತಿಯತೆ ಕಂದಾಚಾರ, ಮಾಢನಂಬಿಕೆ, ಭಷ್ಟಾಚಾರ ಮುಂತಾದ ಸಮಾಜದ ಜಡ್ಡುಗಳ ಬುಡಕ್ಕೆ ಕೊಡಲಿ ಪೆಟ್ಟು ಕೊಟ್ಟರು. ಇಂತಹ ಮರವನ್ನು ಬುಡಸಹಿತ ಕೀಳಲು ಪ್ರಯತ್ನಿಸಿದರು. ಅವರ ಈ ಪ್ರಯತ್ನದ ಫಲವಾಗಿ ಅನೇಕ ವಚನಗಳು ರಚನೆಗೊಂಡವು.

ಆಧುನಿಕ ಭಾರತದಲ್ಲಿನ ಶೇ ೭% ಜನ ಕೃಷಿಯನ್ನೇ ಅವಲಂಬಿಸಿ ಬದುಕುತ್ತಿದ್ದಾರೆ. ಆಗಿನ ಕಾಲದಲ್ಲಿ ಹೆಚ್ಚು ಜನರ ಮೂಲ ಕಸುಬು ವ್ಯವಸಾಯವಾಗಿರುವುದರಿಂದ ಅವರ ಜೀವನ ಹೆಚ್ಚುಕಾಲ ನೈಸರ್ಗಿಕತೆಯ ಮಡಿಲಿನಲ್ಲೆ ಸಾಗುತಿತ್ತು. ಹೀಗಾಗಿ ಅವರು ತಾವು ಕಂಡ ಹಾಗೂ ಅನುಭವಿಸಿದ ವಿಚಾರಗಳನ್ನು ತಮ್ಮ ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಸೃಷ್ಠಿಯ ಪ್ರತಿಯೊಂದು ವಸ್ತುವಿನ ಬಗ್ಗೆ ಅವರಿಗಿದ್ದ ವೈಚಾರಿತೆ, ವೈಜ್ಞಾನಿಕತೆ, ಸಾಮಾಜಿಕತೆಯ ಆದರ್ಶ ವಿಚಾರಗಳನ್ನು ಅವಲೋಕಿಸಿವಾಗ ಆಗಿನ ಶರಣ ಶರಣೆಯರ ಅನುಭಾವಾಮೃತಗಳು ಸಮಕಾಲಿನ ಬದುಕಿಗೆ ಪ್ರಸ್ತೂತವಾಗಿ ನೀಲುತ್ತವೆ.

"ಸಮಕಾಲಿನತೆ ಎಂದರೆ ಒಬ್ಬಸಂತ, ದಾರ್ಶನಿಕ, ಕವಿ, ಸಾಹಿತಿ, ಸಮಾಜ ಸುಧಾರಕ, ರಾಜಕಾರಣಿ, ಶರಣ ಇವರ ಬದುಕನ್ನು ಗಮನಿಸಿವಾಗ ಅವರ ಬದುಕಿನ ಸುತ್ತ ಇರುವ ಹಿಂದಿನ ಮುಂದಿನ ಒಟ್ಟು ೩ ಶತಮಾನದ ಸಾಮಾಜಿಕ, ಭೌತಿಕ, ಧಾರ್ಮಿಕ ಸ್ಥಿತಿಗತಿ ಪರಿಗಣಿಸಬೇಕಾಗುತ್ತದೆ. ಅ ಚಿಂತನೆಗಳು ತಮ್ಮ ಸಮಕಾಲೀನ ಜೀವನದಿಂದ ಪಡೆದ ಅನುಭವ ನೀಡಿರುವ ಕೊಡುಗೆ ಮುಂತಾದವುಗಳು ಬರುತ್ತವೆ. ಬಸವಣ್ಣವರ ಪತ್ನಿಯಾದ ಗಂಗಾಬಿಕೆಯು ದಾಸೋಹ ಮನೋಭಾವದೊಂದಿಗೆ ಶರಣೆಯರಿಗೆ ಮಾದರಿಯಾದ ಇವಳು ತನ್ನ ಮಗ ಸಂಗನ ಬಸವ ಶಿವಲೀನನಾದಾಗ "ಒಂದು ಹಾಳು ಭೂಮಿಯ ಹುಲಿ ಬಂದು ಎನ್ನಂಗಳಿರುವ ಭಕ್ಷಿತಲ್ಲಾ! ಆ ಹುಲಿ ಹಾಳಿಗೆ ಹೋದ ತನ್ನ ದುಃಖವನ್ನು ವಡ್ಡಿಕೊಳ್ಳುತ್ತಾಳೆ. "ದಟ್ಟಡವಿಯಲ್ಲಿ ಬಿಟ್ಟು ಹೋದಿರಿ ಬಸವಯ್ಯ ನಟ್ಟನಡು ಗ್ರಾಮದ ಕೆಡಿಸಿ ಹೋದಿರಿ ಬಸವಯ್ಯಾ. ಹುಟ್ಟಲ್ಲದ ಬಂಜೆಗೆ ಮಕ್ಕಳ ಕೊಟ್ಟರುಪಿರಿ ಬಸವ "ಕಲ್ಯಾಣ ಕ್ರಾಂತಿಯಾದಾಗ ಗಂಗಾಂಬಿಕೆ ವಚನ ರಕ್ಷಣೆಗೆ ಸಿದ್ಧರಾಗಿರಲು ಹೇಳಿದಾಗ ಬಸವ ಹೊದ ದುಃಖದೊಳು "ಅಡವಿಯಲ್ಲಿ ಕಣ್ಣುಗೆಟ್ಟ ಪಶುವಿನಂತೆ ನಾನು ಪ್ರಳಾಪಿಸುತ್ತಿದ್ದೆನಯ್ಯ, ನೆಳಲ ನರಸಲಿಲ್ಲ ಕಳೆಯರತ ದೀಪದಲ್ಲಿ ಬೆಳಗನರಸಲಿಲ್ಲ, ಕುರುಹಳಿದ ಮೂರ್ತಿಯಲ್ಲಿ ರೂಪ ನರಸಲಿಲ್ಲ ಶಬ್ದವಡಗಿ ನಿಶ್ಶಬ್ದನಾದ ಬಸವನಲ್ಲ ಶಬ್ದವನರಸಲಿಲ್ಲ, ಸಂಗಯ್ಯನಲ್ಲಿ ಕಾಯವಿಲ್ಲದ ಕರುಣೆಯಾದೆ ನಾನು ಎಂದು ನಿಲಾಂಬಿಕೆ ತನಗೆ ಆಶ್ರಯನಾದ ಬಸವನು ದೂರ ಹೊದಮೇಲೆ ತನ್ನ ಬಾಳಿನ ನೆರಳಾದ ಬಸವನಿಲ್ಲವಾದನಲ್ಲ, ತನ ಮನೆಯಬೆಳಕಾದ ಬಸವ ನಿಶಬ್ದನಾದನಲ್ಲ, ಎಂದು ನುಡಿವಳು.

ಶಿವಭಕ್ತರು ಸರ್ವಕಾಲಕ್ಕೂ ಶ್ರೀಮಂತರು ಎನ್ನುವುದಕ್ಕೆ ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ ? ಬೆಟ್ಟ ಬಲಿತ್ತೆಂದಡೆ ಉಳಿಯ ಮನೆಯಲ್ಲಿ ಬಡತನವಿದ್ದೆಡೆ ಎಂದು ಕೆಳುವರು ಮಳಿಗೆ ಮಾರಯ್ಯನು ತಾನು ಶರಣರಂತೆ ಲಿಂಗೈಕ್ಯಳಾಗಲು ಬಯಸಿದಾಗ ಮಹಾದೇವಿ ಹೀಗೆ ಹೇಳುವಳು "ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯನಲೇತಕ್ಕೆ ?

ಪರುಷರಸ ಕೈಯಲ್ಲಿದ್ದು ಕೂಲಿಯ ಮಾಡಲೇತಕ್ಕೆ ? ಕ್ಷುತ್ತ ನಿವೃತ್ತಿಯಾದಂಗೆ ಕಟೋಗರದ ಹೊರೆಯ ಹೊರೆಲೇತಕೆ ?

ನಿತ್ಯ ಅನಿತ್ಯವ ತಿಳಿದು ಮರ್ತ್ಯ ಕೈಲಾಸವೆಂಬುವದು ಭಕ್ತರಿಗೆ ಯುಕ್ತಿಯಲ್ಲ ಎಂದು ಆ ಬೆಟ್ಟಬಯಲ ಜೆಳಗ ನಿನ್ನ ನೀನೆ ನೋಡಿಕೊ ಎಂದು ಭಕ್ತನಿಗೆ ಮರ್ತ್ಯ ಕೈಲಾಸದ ಭೇದವಿಲ್ಲ ಎಂಬ ಮಾತು ಸಾರ್ಥಕವಾಗುತ್ತದೆ.

ಆ ಜಜಿಡ್ಡುಗಟ್ಟಿದ ಸಂಪ್ರದಾಯ ಸಮಾಜದಲ್ಲಿ ಶರಣರು ನೀಡಿದ ಸ್ತ್ರೀ ಸ್ವಾತಂತ್ರ್ಯದಿಂದ ನಮ್ಮ ಶರಣೆಯರು ಸ್ತ್ರೀಕುಲಕ್ಕ ಮಾದರಿಯಾಗಿದ್ದಾರೆ. ಅವರ ವಚನಗಳೆಲ್ಲ ಕಂಡುಬರುವ ಸಾರ್ವಕಾಲಿಕ ಮೌಲ್ಯಗಳು ಸಮಕಾಲಿನ ಸಮಾಜದ ಬದುಕಿಗೆ ಅವಶ್ಯಕವಾಗಿದೆ.

"ಹೊಸ ಚಿಗುರು ಹಳೆ ಬೇರು ಕೂಡಿರುಲು ಮರ ಸೊಬಗು
ಹೊಸಯುಕ್ತಿ ಹಳೆತತ್ವ ದೊಡಗೂಡೆ ಧರ್ಮ
ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೋಳವಿಸೆ
ಆಸವು ಜೀವನಕೆ ಮಂಕುತಿಮ್ಮ"೧

ಎಂಬ ಡಿ.ವಿ.ಜಿ ಯವರ ಮಾತಿನ ಬೆಳಕಿನಲ್ಲಿ ಪರಂಪರೆಯ ಪ್ರಜ್ಞೆಯುಳ್ಳವರಾಗಿ, ಯುಗ ಧರ್ಮಕ್ಕೆ ಸ್ಪಂದಿಸುವ ಮನೋಭಾವ ಮೈಗೂಡಿಸಿಕೊಂಡು, ವಚನ ಸಾಹಿತ್ಯದಿಂದ ಇಂದಿಗೂ ಪ್ರಸ್ತುತವಾಗುವ ಅಂಶಗಳನ್ನು ಪಡೆದು ಜೀವನವನ್ನು ಶ್ರೀಮಂತ ಗೊಳಿಸಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಇಂದಿನ ಮೂಲಭೂತ ಸಮಸ್ಯೆಗಳಾವು ? ಎಂಬುವುದಕ್ಕೆ ವಚನ ಸಾಹಿತ್ಯ ಮಾದರಿಯಾಗಿದೆ.

"ಈಳೆನಿಂಬೆ. ಮಾವು, ಮಾದಲಕ್ಕೆ ಹುಳಿ ನೀರನೆರೆದವರಾರಯ್ಯ ಕಬ್ಬು, ಬಾಳೆ, ಹಲಸು, ನಾರಿವಾಳಕ್ಕೆ ಸಿಹಿನೀರ ನೆರೆದವರಾರಯ್ಯ ? "ಇಂತಹ ವಚನಗಳಲ್ಲಿ ಸೃಷ್ಟಿಯ ವೈಚಿತ್ರ್ಯಗಳನ್ನು ಗುರುತಿಸುವ ಅಕ್ಕನ ಸೌಂದರ್ಯ ದೃಷ್ಟಿ ಪರಿಸರ ಪ್ರಜ್ಞೆ ಗಮನಸೆಳೆಯುತ್ತದೆ. ಅಕ್ಕಮಹಾದೇವಿ ಕೆಲವು ಬೆಡಗಿನ ವಚನಗಳನ್ನು ರಚಿಸಿದ್ದಾಳೆ.

"ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕೆ" ಸಾಂಕೇತಿಕವಾಗಿ ಮೂಡಿಬಂದ ಇಂತಹ ವಚನಗಳ ಅರ್ಥ ಸುಲಭಗ್ರಾಹ್ಯವಾಗಿಲ್ಲ. ಮೇಲ್ನೋಟಕ್ಕೆ ವ್ಯತಿರಿಕ್ತವಾಗಿ ಕಾಣುವ ಇಲ್ಲಿನ ಪ್ರತಿಮೆಗಳ ವಾಚ್ಯಾರ್ಥವನ್ನು ಮೀರಿ ಅನುಭವಾದ್ಯವಾದ ಲಕಾರ್ಥವನ್ನು ಪ್ರತಿಪಾದಿಸುತ್ತವೆ. ಇಂಥಹ ಅನುಭಾವಗಮ್ಯ ವಚನಗಳಿಂದ ಸೃಷ್ಟಿ ಪ್ರೇಮ ಬೆಳೆಸುವುದು ಇಂದಿನ ಈ ಸಂದರ್ಭದಲ್ಲಿ ಅದೂ ಇಪ್ಪತ್ತೊಂದನೇ ಶತಮಾನದಲ್ಲಿ ಸಮಕಾಲೀನತೆ ಕುರಿತು

೧) ಸಮಕಾಲಿನ ವಚನ ಸಾಹಿತ್ಯ: ಪು.ಸಂ: ೧೫

ಅವಲೋಕಿಸಿದಾಗ "ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಬದುಕು ಕಾಣುತ್ತೇವೆ. ಹೀಗೆ ಭೂತ ಭವಿಷತ್ತ ಕಾಲಗಳ ಚಿಂತನೆ ಮುಖ್ಯವಾಗಿದೆ.

ಕಾಲದಿಂದ ಕಾಲಕ್ಕೆ ಜೀವನದ ಮೌಲ್ಯಗಳು, ಆದರ್ಶಗಳು, ಆಚಾರ–ವಿಚಾರಗಳು ಬದಲಾಗುತ್ತ ಹೋಗುತ್ತಿರುತ್ತವೆ. ಜನರ ಧಾರ್ಮಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಬದಲಾವಣೆಗಳಿಂದ ಹೊಸಯುಗವೊಂದು ಸೃಷ್ಟಿಯಾಗುತ್ತದೆ ಅದಕ್ಕನುಗುಣವಾಗಿ ಕ್ರಾಂತಿಯಾಗುತ್ತದೆ. ಹೊಸ ಮೌಲ್ಯಗಳು ಅವಿಷ್ಕಾರಗೊಳ್ಳುತ್ತವೆ. ಸೂಕ್ಷ್ಮ ಮತಿಗಳು "ಸಮಕಾಲೀನತೆ" ಯನ್ನು ಅರ್ಥೈಸಿಕೊಂಡು ಅದರಲ್ಲಿರುವ ಒಳ್ಳೆಯ ಅಂಶಗಳನ್ನು ತಮ್ಮ ಬದುಕಿಗೆ ಅಳವಡಿಕೊಳ್ಳುತ್ತಾರೆ. ಜೊತೆಗೆ ಸಮಾಜದಲ್ಲಿರುವ ಅನಿಷ್ಠ ನೀತಿ, ಕಂದಾಚಾರಗಳ ವಿರುದ್ಧ ಬಂಡಾಯ ಏಳುತ್ತಾರೆ. ಇದೇ ಇತಿಹಾಸ ಸೃಷ್ಟಿಗೆ ಪ್ರೇರಕವಾಗುತ್ತದೆ. ಮತ್ತು ಭವಿಷ್ಯದ ಕಾಲಕ್ಕೆ ಹಿಡಿದ ಕನ್ನಡಿಯಂತೆ ಅವರ ಉನ್ನತೆ ಧ್ಯೆಯ ಉದಾತ್ತ ಚಿಂತನೆಗಳು ಸಹಾಯಕವಾಗುತ್ತವೆ ಇದು ಸಾರ್ವಕಾಲಿಕಸತ್ಯವುಳ್ಳ ಮೌಲ್ಯಗಳಾಗಿರುತ್ತವೆ.

ಪ್ರಸ್ತುತ ದಿನಮಾನಗಳಲ್ಲಿ ಮಾನವನ ಬದುಕು ಕ್ಷಣ–ಕ್ಷಣಕ್ಕೂ ಅವನತಿಯತ್ತ ಸಾಗುತ್ತಿದೆ. ಪ್ರತಿ ಹಂತಹದಲ್ಲೂ ಸಂಸ್ಕೃತಿಯ ಅಧಪತನವಾಗುತ್ತದೆ. ಎಲ್ಲೆಡೆ ಅನಿಶ್ಚಿತತೆ ವಾತಾವರಣ ನಿರ್ಮಾಣವಾಗುತ್ತದೆ. ಮಾನವ ಮೇಲ್ನೋಟಕ್ಕ ಸುಖಿಯಾಗಿರುವಂತೆ ಕಂಡರೂ ಆಂತರಿಕವಾಗಿ ಅಸುಖಿಯಾಗಿದ್ದಾನೆ. ದುಶ್ಚಟ ದುರ್ವ್ಯಸನಗಳ ದಾಸನಾಗಿ ಮಾನಸಿಕ ಶಾಂತಿ ನೇಮ್ಮದಿಗಳನ್ನು ಅಜ್ಞಾನ, ಅವಾಂತರ, ಅವಿಚಾರಗಳೂ ಮಿತಿ ಮೀರುತ್ತೇವೆ. ತೊಡುವ ಬಟ್ಟೆ, ವಾಸಿಸುವಮನೆ, ಓಡಾಡುವ ವಾಹನ, ಉಣ್ಣುವ ಆಹಾರ ಆಡುವ ಮಾತುಗಳ ವೈಖರಿಯಿಂದ ಹಲವರು ಸಭ್ಯರಂತೆ, ಪರಮಸುಖಿಗಳಂತೆ ತೋರಿಸಿ ಕೊಳ್ಳುತ್ತಿದ್ದಾರೆ.

ಆದರೆ ಅವನ ಮಾನಸಿಕ ವಿಚಾರಗಳು ವಿಕಾರಗುಳ್ಳುತ್ತೀವೆ. ನಿಜವಾದ ಆನಂದ ಬಾಹ್ಯವಸ್ತುಗಳಿಂದ ದೊರೆಯುವಂತಹದಲ್ಲ ಶಾಂತಿ ಸುಖ ಆನಂದ ನೆಲೆಗೊಳ್ಳವುದು ಅಂತರಂಗದ ಶುದ್ಧ ನಡವಳಿಕೆಗಳಿಂದ ಅಂತರಂಗದ ಶುದ್ಧಿ ಅಪರೂಪವಾಗುತ್ತಿರುವುದರಿಂದ ಮಾನವ ಸಂದರ್ಭದಲ್ಲಿ ಮಾನಸಿಕ ರೋಗಿಯಾಗುತ್ತಿದ್ದಾನೆ. ಸಮಕಾಲೀನ ಸಮಾಜದಲ್ಲಿ ಬದುಕುತ್ತಿರುವ ಮಾನವನ ನೋವು ನಲಿವುಗಳಿಗೆ ಲೆಕ್ಕವಿಲ್ಲ ಆತನ ಈ ಸಮಸ್ಯೆಗೆ ಅವನ ವಿಚಾರಶಕ್ತಿ ಜಾಣ್ಮೆ ಕಾರಣವಿಲ್ಲಾ ಹೊರತು ಅವನ ಆಧುನೀಕತೆಯ ಡಂಬರದ ಬದುಕು ಕಾರಣ ಆಧುನಿಕತೆಯ ಬೆನ್ನು ಹತ್ತಿ ನಮ್ಮ ಜೀವನಕ್ಕೆ ಉಸಿರಾದ ನಮ್ಮ ಪರಿಸರವನ್ನು ಹಾಳು ಮಾಡುತಿದ್ದಾನೆ. ಗೃಹಸೌದರ್ಯಕ್ಕೆ ನಗರಗಳ ಸೌಂದರ್ಯಕ್ಕೆ ಬೆನ್ನು ಹತ್ತಿ ಅನೇಕ ಮರಗಳನ್ನು ಹಾಳುಮಾಡುತ್ತಿದ್ದಾನೆ. ವೈಜ್ಞಾನಿಕ ಕ್ಷೇತ್ರದ ಬೆಳವಣಿಗೆಯಿಂದಾಗಿ ಪರಿಸರಕ್ಕೆ ವಿಪರೀತ ಹಾನಿಯೊದಗಿಸುತ್ತಿದ್ದಾನೆ. ಉದಾಃ ಹೊಸ ಹೊಸ ಅಣುಬಾಂಬಗಳನ್ನು

ಕಂಡುಹಿಡಿದು ಅದನ್ನು ಪ್ರಯೋಗಮಾಡಿ ನೋಡಲು ಉಡಾಯಿಸಿ ಅದನ್ನು ನಂತರ ಬಯಲು ಪ್ರದೇಶದಲ್ಲೊ ನೀರಿನಲ್ಲಿ ಬಿಳುವಂತೆ ಮಾಡುತ್ತಾರೆ. ಇದರಿಂದ ಗಾಳಿ ನೀರು ಕಲುಶಿತಗೊಳ್ಳುತ್ತದೆ. ಇದರಿಂದ ಜನರು ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಇಂದಿನ ಜನಜೀವದಲ್ಲಿ ಹಾಸು ಹೊಕ್ಕಾಗಿ ಹೊದ ಮೊಬೈಲ್‌ಗಳು ಇವುಗಳ ಟವರ್‌ಬರಲು ಹಾಕುವ ಸೆಟಲೈಟಗಳಿಂದ ಅನೇಕ ಸಣ್ಣ ಪುಟ್ಟ ಪಕ್ಷಿಸಂಕುಲ ನಾಶವಾಗುತ್ತಿದೆ ಹಿಂದೆ ಬೆಳಗಿನ ಜಾವದ ಸೂಚನೆ ಎಂಬಂತೆ ಎಲ್ಲಡೆಯ ಹಕ್ಕಿಗಳ ಚಿಲಿಪಿಲಿನಾದ ಕೋಳಿಗಳ ಕೂಗುಕೇಳಿ ಬರುತ್ತಿತ್ತು. ಅಂತೆ ನಮ್ಮ ಕವಿ ಬೇಂದ್ರೆಯವರು ಹೀಗೆ ಹೇಳುತ್ತಾರೆ.

> "ಮೂಡಲ ಮನೆಯ ಮುತ್ತಿನ ನೀರಿನ
> ಎರಕವ ಹೊಯ್ದ
> ಗಿಡಗಂಟೆಯ ಕೊರಳೊಳಗಿಂದ ಹಕ್ಕಿಗಳ ಹಾಡು
> ಹೊರಟಿತು ಹಕ್ಕಿಗಳನಾದ ಗಂಧರ್ವರ ಸೀಮೆ
> ಯಾಯಿತು ಕಾಡಿನ ನಾಡು" [೧]

ಎಂದು ಸೃಷ್ಠಿಯ ಸೊಬಗನ್ನು ಸೂರ್ಯೊದಯ ಮುಂಚಿನ ಕಾಲವನ್ನು ವರ್ಣಿಸಿ ಹೇಳಿದ್ದಾರೆ ಆದರೆ ಇಂದು ಅದು ಮಾಯಾವಾಗುತ್ತಿದ್ದಂತೆ ತೋರತ್ತದೆ. ಸೃಜನಶೀಲ ವ್ಯಕ್ತಿಗಳು ಮಾನಸಿಕ ಕೊಟಲೆಗೊಳಗಾಗಿ ತಲ್ಲಣಗೊಳ್ಳವಂತಾಗುತ್ತದೆ. ಅವನ ಸಾಮಾಜಿಕ ಕಳಕಳಿಯ ತುಡಿತ ಸ್ಪೂರ್ತಿಗಳಿಗೆ, ಮಸ್ತಿತಿಗೆ ತರುವ "ಕೊಂಡೆ ಮಂಚಣ್ಣ" ನವರಿಗೆ ಅರ್ಥವಾಗದು ಅವರು ತಮ್ಮ ಹೊಟ್ಟೆಪಾಡಿಗಾಗಿ ಏನೆಲ್ಲಾ ಮಾಡುವರು. ವೀರಪ್ಪನಂಥಹ ಮರಗಳು ಬರಿ ಮರಗಳನ್ನು ಅಷ್ಟೆ ನಾಶ ಮಾಡಲಿಲ್ಲ. ಅನೇಕ ಕಾಡು ಮೃಗಗಳನ್ನು ಅವುಗಳ ಚರ್ಮವನ್ನು ಹಣದ ಆಸೆಗೆ ವಿದೇಶಿಗರಿಗೆ ಮಾರಾಟಮಾಡುತ್ತಿರುವರು, ಒಬ್ಬ ವೀರಪ್ಪನ್ ಸತ್ತರೆ ಇನ್ನೊಬ್ಬ ಹುಟ್ಟಿಕೊಳ್ಳುತ್ತಿರುವ ಸಮಾಜದಲಿ ಮನುಕುಲಕ್ಕೆ ಒದಗುವ ತೊಂದರೆಯಿಂದ ತಪ್ಪಿಸಿಕೊಳ್ಳಲು ನಮ್ಮ ಶರಣೆಯರ ವಚನಗಳಲ್ಲಿ ಕಂಡುಬರುವ ಪರಿಸರ ಕಾಳಜಿ ಪರಿಸರದೊಂದಿಗರ ಹೊಂದಿರುವ ಮಾನವ ನಿಕಟ ಸಂಬಂಧಗಳು ಅದರಲ್ಲಿ ಅವರು ಕಂಡುಕೊಂಡ ವೈಚಾರಿಕ, ವೈಜ್ಞಾನಿಕ, ಸಾಮಾಜಿಕ ದೃಷ್ಠಿಯನ್ನು ತಿಳಿಯುವುದು ಇಂದು ಅತ್ಯಾವಶಕವಾಗಿದೆ .ಅವರ ವಚನಗಳ ಅನುಭಾವಾಮೃತಗಳು ಸಮಕಾಲೀನ ಮೌಲ್ಯಗಳಾಗಿವೆ. ಇಂದು ಇಷ್ಟು ಮುಂದುವರೆದ ಸಮಾಜದಲ್ಲಿ ಸ್ತ್ರೀಯರಿಗರ ಎಷ್ಟೋ ನಿಯಮ ಕಟ್ಟುಪಾಡುಗಳಿವೆ. ಒಂದಲ್ಲಾ ಒಂದು ರೀತಿ ಗುಪ್ತವಾಗಿ, ಬಹಿರಂಗವಾಗಿ ಶೋಷಿಸುತ್ತಿರುವ. ಸಮಾಜದ ಜನತೆಗೆ ತಿಳುವು ಮೂಡಿಸುವದು ಇಂತಹ ವಚನಗಳಿಂದ ಸಾಧ್ಯವಾಗುತ್ತದೆ.

---

೧. ಡಾ. ಸೋಮನಾಥ ಯಳವಾರ- ಹೊಸಗನ್ನಡ ಸಾಹಿತ್ಯ ಸಂಗ್ರಹ -೨೦೦೯ ಪು.ಸಂ ೩

ಅಧ್ಯಾಯ – ೬
ಉಪಸಂಹಾರ

ಅಧ್ಯಾಯ ೬

ಉಪಸಂಹಾರ

ಜಾಗತೀಕ ಇತಿಹಾಸದಲ್ಲೇ ಮಾನವ ವಿಶಿಷ್ಠ ಸ್ಥಾನವನ್ನು ಪಡೆದಿದ್ದಾನೆ. ಇದಕ್ಕೆ ಕಾರಣ ಅವನ ವೈಚಾರಿಕ, ವೈಜ್ಞಾನಿಕ, ಸಾಮಾಜಿಕ, ಧಾರ್ಮಿಕ, ಪ್ರಗತಿಯೆ ಕಾರಣ, ದಿನೆ ದಿನೆ ಇವನು ಬೆಳೆಯುತಿದ್ದಂತೆ, ಇವನ ಸಾಮಾಜಿಕ ಮೌಲ್ಯಗಳಾದ ನೈತಿಕ, ಪಾಮಾಣಿಕತೆ, ಆತ್ಮಿಯತೆ ಮನುಷ್ಯ ಮನಷ್ಯರಲ್ಲಿ ಮತ್ತು ಇತರ ಪ್ರಾಣಿಗಳಲ್ಲಿ ಅವನಿಗಿದ್ದ ಸ್ನೆಹಪರ ಭಾವನೆ ಕಡಿಮೆಯಾಗುತ್ತಿದೆ ಇಂಥಹ ಮೌಲ್ಯಾಧಾರಿತ ಭಾವನೆಗಳನ್ನು ಬಿತ್ತರಿಸುವ ವಿಷಯಗಳ ಅಧ್ಯಯ ಮಾಡುವುದು ಇಂದಿನ ಪಿಳಿಗೆಗೆ ಅವಶ್ಯಕವಾಗಿದೆ. ಇಂಥಹ ಸತ್ವಯುತ ವಿಚಾರಗಳನ್ನು ಒಳಗೊಂಡ ಸಾಹಿತ್ಯ ೧೨ನೇ ಶತಮಾನದಲ್ಲಿ ರಚನೆಗೊಂಡ ವಚನ ಸಾಹಿತ್ಯ ಈ ಸಾಹಿತ್ರ ಜನಸಾಮಾನ್ಯರ ಆಡು ಭಾಷೆಯಲ್ಲಿ ರಚನೆಗೊಂಡು ವಿವಿಧತೆಯಲ್ಲಿ ಸಮುನ್ವಯನ್ನು ಸಾರುವ ಸಾಹಿತ್ಯವಾಗಿದೆ.

ಈ ಕಾಲದ ಶರಣೆಯರು ತಮ್ಮ ಅಂತರಂಗ ಶಕ್ತಿಯನ್ನು ಎಚ್ಚರಗೂಳಿಸಿ ಆ ತೆರೆದ ಒಳಗಣ್ಣಿನಿಂದ ಸತ್ಯದ ಸ್ವರೂಪವನ್ನು ಪ್ರತ್ಯಕ್ಷವಾಗಿ ಸೃಷ್ಠಿಯ ಚೇತನಾ ಚೇತನಗಳಲ್ಲಿ ಕಂಡು ಅದನ್ನು ತಮ್ಮ ವಚನಗಳ ಮೂಲಕ ಚಿತ್ತರಿಸಿದ್ದಾರೆ. ಇದು ಕೇವಲ ಧರ್ಮವನ್ನು ಬೋಧಿಸುವ ಒಂದು ಧರ್ಮಗ್ರಂಥವಾಗಿದೆ, ಉತ್ತಮ ತತ್ವಗಳನ್ನು ಬೋಧಿಸುವ ಗ್ರಂಥ ಇದಾಗಿದೆ, ಮಾತಿಗೆ ಮೀರಿದ ಸೂಕ್ಷ್ಮ ಅನುಭವಗಳನ್ನು, ತಾತ್ವಿಕ ವಿಚಾರಗಳನ್ನು, ಪರಮಾತ್ಮನೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧ ಮತ್ತು ಸೃಷ್ಟಿಯ ವೈಭವದಲ್ಲಿ ಶಿವನನ್ನು ಕಾಣುವ ರೀತಿ ಚರಾಚರಗಳ, ಬೆಳವಣಿಗೆ ಅದರ ಸಂಬಂಧವನ್ನು ಇವರ ವಚನದಲ್ಲಿ ಕಾಣುತ್ತೆವೆ.

ನೈಸರ್ಗಿಕ ಪ್ರೇಮ, ಪ್ರಾಣಿ, ಪಕ್ಷಿಗಳಲ್ಲಿನ ಆತ್ಮಿಯತೆಯನ್ನು ಕಾಣುತ್ತೆವೆ. ಅಕ್ಕ ತನ್ನ ಜೀವನದಲ್ಲಿ ತಾನು ಕಂಡುಕೊಂಡ ಗುರಿಯನ್ನು ತಲುಪಿಯೇ ತೀರಬೇಕೆಂಬ ಛಲ ಅಕ್ಕನಲ್ಲದೆ ಒೀಗಾಗಿ ಸಕಲ ಸೃಷ್ಟಿಯ ಜೀವಿಗಳೊಂದಿಗೆ ತನ್ನ ಅಳಲನ್ನು ತೊಡಿಕೊಂಡು ತನ್ನ ಸಾಧನೆಯ ಸಿದ್ದಿಗಾಗಿ ಸೋಪಾನವಾಗಿದೆ ಎಂದು ಕೊಂಡಳು "ಮುಗಿಲು ಹರಿದು ಬಿದ್ದೊಡೆ ಎನಗೆ ಮಜ್ಜನ ಕೆರೆದೆ ಎನ್ನುವರು, ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು, ಹೀಗೆ ಚೆನ್ನಮಲ್ಲಿಕಾರ್ಜನನನ್ನು ಆತ್ಮ ಸಂಗಾತಿಯಾಗಿರಿಸಿಕೊಂಡು ಲೋಕ ರೂಢಿಯ ಪ್ರವಾಹದ ವಿರುದ್ದ ಈಜಲು ಹೊರವ ಅಕ್ಕ ಸಾಧಿಸಿಕೊಂಡಿರಬಹುದಾದ ಧೈರ್ಯ, ಧೃಡಸಂಕಲ್ಪ, ಮನೋಬಲ ಇಲ್ಲಿ ವ್ಯಕ್ತವಾಗಿದೆ. "ಶರಣಸತಿ ಲಿಂಗಪತಿ" ಭಾವದ ಆಕೆಯ ಆಧ್ಯಾತ್ಮೀಕ

ವಚನಗಳು ಉತ್ಕೃಷ್ಟವಾಗಿ ಕಾಣುತ್ತವೆ. ತನ್ನ ಪತಿ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ ಉಳಿದವರೆಲ್ಲರು ತನಗೆ "ಮುಗಿಲ ಮರೆಯ ಬೊಂಬೆಯಂತೆ "ಎರದ ಮುಳ್ಳಿನಂತೆ ಪರಗಂಡರೆನಗವ್ವಾ" ಅಲೌಕಿಕ ಪತಿಯ ದಿವ್ಯ ಸ್ವರೂಪವನ್ನು ಕಾಣುವಳು "ಸತ್ಯಂ, ಶಿವಂ, ಸುಂದರಂ" ಎಂಬಂತೆ ಎಲ್ಲಿ ಸೌಂದರ್ಯವಿದೆ ಅಲ್ಲಿ ಶಿವನಿರುವನು, ಎಲ್ಲಿ ಶಿವನಿದ್ದಾನೋ ಅಲ್ಲಿ ಸತ್ಯವಿದೆ. ಎಂದು ಸಾರುವ ಮಾತು "ವನವೆಲ್ಲಾ ನೀವೆ ವನದೊಳಗಣ ತರುವೆಲ್ಲಾ ನೀವೆ" ಎಂದು ವಿಸ್ಮಯವಾದ ಶಿವನನ್ನು ಕಾಣಲು ತವಕಿಸಿದ್ದಳು ದೇವರ ಮಹಿಮೆ ಅಘಾದವಾದದ್ದು, ಅವನು ಸೃಷ್ಟಿಯ ಪ್ರತಿಯೊಂದು ವಸ್ತುವಿನಲ್ಲೂ ಹೇಗೆ ಅಡಕವಾಗಿದ್ದಾನೆ ಎಂದರೆ "ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ" ಎಂದು ಕೌತುಕ ಪಟ್ಟಿದ್ದಾಳೆ ಪ್ರತಿಯೊಂದು ಪ್ರಾಣಿ ಪಕ್ಷಿಗಳಲ್ಲಿ ಅವಳು ತೋರುವ ಸ್ನೇಹಪರ ಭಾವನೆ "ಅಳಿಸಂಕುಲವೆ ಮಾಮರವೆ ಬೆಳದಿಂಗಳೆ ಕೋಗಿಲೆಗಳೆ" ಎಂದು ಮುಂದುವರೆದು ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ, ನೀವುಕಾಣರೆ ಎಂದು ಚನ್ನಮಲ್ಲಿಕಾರ್ಜುನನ್ನು ನೀವು ಎಲ್ಲಾದರೂ ಕಂಡರೆ ಎನಗೆ ಕರೆದು ತೋರಿರಿ ಎಂದು ವನದಲ್ಲಿರುವ ಚರಾಚರಗಳಿಗೆ ಸಂಭೋದಿಸಿ ಕೇಳುತ್ತಾಳೆ. ತನ್ನ ವಚನಗಳಲ್ಲಿ ಕಾವ್ಯಾಂಶಗಳಾದ ಅಲಂಕಾರಾದಿಗಳು ಬಳಸದಿದ್ದರೂ, ಮಧುರಭಕ್ತಿಯ ಆವೇಶದಲ್ಲಿ ಅಭಿವ್ಯಕ್ತಿಯಲ್ಲಿ ಒಂದರ ಹಿಂದೊಂದು ನುಸುಳಿಕೊಂಡು ಬರುವ ಉಪಮೆ, ರೂಪಕ, ದೃಷ್ಟಾಂತಾದಿಗಳಾದ ಅಲಂಕಾರಗಳನ್ನು, ಬಳಸಿದ್ದಾಳೆ. ಇವರ ಭಾವನಾತ್ಮಕವಾದ ವಚನಗಳು ಇಂದಿನ ಆಧುನಿಕ ಕವಿಗಳಿಗೆ ಪೂರಕವಾಗಿವೆ. ಆಧುನಿಕ ಕವಿಗಳಾದ ಪು.ತಿ.ನರಸಿಂಹಾಚಾರ್ಯರು ಸೃಷ್ಟಿಯ ಸೊಬಗಿನ ಬಗ್ಗೆ ಅನೇಕ ಗೀತೆಗಳನ್ನು ರಚಿಸಿದ್ದಾರೆ.

"ಸ್ಥಳಿಯ ಗಿರಿಯ ಚಲನದಾಸೆ,
ಮೂಕವನದ ಗಿರಿಗಳಾಸೆ.....
ಕಿರಣನೆಯ್ದು ಸರಿಗೆಯುಡಿಗೆ
ಇರುಳುಕೊಟ್ಟ ತಾರೆ ತೊಡಿಗೆ
ಇಂದು ಕಳೆಯ ಹೂವೆ ಮುಡಿಗೆ
ದೇವಕನ್ಯನಾ" ೧

ಎಂದು ಸೃಷ್ಟಿಯ ಸೌಂದರ್ಯವನ್ನು ತಮ್ಮ ಕಾವ್ಯದಲಲಿ ಭಾವಪೂರ್ವಕವಾಗಿ ವರ್ಣಿಸಿದ್ದಾರೆ. ನಮ್ಮ ಶರಣರು ಸೃಷ್ಟಿಯ ಸೊಬಗಿನಲ್ಲಿ ಭಾವುಕತೆಯ ಜೊತೆಗೆ ವೈಜ್ಞಾನಿಕತೆಯ ನಿಲುವನ್ನು ಸಹ ಕಾಣುವ ಗುಣ ಹೊಂದಿದ್ದರು, ಎನ್ನುವುದಕ್ಕೆ ಪೂರಕವಾಗಿದ್ದ ಅನೇಕ ವಚನಗಳು ನಮಗೆ ದೊರೆಯುತ್ತವೆ.

---

೧. ಡಾ. ಮೃತಂಜಯ- ಹೊಸಗನ್ನಡ ಕಾವ್ಯ ಸಂಗ್ರಹ-೨೦೦೯ ಪು.ಸಂ ೨೮

ಉದಾಃ ನೀರು, ನೆಲನಿಲ್ಲದೆ ಇರಬಹುದೇ ?

ಬೀಜ ನೆಲೆಯಿಲ್ಲದೆ ಹುಟ್ಟಬಹುದೇ ?

ಜ್ಞಾನ ಕ್ರಿಯೆ ಇಲ್ಲದೇ ಅರಿಯಬಹುದೇ ? ೧

ಇಂತಹ ವಚನಗಳಲ್ಲಿ ಅವರ ವೈಜ್ಞಾನಿಕ ಪ್ರಜ್ಞೆಯನ್ನು ಕಾಣುತ್ತೇವೆ. ಇವರು ಕ್ರಿಯೆ, ಜ್ಞಾನ, ಸಮನ್ವಯಕೆ. ಇವುಗಳಿಗೆ ಒತ್ತುಕೊಟ್ಟಿದ್ದರು ಕ್ರಿಯೆ ಇಲ್ಲದೆ ಜ್ಞಾನವಿಲ್ಲವೆಂದು ಹೇಳಿದ್ದಾರೆ. ಇಂತಹ ವೈಚಾರಿಕ ಔನತ್ಯ ಸಾಧಿಸಿಕೊಂಡು ಮಹಾದೇವಿಯಮ್ಮ ಪತಿಗೆ, " ನಿಮ್ಮ ಭಕ್ತಿಯ ಸೂತ್ರದಿಂದ ಎನ್ನ ಸ್ತ್ರೀಜಾತಿ ನಿಮ್ಮ ಪಾದದಲ್ಲಿ ಅಡಗಿತು, ಅನಗೆ ಭಿನ್ನವಾದ ಮಾತಿಲ್ಲ" ಎಂದು ಹೇಳುವುದನ್ನು ಗಮನಿಸಿದರೆ ಆಕೆಯ ಪತಿಭಕ್ತಿ ವಿನಯಗಳ ಸಹಾಕಾರ ಮೂರ್ತಿ ಆಗಿದ್ದಳೆಂದು ಹೇಳಬಹುದು.

"ಭಕ್ತಿಯ ವಿಳಂಬನೆಯನ್ನು ಹೀಗೆ ಹೇಳುತ್ತಾಳೆ,

ಉರ್ವಶಿ ಕರ್ಪುರವ ತಿಂದು ಎಲ್ಲರಿಗೆ ಮುತ್ತಕೊಟ್ಟಡೆ ಮುಚ್ಚುವರಲ್ಲದೆ

ಹಂದಿ ಕರ್ಪುರವ ತಿಂದು ಎಲ್ಲರಿಗೆ ಮುತ್ತು ಕೊಟ್ಟಡೆ ಮೆಚ್ಚುವರೆ,

ಹುಡುಹುಡು ಎಂದೆಟ್ಟುವರಲ್ಲದೆ ?

ನಡೆನುಡಿ ಶುದ್ಧವುಳ್ಳವರು ಪುರಾತನ ವಚನ ಓದಿದಡೆ

ಅನುಭಾವವ ಮಾಡಿದಡೆ ಮಚ್ಚುವರಲ್ಲದೆ

ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನವ ಓದಿದಡೆ

ಅನುಭಾವವ ಮಾಡಿದಡೆ ಮೆಚ್ಚುವರೆ ?

ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನವ ಓದಿದಡೆ

ಆ ಹಂದಿಗಿಂತ ಕರಕಷ್ಟ. " ೨

ಬಾಹ್ಯಾಡಂಬರದ ವ್ರತಾಚಾರ ಕಯಕೊಂಡು, ಪುರಾತನರ ವಚನ ಪಠನವನ್ನೆ ತಮ್ಮ ಹೊಟ್ಟೆ ಹೊರೆಯುವ ಸಾಧನವನ್ನಾಗಿ ಮಾಡಿಕೊಂಡ ಸ್ವಾರ್ಥಿಗಳನ್ನು ಕಟುವಾಗಿ ಟೀಕಿಸಿದ್ದಾಳೆ. ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನಗಳನ್ನು ಓದುವದಕ್ಕೂ ಅನರ್ಹರು: ಅವರು ಹಂದಿಗಿಂತ ಕನಿಷ್ಠರು, ಎಂದು ಹೇಳಿ ತೀಕ್ಷ್ಣ ವಿಡಂಬನೆಗೂ ತೊಡಗುತ್ತಾಳೆ.

"ಹಾಲಒಡಿದು ಬೆಣ್ಣೆಯನರಿಸಲುಂಟೆ ?" ನಿತ್ಯತೃಪ್ತಂಗೆ ವೈವೇದ್ಯದ ಹಂಗೇಕೆ ?" "ಬಂಜೆ ತಾಯಿಯ ಬೇನೆಯನರಿವಳೆ ?", "ಬಲತಾಯಿ ಮುದ್ದ ಬಲ್ಲಳೆ", "ನೊಂದವರ ನೋವ

೧. ಪ್ರೋ. ಎಚ್. ಎಂ. ಜೀಳಗಿ-ಶಿವಶರಣೆಯರ ಜೀವನ ಮತ್ತು ಸಾಧನೆ ೧೯೮೯ ಪು.ಸಂ ೬೬

೨. ಪ್ರೋ. ಎಚ್. ಎಂ. ಜೀಳಗಿ-ಶಿವಶರಣೆಯರ ಜೀವನ ಮತ್ತು ಸಾಧನೆ ೧೯೮೯ ಪು.ಸಂ ೬೭

ನೋಯದವರೆತ್ತ ಬಲ್ಲರೊ" ಔಚಿತ್ಯ ಪೂರ್ಣವಾದ, ಮಾರ್ಮಿಕವಾದ ಇಂತಹ ನುಡಿಗಳಿಂದಾಗಿ ಅಕ್ಕನ ಕಾವ್ಯ ಪ್ರತಿಭೆಯ ಅಗಾಧತೆ ಅಲ್ಲಲ್ಲಿ ಹೊರಹೊಮ್ಮಿದೆ. "ಕನ್ನಡ ಸಾಹಿತ್ಯದಲ್ಲಿ ಅಕ್ಕನ ವಚನಗಳಿಗೆ ಒಂದು ವಿನೂತನವು, ವಿಲಕ್ಷಣವು ಆದ ಸ್ಥಾನವಿದೆ ಅವುಗಳಲ್ಲಿ ಹಣ್ಣಿನ ಹೃದಯ, ಮನೆಬಳಕೆಯ ನುಡಿಗಡಣ, ತೀವ್ರ ವೈರಾಗ್ಯ, ದಿವ್ಯಾನುಭಾವದ ರಸೋತ್ಕಟತೆ ಮೈವಳೆದು ನಿಂತಿದೆ" ಎಂಬ ವಿಮರ್ಶಕರ ಮಾತನ್ನು ಇಲ್ಲಿ ಸ್ಮರಿಸಬಹುದು.

"ಈಳೆ, ನಿಂಬೆ, ಮಾವು, ಮಾದಲಕ್ಕೆ ಹುಳಿ ನೀರ ನೆರೆದವರಾರಯ್ಯ ಕಬ್ಬು, ಬಾಳೆ, ಹಲಸು, ನಾರಿವಾಳಕ್ಕೆ ಸಿಹಿನೀರ ನೆರೆದವರಾರಯ್ಯ? "ಇಂತಹ ವಚನಗಳಲ್ಲಿ ಸೃಷ್ಟಿಯ ವೈಚಿತ್ರ್ಯಗಳನ್ನು ಗುರುತಿಸುವ ಅಕ್ಕನ ಸೌಂದರ್ಯ ದೃಷ್ಠಿ ಪರಿಸರ ಪ್ರಜ್ಞೆ ಗಮನ ಸೆಳೆಯುತ್ತದೆ. ಅಕ್ಕಮಹಾದೇವಿ ಕೆಲವು ಬೆಡಗಿನ ವಚನಗಳನ್ನು ರಚಿಸಿದ್ದಾಳೆ.

"ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕೆ" ಸಾಂಕೇತಿಕವಾಗಿ ಮೂಡಿಬಂದ ಇಂತಹ ವಚನಗಳ ಅರ್ಥ ಸುಲಭಗ್ರಾಹ್ಯವಾಗಿಲ್ಲ. ಮೇಲ್ನೋಟಕ್ಕೆ ವ್ಯತಿರಿಕ್ತವಾಗಿ ಕಾಣುವ ಇಲ್ಲಿನ ಪ್ರತಿಮೆಗಳ ವಾಚ್ಯಾರ್ಥವನ್ನು ಮೀರಿ ಅನುಭವಾದ್ಯವಾದ ಲಕಾರ್ಥವನ್ನು ಪ್ರತಿಪಾದಿಸುತ್ತವೆ. ಇಂತಹ ವಚನಗಳನ್ನು ಅರ್ಥೈಸಲು ಪರಿಶ್ರಮ ಪಡಬೇಕಾಗುತ್ತದೆ.

ಬುಟ್ಟಜೀವಿ ಮುಕ್ತಾಯಕ್ಕನ ವಚನಗಳಲ್ಲಿ ಸಮಾಜಿಕ, ನೈತಿಕ ವಿಷಯಗಳಿಗಿಂತ ಬೌದ್ಧಿಕ, ತಾತ್ವಿಕ ವಿಷಯಗಳ ಪ್ರತಿಪಾದನೆಯೇ ಹೆಚ್ಚಾಗಿರುವುದು ಕಂಡುಬರುತ್ತದೆ. ಸುಮ್ಮನೆ ದಿನಕಳೆಯದೆ ವ್ಯರ್ಥ ಸಮಯಕಳೆಯದೆ, "ಮಾಡಬನ್ನಿ ದಿನ ಶಿವರಾತ್ರಿಯ ಕೇಳಬನ್ನಿ ಶೀವಾನುಭವವ" ಎಂದು ಶಿವಭಕ್ತರಿಗೆ ನಿತ್ಯ ಶಿವರಾತ್ರಿ ಆಚರಿಸಲು ಊಚಿಸಿದ ಮುಕ್ತಾಯಕ್ಕ ಜ್ಞಾನದ ಇಂಗಿತವನ್ನು ಹೀಗೆ ಸ್ಪಷ್ಟಪಡಿಸುತ್ತಾಳೆ.

"ಸಿಡಿಲು ಹೊಯ್ದ ಬಾವಿಗೆ ಸೋಪಾನವೇಕೊ
ನೆರೆಯರೆದ ಬಳಿಕ ಮತ್ತೆ ಮತಿ ಹುಟ್ಟಲುಂಟೆ ?
ಸೊಡರುಳ್ಳ ಮನೆಗೆ ಮತ್ತೆ ತಮಂಧವೆಂಬುದೇನೊ
ತನ್ನಲ್ಲಿ ತಾನು ತದ್ಗತವಾದ ಬಳಿಕ " ೧
ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲ ನೋಡಾ, ಎನ್ನ ಅಜಗಣ್ಣ ತಂದೆಗೆ.

ಅರಿವಿನ ಪೂರ್ಣತ್ವವನ್ನು ಸಂಪಾದಿಸಿಕೊಂಡ ಸಾಧಕನಿಗೆ ಇಹ-ಪರವೆಂಬುವುದಿಲ್ಲ; ಆತನ ಬದುಕೆಲ್ಲ ಜ್ಯೋತಿರ್ಮಯವಾಗುತ್ತದೆಂಬುದನ್ನು ಹೇಳುತ್ತ, ನಿಜವಾದ ಜ್ಞಾನ ಅವ್ಯಕ್ತವಾಗಿದ್ದು ಅನುಭವಕ್ಕೆ ಮಾತ್ರ ಗೋಚರವಾಗುವಂತಿರಬೇಕು ಎನ್ನುತ್ತಾಳೆ.

---

೧. ಪ್ರೋ. ಎಚ್. ಎಂ. ಬೀಳಗಿ-ಶಿವಶರಣೆಯರ ಜೀವನಮತ್ತು ಸಾಧನೆ ೧೯೮೯; ಪು.ಸಂ ೪೮

ವ್ರತಸ್ಥನಾದವ 'ಬೆಳ್ಳಿ, ಭುಗಿ, ನುಗ್ಗಿ, ಉಳ್ಳೆ' ಮೊದಲಾದವುಗಳನ್ನು ಬಿಡಬೇಕು. "ಇದಿರ ಬಯಕೆಯ ಬಿಟ್ಟು ತನ್ನ ತಾನರಿಯಬೇಕು." ವ್ರತಹೀನರನ್ನು ಎಂದು ಬೆರೆಯಕೂಡದು: ತಾನಲ್ಲದೆ ತನ್ನ ಮಡದಿ, ಮಕ್ಕಳು, ಸಂಬಂಧಿಕರೂ ಆ ವ್ರತಗಳನ್ನು ಅನುಸರಿಸುವಂತೆ ಮಾಡಬೇಕು ಎಂದು ಹೇಳಿದ ಆಕೆ. "ವ್ರತವಿಲ್ಲದ ಗುರುವ ಪೂಜಿಸಲಾಗದು; ವ್ರತ.ವಿಲ್ಲದ ಜಂಗಮದ ಪ್ರಸಾದವ ಕೊಳಲಾಗುವದು; ವ್ರತವಿಲ್ಲದವರ ಅಂಗಳವ ಮೆಟ್ಟಲಾಗದು." ಎಂದಸು ಎಚ್ಚರಿಸುತ್ತಾಳೆ. ಅರಿವಿಲ್ಲದ ಆಚರಣೆ, ಅಜ್ಞಾನದ ಕರ್ಮಬಂಧನವಲ್ಲಿ ಸಿಲುಕಿದವರನ್ನು, ಅಹಂಭಾವಿಗಳಾದ ಹಿರಿಯರನ್ನು ಕಂಡಾಗ ಅಬ್ಬರಿಸುತ್ತಾಳೆ.

" ಬತ್ತಲೆಯಿದ್ದವರೆಲ್ಲ ಕತ್ತೆಯ ಮರಿಗಳು
ತಲೆಬೋಳಾದವರೆಲ್ಲ ಮುಂಡೆಯ ಮಕ್ಕಳು."

ನೈತಿಕ ನಿಯಮಗಳ, ಧಾರ್ಮಿಕ ವಿಧಿ-ವಿಧಾನಗಳ ಯಾಂತ್ರಿಕ ಅನುಸರಣೆ ಮಾತ್ರವಲ್ಲ; ಅಂಗಕ್ರಿಯೆಗಳು ಲಿಂಗಕ್ರಿಯೆಗಳಾಗುವಂತೆ ಅಂತರಂಗದ ಅರಿವು ಮತ್ತು ಆಚರಣೆಗಳನ್ನು ಸಮನ್ವಯಿಸಿಕೊಳ್ಳಬೇಕೆಂಬ ನಿಲುವು ಅಕ್ಕಮ್ಮನದು. ಅರಿತು ಶ್ರದ್ಧಾಪೂರ್ವಕವಾಗಿ ಆಚರಿಸಿದಾಗಲೆ ಆ ಆಚರಣೆ ಬ್ರಹ್ಮಮಯವಾಗುವುದೆಂಬ ನಂಬಿಕೆ ಆಕೆಯದು. ಅಂತೆಯೆ "ವೇಷವೆಲ್ಲಿರದು ? ಸೂಳೆಯಲ್ಲಿ, ಡೊಂಬರಲ್ಲಿ, ಬೈರೂಪಿಗಳಲ್ಲಿ ಇರದೆ ? ವೇಷವ ತೋರಿ ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದು ? ಎಂದು ವೇಷಧಾರಿ ಭಕ್ತರನ್ನು ಜರೆದು ವಿಡಂಬಿಸುತ್ತಾಳೆ.

"ಕೊಲ್ಲುವವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ" ಎಂದು ಹೇಳಿದ ಬಸವಣ್ಣನವರು, ವ್ಯಕ್ತಿಯ ಗುಣ ಶೀಲಾದಿಗಳಿಗೆ ಮಹತ್ವಕೊಟ್ಟರು. ಒಂದೆಡೆ ಅಕ್ಕಮಹಾದೇವಿ ಹೀಗೆ ಹೇಳುತ್ತಾಳೆ:

"ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಯ ಕೊಂದು ನಲಿನಲಿದಾಡುವ.
ತನ್ನ ಮನೆಯಲೊಂದು ಶಿಶು ಸತ್ತಡೆ
ಅದಕ್ಕೆ ಮರಗುವಂತೆ ಅವಕೇಕೇ ಮರುಗ ? ೧

ಎಂದು ಪ್ರಶ್ನಿಸಿ "ಜೀವಹಿಂಸೆ ಮಾಡುವ ಮಾದಿಗರನೇನೆಂಬೆಯ್ಯಾ" ಎಂದಿದ್ದಾಳೆ. "ಉರಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಕುರಿ, ಕೋಳಿ, ಕಿರಿ ಮೀನು, ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು. ಶಿವಗೆ ಪಂಚಾಮೃತವ ಕರೆವ ಪಶುವ ತಿಂಬಮಾದಿಗ ಕೀಳು

೧. ಪ್ರೊ. ಎಚ್. ಎಂ. ಬೀಳಗಿ-ಶಿವರಣೆಯರ ಜೀವನ ಮತ್ತು ಸಾಧನೆ೧೯೮೯ ಪು.ಸಂಖ್ಯೆ: ೧೩೭

ಜಾತಿಯೆಂಬರು. ಅವರೆಂತು ಕೀಳಜಾತಿಯಾದಾರು ? ಜಾತಿಗಳೆ ನಿವೇಕೆ ಕೀಳಾದಿರೊ?" ಎನ್ನುತ್ತಾಳೆ. ಯಾವ ಜಾತಿ, ಯಾವ ವೃತ್ತಿಯು ಕೀಳಲ್ಲ. ಹುಟ್ಟಿನಿಂದ ಯಾರು ಕೀಳಾಗಲಾರರು. ನಡೆ-ನುಡಿ, ಆಚಾರ-ವಿಚಾರಗಳ ಮೇಲಿಂದ ವ್ಯಕ್ತಿಯ ಮೇಲ್ಮೆ ಅಥವಾ ಕೀಳರಿಮೆಯನ್ನು ಗುರುತಿಸಬೇಕೆ ವಿನಃ, ಆತ ಹುಟ್ಟಿದ ಜಾತಿಯ ಮೇಲಿಂದ ಅಲ್ಲ ಎಂಬ ವಾಸ್ತವಿಕ ಅಂಶವನ್ನು ಶರಣೆಯರು ಮುಂದಿಟ್ಟರು.

ಮಾತಿಗೆ ಮೀರಿದ ಸೂಕ್ಷ್ಮ ಅನುಭವಗಳನ್ನು-ಅನುಭವವನ್ನು, ತಾತ್ವಿಕವಿಚಾರಗಳನ್ನು ಅಭಿವ್ಯಕ್ತಿಸುವ ಮಾಧ್ಯಮವಾಗಿ ಜನಭಾಷೆಯನ್ನು ದುಡಿಸಿಕೊಂಡ ಶ್ರೇಯಸ್ಸು ಶರಣ-ಶರಣೆಯರಿಗೆ ಸಲ್ಲುತ್ತದೆ. ಷಟಸ್ಥಲ, ಅಷ್ಟಾವರಣ, ಪಂಚಾಚಾರ ಮುಂತಾದ ಧಾರ್ಮಿಕ ಪರಿಕರಗಳ ವಿವೇಚನೆ ಅವಿನಾಭಾವ ಸಂಬಂಧ, ಸೃಷ್ಟಿ, ಶಿವಸ್ವರೂಪಗಳ ಚಿಂತನೆಯನ್ನು ಮಾಡಿದರು. ಶರಣೆಯರು ಕೊಡುವ ಶಿವಸ್ವರೂಪದ ಕಲ್ಪನೆ ಇದು.

ಅನುಬಂಧಗಳು

೧. ಶಬ್ದಕೋಶ

೨. ಗ್ರಂಥ ಋಣ

೩. ಛಾಯಾ ಚಿತ್ರಗಳು

ಅನುಬಂಧ

೧) ಶಬ್ದಕೋಶ

ಅ

ಅನುಸರಣೆ	–	ಹಿಂಬಾಲಿಸುವಿಕೆ,
ಅನೃತ	–	ಸುಳ್ಳು
ಅಮಳೋಕ್ಯ	–	ಗಂಟಲು
ಅರಕೆಗೆಡು	–	ಕೊರತೆಯಿಲ್ಲವಾಗು
ಅರತ	–	ಬತ್ತಿದ, ಹಿಂತದ
ಅರತುಹೋಗು	–	ಒಣಗಿಹೋಗು
ಅರಲುಗೊಳ್ಳು	–	ಒಣಗು, ಬತ್ತು
ಅರಸು	–	ಹುಡುಕು
ಅರಿದು	–	ಆಶ್ಚರ್ಯ, ಅಸಾಧ್ಯ
ಅರೆ	–	ಬಂಡೆಗಲ್ಲು

ಆ

ಆಣತಿ	–	ಅಪ್ಪಣೆ, ಆಜ್ಞೆ
ಆತುರ	–	ಗಡಿಬಿಡಿ, ಅವಸರ
ಆದರಿಕೆ	–	ಗೌರವ
ಆಪ್ಯಾಯನ	–	ತೃಪ್ತಿ
ಆಮಳಕ	–	ನೆಲ್ಲಿಕಾಯಿ
ಆಮಿಷ	–	ವಿಷಯಾಪೇಕ್ಷೆ
ಆಯು	–	ಆಯುಷ್ಯ
ಆರಡಿಗೊಳ್ಳು	–	ಆವರಿಸು
ಆರತ	–	ಸಂತೋಷ, ಪ್ರೀತಿ
ಆರೂಢ	–	ಜ್ಞಾನದ ಉನ್ನತ ನಿಲುವು

ಇ

ಇಂಗಳ	–	ಬೆಂಕಿ, ಕೆಂಡ

ಇಂಬು	–	ಅವಕಾಶ
ಇಕ್ಕಲಿಸು	–	ಒಟ್ಟುಗೂಡಿಸು
ಇಕ್ಕು	–	ನೀಡು, ಎಡೆಮಾಡು
ಇಕ್ಕೆ	–	ವಾಸಸ್ಥಳ ಮನೆ
ಇಕ್ಷುದಂಡ	–	ಕಬ್ಬು
ಇಟ್ಟೆಡೆ	–	ಇಕ್ಕಟ್ಟು
ಇಡು	–	ಹೊಡೆ
ಇತರೇತರ	–	ಪರಸ್ಪರ, ಅನ್ಯೋನ್ಯ ಭೇದ,
ಇಪ್ಪೆ	–	ಒಂದು ತರದ ಮುಳ್ಳು ಕಂಟಿ
ಈಯು	–	ಕೊಡು
ಈರೇಳು	–	ಹದಿನಾಲ್ಕು
ಈರೇಳು ಭುವನ	–	ಹದಿನಾಲ್ಕು ಲೋಕ
ಈಸು	–	ಇಷ್ಟು, ಸ್ವಲ್ಪ

ಉ ಊ

ಉಚ್ಚರಣೆ	–	ಹೊಯ್ದಾಟ
ಉಡುಗು	–	ಕಡಿಮೆಯಾಗು, ಮುಚ್ಚು,
ಉತ್ತರಪಥ	–	ಬ್ರಹ್ಮರಂಧ್ರ ಮಾರ್ಗ
ಉತ್ತು	–	ಹರಗು
ಉತ್ಪತ್ತಿ	–	ಹುಟ್ಟು
ಉದರ	–	ಹೊಟ್ಟೆ
ಉದ್ಗತ	–	ಹೊರಬಂದ
ಉದ್ದಂಡವೃತ್ತಿ	–	ಗರ್ವ, ಅಹಂಕಾರ
ಉದಾಸಿ	–	ನಿರ್ಲಿಪ್ತ
ಉದುಮದ	–	ಅತಿಶಯವಾದ ಮದ
ಊಡು	–	ಉಣಿಸು, ತಿನಿಸು
ಊಣೆಯ	–	ಕುಂದು, ಕೊರತೆ
ಊಳಿಗ	–	ಸೇವೆ

ಎ, ಏ, ಐ

ಎಕ್ಕಲ – ಹಂದಿ

ಎಗ್ಗ – ಹುಂಬ

ಎಡರು – ತೊಂದರೆ

ಎಡೆಗೋಲು – ಅಡ್ಡಗೋಲು, ಗಿಡೆಗೋಲು

ಎಯಿದೆ – ಚೆನ್ನಾಗಿ

ಎಯ್ದಿಸು – ತಲುಪಿಸು, ಮುಟ್ಟಿಸು

ಎಯ್ದು – ಹೊಂದು, ಧರಿಸು

ಎರಗು – ಮನಸ್ಸುಹರಿ

ಎರೆ – ಮಣ್ಣು

ಎಲವದಮರ – ಬೂರಲಮರ

ಏಕೀಕರಿಸು – ಒಂದುಗೂಡಿಸು

ಏಡಿಸು – ಅಣಕಿಸು, ಹೀಚುಯಾಳಿಸು

ಏಣ – ಚಿಗರಿ

ಏಣಾಂಕ – ಚಂದ್ರ, ಶಿವ

ಏರಿ – ಒಡ್ಡು

ಏರು – ಗಾಯ, ಪೆಟ್ಟು

ಏಹೆ – ಏಂ ಅಹೆ, ಏನಾಗುವೆ

ಐದು – ಹೊಂದು, ಪಂಚೆಂದ್ರಿಯ,

ಒ, ಓ

ಒಚ್ಚತ – ತೃಪ್ತಿಕರ, ಹಿತಕರ

ಒಚ್ಚತವೋಗು – ನಂಬು, ನಚ್ಚು

ಒಚ್ಚತ್ತು – ಒಂದು ಸಲ

ಒಚ್ಚರಿಸು – ಹಾರು, ಪುಟಿ

ಒಜ್ಜರಿಸು – ಪುಟಿ, ಜಿಗಿ

ಒಡ್ಡಣೆ – ಮೋಡದ ಸಮೂಹ

ಒತ್ತರಿಸು	–	ಒಂದುಗೂಡಿಸು
ಒತ್ತೆ	–	ಅಡವು ಸೂಳೆಗೆ ಕೊಡುವ ಹಣ
ಒಪ್ಪಚ್ಚಿ	–	ಪ್ವಲ್ಪ, ತುಸು
ಒಮ್ಮನ	–	ಒಚಿದೆ ಮನಸ್ಸು, ಅಳತೆ
ಓ	–	ಮೆಚ್ಚುಗೆ
ಓಗರ	–	ಅನ್ನ
ಓಲಾಡು	–	ಈಸು, ಸಂತೋಷಪಡು
ಓಲೈಸು	–	ಸೇವಿಸು
ಓಸರಿಸು	–	ಓರೆಯಾಗು, ಹಿಂದೆಸರಿ

ಕ

ಕಂಗಳಸೋನೆ	–	ಕಣ್ಣೀರು
ಕಂಗೆಡು	–	ಬುದ್ಧಿಭ್ರಂಶವಾಗು,
ಕಂಗೊಳಿಸು	–	ಹೊಳೆ, ಪ್ರತ್ಯಕ್ಷಗೊಳಿಸು
ಕಂದಲ	–	ಮಣ್ಣಿನಪಾತ್ರೆ, ತಲೆಬುರುಡೆ
ಕಂಥೆ	–	ಹರಕುಬಟ್ಟೆ
ಕಂಬಳ	–	ದಿನಗೂಲಿ
ಕಟಕ	–	ಮೋಸ, ಕಪಟ
ಕಟಿಹಾದ	–	ಸೀಳಿದ, ಒಣಗಿದ
ಕಟ್ಟು	–	ನಿಯಂತ್ರಣ, ಅಂಕಿತ
ಕಟ್ಟೋಗರ	–	ರುಚಿಯಾದ ಬುತ್ತಿ

ಖ

ಖಳ	–	ನಾಲ್ಕು (ದ್ಯೂತಪರಿಭಾಷೆ)

ಗ

ಗಡಣ	–	ಸಮೂಹ
ಗನ್ನ	–	ಮೋಸ
ಗರುವ	–	ಶ್ರೇಷ್ಠ
ಗುರುಗಂಜಿ	–	ಗುಲಗಂಜಿ
ಗುಲ್ಮ	–	ಪೂಜೆ

ಗುಹ್ಯ – ಗುಪ್ತಾಂಗ

ಗೊಂದಣ – ಗದ್ದಲ, ಗೊಂದಲ

ಘ

ಘಟ – ದೇಹ

ಘನ – ಪರವಸ್ತು

ಘಾತ – ಆಳ

ಘೃತ – ತುಪ್ಪ

ಚ

ಚತುಷ್ಪಾದಿ – ನಾಲ್ಕು ಕಾಲಿನ ಪ್ರಾಣಿ

ಚರ – ಜಂಗಮ

ಚರಣಾಯುಧ – ಕೋಳಿ

ಚುನ್ನ – ನಿಂದೆ, ಅಪವಾದ

ಚುಳುಕು – ಅಂಗೈಯ ತಗ್ಗುಭಾಗ, ಚಿಕ್ಕದು

ಚೂರ್ಣ – ಸುಣ್ಣ

ಚೋಹ – ವೇಷ

ಜ

ಜಂಗುಳಿ – ಗುಂಪು, ಸಮೂಹ

ಜಂಜಡ – ತೊಂದರೆ, ಚಿಂತೆ

ಜಂಬೂಕ – ನರಿ

ಜಕ್ಕವಕ್ಕಿ – ಚಕ್ರವಾಕ ಪಕ್ಷಿ

ಜಗುಳಿಕೆ – ಕುಸಿ, ಬೀಳು

ಜಜ್ಜರಿಸು – ಬಲಗುಂದು, ನುಚ್ಚು ನೂರಾಗು

ಟ ಠ ಡ

ಟೊಣೆ – ಮೋಸಮಾಡು, ಹಾರಿಬಡಿ

ಠಕ್ಕುಟವುಳು – ಮರೆಮೋಸ

ಠಾವು – ಸ್ಥಳ

ಡಾವರ – ದಾಹ, ಬೇಗೆ

ಡೊವಿಗೆ – ತಲೆ ಬುರುಡೆ, ಕಪಾಲ

ಥಾಳಕ	–	ಧೂರ್ತ, ಜಾಣ
ಥಾಳಕತನ	–	ಡಂಭಾಚಾರ

ತ

ತಂಡುಲ	–	ಅಕ್ಕಿ
ತಕ್ಕೈ	–	ಅಲಿಂಗನ
ತಟಾಕ	–	ಕೆರ
ತಟ್ಟು ಮುಟ್ಟು	–	ದ್ವಂದ್ವಾನುಭಾವ, ಸುಖದುಃಖ
ತಡೆ	–	ನಿಲ್ಲಿಸು
ತತಿ	–	ಸಮೂಹ
ತನಿರಸ	–	ಮಧುರ ರಸ
ತರಿ	–	ಕಡಿ, ಕತ್ತರಿಸು
ತಿಗುಡು	–	ಮರದ ತೊಗಟೆ
ತಿಟ್ಟು	–	ದಿನ್ನೆ
ತಿಬ್ಬಳ	–	ಕೊಳ್ಳ
ತಿಲ	–	ಎಳ್ಳು
ತುಯಿ	–	ಜಗ್ಗು, ಸೆಳೆ
ತುಷ್ಟಿ	–	ತೃಪ್ತಿ, ಆನಂದ
ತೈಲ	–	ಎಣ್ಣೆ
ತೃಣ	–	ಹುಲ್ಲುಕಡ್ಡಿ, ಸಣ್ಣದು
ತ್ರಿಕರಣ	–	ಮನ, ವಚನ, ಕಾಯ
ತ್ರಿಕೂಟ	–	ಭ್ರೂಮಧ್ಯ, ಇಡಾಪಿಂಗಳ
ತ್ರಾಣ	–	ರಕ್ಷಣೆ, ಶಕ್ತಿ

ದ

ದಂದುಗ	–	ಕಷ್ಟ, ತಾಪ
ದಣಿಯಲೆರೆ	–	ತೃಪ್ತಿಯಾಗುವವರೆಗೆ ನೀಡು
ದಧಿ	–	ಮೊಸರು
ದರ್ಪಣ	–	ಕನ್ನಡಿ
ದಸರಿದೊಡಕು	–	ಬಿಡಿಸಬಾರದ ರೇಶಿಮೆ ಗಂಟು

ದಾಯ	–	ಪಾಲು, ಲಾಭ
ದಾರವಂದ	–	ಬಾಗಿಲು
ದಾವಾನಳ	–	ಕಾಳ್ಗಿಚ್ಚು

ನ

ನಂದಿ	–	ಐದು (ದ್ಯೂತ ಪರಿಭಾಷೆಯಲ್ಲಿ)
ನಖ	–	ಉಗುರು
ನನ್ನಿ	–	ಸತ್ಯ, ನಿಜ
ನಯನ	–	ಕಣ್ಣು
ನಷ್ಟಮೂಲ	–	ಬೇರು ನಷ್ಟವಾದ
ನಾಣ	–	ಗುಹ್ಯೇಂದ್ರಿಯ
ನಾರಂಗ	–	ತೆಂಗು
ನಿಧಾನಿಸು	–	ಸ್ಥಿರತ್ವಗೊಳ್ಳು, ಪರಿಪೂರ್ಣ ತೆಗೇರು
ನಿಃಪತಿಯಾಗು	–	ಮಾಗು, ಒಂದುಗೂಡು
ನಿಃಪ್ರಪಂಚಿಕ	–	ಸಂಸಾರದ ಜಂಜಡವಿಲ್ಲದವ
ನಿಬಟ್ಟಿಸು	–	ಒರೆಗೆ ಹಚ್ಚು
ನಿಬ್ಬೆರಗು	–	ಅತ್ಯಾಶ್ಚರ್ಯ
ನಿರ್ಭರಿತ	–	ತೆರವಾದ

೨) ಆಧಾರ ಗ್ರಂಥಗಳು

೧. ಲೇ: ಪ್ರೋ. ಎಚ್. ಎಂ. ಬೀಳಗಿ
ಕೃತಿಃ ಶಿವಶರಣೆಯರ ಜೀವನ ಮತ್ತು ಸಾಧನೆ
ಪ್ರಕಾಶಕರು: ಸಮಾಜ ಪುಸ್ತಕಾಲಯ, ಶಿವಾಜೀ ಬೀದಿ ಧಾರವಾಡ
ಪ್ರಥಮ ಮುದ್ರಣ ಃ ೧೯೮೯

೨. ಸಂಪಾದಕರುಃ ಡಾ. ಎಲ್. ಬಸವರಾಜ ೦೦೦೦೦೦೦೦೦
ಕೃತಿಃ ಅಕ್ಕನ ವಚನಗಳು
ಪ್ರಕಾಶಕರುಃ ಗೀತಾ ಬುಕ್ ಹೌಸ, ಮೈಸೂರು
ಪರಿಷ್ಕೃತ ಏಳನೆಯ ಮುದ್ರಣ ೧೯೯೭

೩. ಲೇ: ಪ್ರೋ. ಕೆ. ಭೈರಪ್ಪ ಎಂ. ಎ.
ಕೃತಿ: ನಮ್ಮ ಪರಿಸರ
ಪ್ರಕಾಶಕರು: ಜೈಜಗತ್ ಪ್ರಕಾಶನ, ಮಾಯಾಸಂದ್ರ ತುಮಕೂರ.
ಪ್ರಥಮ ಮುದ್ರಣ : ಮೇ ೨೦೦೦

೪. ಸಂಪಾದಕರು: ಯಶೋದಮ್ಮ ಸಿದ್‌ಬಟ್ಟೆ
ಕೃತಿಃ ಸಾಹಿತ್ಯ ಸೌರಭ
ಪ್ರಕಾಶಕರುಃ ಜಾಣಗೆರೆ ಮುದ್ರಣ, ಶಿವನಗರ ಬೆಂಗಳೂರು
ಪ್ರಥಮ ಮುದ್ರಣ: ೨೦೦೩

೫. ಲೇ: ಡಾ. ಮ. ನ. ಜವರಯ್ಯ
ಕೃತಿಃ ದಲಿತವರ್ಗದ ಶರಣ ಮತ್ತು ಶರಣೆಯರು
ಪ್ರಕಾಶಕರು: ಸಿದ್ಧಾರ್ಥ ಗ್ರಂಥ ಮಾಲೆ, ಕುವೆಂಪು ನಗರ, ಮೈಸೂರು
ಮೊದಲ ಮುದ್ರಣ: ೧೯೯೭

೬. ಸಂಪಾದಕರು: ಡಾ. ಎಂ. ಎಂ. ಕಲಬುರ್ಗಿ
ಕೃತಿಃ ಶಿವಶರಣೆಯರ ವಚನ ಸಂಪುಟ
ಪ್ರಕಾಶಕರು: ಗುರುದತ್ ಪ್ರಿಂಟರ್ಸ್ ಮೈಸೂರು ರಸ್ತೆ, ಬೆಂಗಳೂರು.
ಮುದ್ರಣ ಃ ೧೯೯೩

೭. ಶಿವಶರಣೆಯರ ವಚನಗಳು
ಸಂ. ಡಾ: ಆರ್. ಸಿ. ಹಿರೇಮಠ

೮. ವಚನಧರ್ಮಸಾರ
ಶ್ರೀ ಎಂ. ಆರ್. ಶ್ರೀ.

೯. ಶಿವಶರಣೆಯರ ಚರಿತ್ರೆಗಳು
ಡಾ: ಫ. ಗು. ಹಳಕಟ್ಟಿ

೧೦. ಕರ್ನಾಟಕ ಕವಿಯಿತ್ರಿಯರು
ಡಾ: ಸರೋಜಿನಿ ಮಹಿಷಿ

೧೧. ವಚನ ಸಾಹಿತ್ಯದ ವೈಚಾರಿಕ ಅಧ್ಯಯನ
ಡಾ: ಎಚ್. ತಿಪ್ಪೇರುದ್ರಸ್ವಾಮಿ

೧೨. ಅವಿರಳಜ್ಞಾನಿ ಚೆನ್ನಬಸವಣ್ಣ
ಡಾ: ಎಚ್. ತಿಪ್ಪೇರುದ್ರಸ್ವಾಮಿ

೧೩. ವಚನ ಸಾಹಿತ್ಯ
ಡಾ: ಎಂ. ಚಿದಾನಂದ ಮೂರ್ತಿ

೧೪. ಕನ್ನಡ ಸಾಹಿತ್ಯದ ಇತಿಹಾಸ
ಡಾ: ರಂ. ಶ್ರೀ. ಮುಗಳಿ

೧೫. ಶರಣಚರಿತಾಮೃತ
ಡಾ: ಸಿದ್ಧಯ್ಯ ಪುರಾಣಿಕ

೧೬. ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭು
ಡಾ: ಎಂ. ಎಸ್. ವೃಷಭೇಂದ್ರ ಸ್ವಾಮಿ

೧೭. ಕನ್ನಡ ಸಾಹಿತ್ಯ ಚರಿತ್ರೆ
(ಸಂ. ೪,೫) ಮೈ. ವಿ. ವಿ.

೧೮. ಶಾಸನಗಳಲ್ಲಿ ಶಿವಶರಣರು
ಡಾ: ಎಂ. ಎಂ. ಕಲಬುರ್ಗಿ

೧೯. ಶಿವದಾಸ ಗೀತಾಂಜಲಿ
ಡಾ: ಎಲ್. ಬಸವರಾಜು

೨೦. ಕನ್ನಡ ಜಾನಪದ ಗೀತೆಗಳು
ಡಾ: ಗದ್ದಗಿಮಠ

೨೧. ಶೂನ್ಯ ಸಂಪಾದನೆಯ ವಿವರಣಾತ್ಮಕ ಪರಿಚಯ
ಡಾ: ಎಚ್. ತಿಪ್ಪೇರುದ್ರಸ್ವಾಮಿ



6105

ಪರಿಸರದ ಮಧ್ಯ ಅಕ್ಕಮಹಾದೇವಿ



ಕಾಯಕಯೋಗಿನಿ ಆಯ್ದಕ್ಕಿ ಲಕ್ಕಮ್ಮ



ಮುಕ್ತಾಯಕ್ಕನ ತೋಡೆಯ ಮೇಲೆ ಲಿಂಗೈಕ್ಯನಾದ ಅಜಗಣ್ಣ

ಅಮ್ಮುಗೆಯ ರಾಯಮ್ಮ



ಧೀರಮಾತೆ ನಾಗಲಾಂಬಿಕೆ






ದಾಸೋಗದ ಕಾಯಕದಲ್ಲಿ ಮೊಳಗೆ ಮಹಾದೇವಿ



ಸತ್ಯ ಶಿವಶರಣೆ ಸತ್ಯಕ್ಕೆ


ಶಿವಶರಣೆಯರು
ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ವಚನಗಳು